# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್ 2026




ವಾಟ್ಸನ್, ಮತ್ತೆ ಇಂಪಾರ್ಟೆನ್ಟ್ ಕ್ಲೂನೇ
ಯಾರೋ ಸುಟ್ಟುಹಾಕ್ಬಿಟ್ಟಿದಾರೆ !!!

ಬಿಡಿ ಪ್ರತಿ: ರೂ. 10/–

NANKI
CONVENTION HALL

# *Premium*
# WEDDING VENUE

Elevate your events at Nanki Convention Hall.

A stylish and comfortable venue perfect for Weddings, Receptions, Conferences.

## Accessibility

- 1 km from Bus Stand
- 5 km from Airport
- 4 km from Railway Station

Airport Road
Hubli - Karnataka










+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO**
**DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**
Marketing/Finance/HRM/
Business Analytics

## TWO YEAR FULL TIME MBA DEGREE AT BENGALURU

# ADMISSION OPEN

**2026-2028**

A distinguished standalone B-School in Bengaluru situated in the heart of the city.





### WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

**ADMISSION PROCESS**
Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**
+91 99022 52842 / 99022 52981

www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 43
ಸಂಚಿಕೆ – 07
ಏಪ್ರಿಲ್–2026

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ಅವಿಸ್ಮರಣೀಯ ನಗೆಗಾರರು – 9 | ಶಿವಕುಮಾರ್ | 3 |
| ಹಂಡಾಹುಂಡಿ ಗುಂಡ | ಪುಷ್ಪಲತ. ಟಿ.ಜಿ | 8 |
| ಥ್ಯಾಂಕ್ಸ್...ಮಂಗಣ್ಣಾ...! | ವಿ.ವಿಜಯೇಂದ್ರ ರಾವ್ | 10 |
| ಕೇಡು ಪ್ಯಾಕೇಟು, ಹಿಟ್ಟಿನ ಗುಟ್ಟು | ಸುಮನಾ | 11 |
| ಬೇತಾಳಮ್ಮನ ಪ್ರಿಯರಿಗಾಗಿ | ಶಾಂತಾನಾಗರಾಜ್ | 12 |
| ಪುಸ್ತಕ ಪರಿಚಯ | | 16 |
| ನಮ್ಮ ತಂದೆತಾಯಿಗಳು...... | ಪ್ರಮೋದ್ ಕುಲಕರ್ಣಿ | 17 |
| ಬಿಸಿಸಿಐ ನ ಮುಂದಿನ ಪ್ಲಾನ್ | ಇ.ಆರ್. ರಾಮಚಂದ್ರನ್ | 18 |
| ತುಂತುರು | ದಂನಆ | 22 |
| ಈ ಬೆಂಗಳೂರು ನಮಗಲ್ಲ | ಪಾಲಹಳ್ಳಿ ವಿಶ್ವನಾಥ್ | 23 |
| ಮೊಬೈಲ್ ರಿಂಗಣಿಸದಿದ್ದಾಗ............!? | ಎನ್.ವ್ಹಿ. ರಮೇಶ್ | 28 |
| ನಿದ್ರಾ ಯೋಗ ಮತ್ತು ಮುಕ್ತ ವಿವಿ | ನಂದಿನಿ ಹೆದ್ದುರ್ಗ | 34 |
| ಮಾಸ್ತಿ ಅವರ ಕನ್ನಡ ಪ್ರೇಮ | ಸುಕೇಶವ | 39 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

"ನಿರ್ಬಂಧಿತ ಸ್ಥಳದಲ್ಲಿ ಪ್ರಾರ್ಥನೆ ಸಲ್ಲ."

– ಮುಂಬೈ ನ್ಯಾಯಾಲಯ

ಭಗವಂತ ಅಚ್ಚರಿಗೊಂಡನಂತೆ !!

* * * *

ನಿಮ್ಹಾನ್ಸ್ : ದಾಖಲೆ ಸಂಖ್ಯೆಗಳಲ್ಲಿ ರೋಗಿಗಳ ಆಗಮನ

– ದಿನಪತ್ರಿಕೆ

ಈಸ್ ದಿಸ್ ಗುಡ್ ನ್ಯೂಸ್ ಆರ್ ಬ್ಯಾಡ್ ನ್ಯೂಸ್
ಅಂತ ಚಕಿತಗೊಂಡಳಂತೆ ಅಪರಂಜಿ !!

* * * *

"ನೂರು ಕೋಟಿಗೂ ಮೀರಿದ ಡಿಜಿಟಲ್ ಚಿನ್ನ ಹೂಡಿಕೆ."

– ಸುದ್ದಿ

ಒಬ್ಬ ನಯವಂಚಕನಿಗೆ ನೂರು ಬೆಪ್ಪರು ಎಂಬುದೇ
ವಿಧಿ ನಿಯಮ !!

* * * *

"ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ"
ಉತ್ತರಿಸುವ ಮನೋಭಾವ ??

* * * *

ಕ್ವಾಂಟಮ್ ನೀಲಿ ನಕ್ಷೆಗೆ ಹತ್ತು ಕೋಟಿ : ದಿಟ್ಟ ಹೆಜ್ಜೆ

–ಪತ್ರಿಕೆ

ನಮಗೂ ಹಾಗೇ ಅನ್ನಿಸುತ್ತೆ !!

* * * *

ಟಿ 20 ಫೈನಲ್ಸ್ ನಲ್ಲಿ ವಿಜಯ ಪತಾಕೆ ಹಾರಿಸಿದ
ಭಾರತದ ಆಟಗಾರರೆಲ್ಲರಿಗೂ ಅಪರಂಜಿಯ
ಶುಭಾಶಯಗಳು !!

* * * *

ಮಹಾಸಮರವೆಂಬ ಘೋರಮಾರಿಯ ತಾಂಡವ ನೃತ್ಯ
ಇನ್ನಾದರೂ ಸ್ಥಗಿತಗೊಳ್ಳಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ !!

* * * *

●

ಅವಿಸ್ಮರಣೀಯ ನಗೆಗಾರರು–9

# ಡಾ॥ ಬಿ.ಆರ್. ನಾರಾಯಣ ಐಯ್ಯಂಗಾರ್ (ಬೀರಣ್ಣ)

ಶಿವಕುಮಾರ್



"ಬ್ರಹ್ಮೇಂದ್ರ ಭವನದ ಮೂರನೆಯ ಮಹಡಿಯ ಭೀಮಣ್ಣನಿಗೂ, ವಿರಾಟ ಭವನದ ಮಲ್ಹಾರಿರಾಯರಿಗೂ ಏನು ಸಂಬಂಧ?" ಅಂತ ಯಾರಾದರೂ ಪ್ರಶ್ನಿಸಿದರೆ, ಸಂವೇದನಾ ಶೀಲ, ರಸಿಕ ಓದುಗರು "ಅದೇನು ಮಹಾ! ಇಬ್ಬರೂ ವುಡ್‌ಹೌಸ್‌ನ ಮಿಸ್ಟರ್ ಮುಲಿನರ್‌ನ ವಂಶಜರು" ಎನ್ನುವುದು ಖಂಡಿತ. ಕೊರವಂಜಿಯ ಬರಹಗಾರ ಕೇಫ ಸೃಷ್ಟಿಸಿದ ಮಲ್ಹಾರಿರಾಯರು, ಅರವತ್ತಮೂರನೆಯ ಇಸವಿಯಲ್ಲಿ ಪ್ರಕಟವಾದ ಕೊರವಂಜಿಯ ಸಂಚಿಕೆಯೊಂದಿಗೆ ಪ್ರವೇಶಿಸಿದರೆ, ಕೊರವಂಜಿ ಹುಟ್ಟಿದ ಮಾರನೆಯ ವರ್ಷವೇ ಅಂದರೆ ನಲವತ್ತಮೂರರಲ್ಲಿ ಪ್ರಕಟವಾದ ಕೊರವಂಜಿಯಲ್ಲಿ ಬೀರಣ್ಣನವರು ಸೃಷ್ಟಿಸಿದ, ಅವರ ಮಾನಸ ಪುತ್ರ ಭೀಮಣ್ಣನು "ಶುಂಠೈಯ್ಯನ ಶೂರತ್ವ" ಎಂಬ ಲೇಖನದ ಮೂಲಕ ಇಪ್ಪತ್ತು ವರ್ಷಗಳ ಮುಂಚೆಯೇ ಕೊರವಂಜಿ ವೇದಿಕೆಯ ರಂಗಪ್ರವೇಶ ಮಾಡುತ್ತಾನೆ. ಕೇಫರ ಮಲ್ಹಾರಿರಾಯರ ಪರಿಚಯ ಈಗಾಗಲೇ ಆಗಿರುವುದರಿಂದ ಈಗ ಭೀಮಣ್ಣನ ಮೂಲಕ ಬೀರಣ್ಣನವರ ಬಗ್ಗೆ ತಿಳಿಯೋಣ. ಹೇಗೂ "ನಾನು ಸೃಷ್ಟಿಸಿರುವ ಸಾತು, ಪಾತು, ಪೋಲಿ ಕಿಟ್ಟಿ ಕಪ್ಪಣ್ಣ ಇವರುಗಳ ಬಗ್ಗೆ ಮಾತನಾಡಿ. ನನ್ನ ಬಗ್ಗೆ ಬೇಡ" ಅಂತ ಕೈಲಾಸಂ ಒಮ್ಮೆ ಹೇಳಿದ್ದರಲ್ಲವೇ.

ಬ್ರಹ್ಮೇಂದ್ರ ಭವನದ ಮೂರನೆಯ ಮಹಡಿಯು ಭೀಮಣ್ಣನ ಕಾರ್ಯಕ್ಷೇತ್ರ. ಬೀರಣ್ಣ ಬರೆದ ಕಥೆಗಳು ಪ್ರಾರಂಭವಾಗುವುದೇ ಇಲ್ಲಿಂದ. ಈ ಮೂರನೆಯ ಮಹಡಿಯಲ್ಲಿ, ಬಾಸುಂದಿ–ಬಾದಾಮಿಹಾಲಿನ ಗೋವಿಂದಸ್ವಾಮಿ, ಖಾಲಿದೋಸೆ–ತುಪ್ಪದ ಕಪ್ಪಣ್ಣ, ಮತ್ತಿತರ ತಿಂಡಿಪೋತರು, ತಮ್ಮ ತಮ್ಮ ಪ್ರಿಯವಾದ ತಿಂಡಿಗಳನ್ನು ತಿನ್ನುತ್ತಾ ಹರಟೆ ಹೊಡೆಯುತ್ತಿರುವಾಗ ಭೀಮಣ್ಣನ ಪ್ರವೇಶವಾಗುತ್ತದೆ. ಅದೂ ಎಂತಹ ಪ್ರವೇಶ !

"ಮೂರನೆಯ ಮಹಡಿಗೆ ಭೀಮಣ್ಣನು ತನ್ನ ಸ್ಥೂಲವಾದ ಶರೀರವನ್ನು ಏದುತ್ತಾ ಏದುತ್ತಾ ಸಾಗಿಸಿಕೊಂಡು ಬರಬೇಕು. ಎಲ್ಲಿ ಕಾಲವಿಳಂಬ ವಾಗುವುದೋ ಎಂದು ಎರಡನೆಯ ಮಹಡಿಯಿಂದಲೇ ತಿಂಡಿಗೆ ಅವನ ಆಜ್ಞೆ." ಎರಡು ಇಡ್ಲಿ, ಮೂರು ಬೆಣ್ಣೆ! ಚಟ್ನೀ ಬೇರೆ ತಟ್ಟೆಯಲ್ಲಿ !– ಬೇಗ ತರಬೇಕು" ಎಂಬ ಕಹಳೆಯ ಕೂಗನ್ನು ಕೇಳಿದೊಡನೆ ಮಾಣಿ ಗಣೇಶಯ್ಯನಿಗೂ ಸಹಾ ಎಲ್ಲಿಲ್ಲದ ಸಡಗರ. ಭೀಮಣ್ಣನು ಮೇಲೆ ಬಂದು ತನ್ನ ಮಾಮೂಲು ಕುರ್ಚಿಯಲ್ಲಿ ಬೆವರು ಒರೆಸಿಕೊಳ್ಳುತ್ತಾ ಕೂಡುವ ವೇಳೆಗೆ ಬೆಣ್ಣೆ ಇಡ್ಲಿ ಇತ್ಯಾದಿಗಳು ಸಿದ್ಧ ! ಇಡ್ಲಿಗೆ ಬೆಣ್ಣೆ ಚಟ್ನಿಗಳನ್ನು ಸಮನಾಗಿ ಸವರಿ ಒಂದೆರಡು ತುತ್ತು ಬಾಯಿಗೆ ಸೇರಿಸಿದ ನಂತರ, ಮಾತು. ಅದುವರೆಗೆ ಅವನು ಮಾತನಾಡುತ್ತಿರಲಿಲ್ಲ. ಅವನನ್ನು ಮಾತನಾಡಿಸುವುದಕ್ಕೆ ನಾವು ಯಾರೂ ಸಾಹಸಪಡುತ್ತಿರಲಿಲ್ಲ."

ಈ ಬಗೆಯಲ್ಲಿ ರಾಜಗಾಂಭೀರ್ಯದಿಂದ ಭೀಮಣ್ಣನು ಬಂದು ಆಸನಾಸೀನನಾದ ನಂತರ ಅಂದಿನ ಮಾತುಕತೆ. ಈ ಮಾತುಕತೆಗಳಿಗೆ ಒಂದು ಚೌಕಟ್ಟಿರುತ್ತದೆ. ಮಾತಿನ ಮಧ್ಯೆ ಯಾರೋ ಒಂದು ಗಾದೆಯನ್ನು ಉಲ್ಲೇಖಿಸಿದಾಗ, ಆ ಗಾದೆಯ ಮಾತಿನ

ಮೇಲೆ ಈ ತಿಂಡಿಪೋತರಲ್ಲಿ ಒಂದು ಮಾತಿನ ಚಕಮಕಿ ನಡೆಯುತ್ತದೆ. ಅದನ್ನು ಇತ್ಯರ್ಥಗೊಳಿಸುವ ನೆವದಲ್ಲಿ ಭೀಮಣ್ಣನು ತನ್ನ ಅಗಾಧವಾದ ನೆನಪಿನ ಬುತ್ತಿಯಿಂದ ಪ್ರಕರಣಗಳನ್ನು ಉದಹರಿಸಿ ವಾಗ್ವಾದವನ್ನು ಮುಕ್ತಾಯಕ್ಕೆ ತರುವ ಹರಹು ಈ ಬರಹಗಳದ್ದು. ಭೀಮಣ್ಣನ ಪ್ರತಿಯೊಂದು ಪ್ರಕರಣಕ್ಕೂ ಭೀಮಣ್ಣನ ನೆಂಟರ ಪೈಕಿ ಒಬ್ಬ ಹೀರೋ ಪಾತ್ರಧಾರಿ. ಭೀಮಣ್ಣನ ನೆಂಟರಿಷ್ಟರ ಬಳಗವೋ ನೂರಾರು ಜನ. ಅಕ್ಕನ ಮಗನಿಂದ ಹಿಡಿದು ಸೋದರತ್ತೆಯ ಭಾವನ ತಮ್ಮನವರೆಗೂ ವೈವಿಧ್ಯಮಯ ಪಾತ್ರಗಳು ಇವು. ರಾವಣಭಾತಿನ ರಂಗಪ್ಪ, ಪಥ್ಯ ಮಾಡಲಾಗದ ಪುಟ್ಟೂರಾಯ, ಗಾಳಿಬಂದಾಗ ತೂರಿಕೊಳ್ಳುವ ಕಲ್ಲಪ್ಪ, ಮತ್ತಿತರರು, ಅಂದಂದಿನ ಸಂಭಾಷಣೆಯಲ್ಲಿ ಮಿಂಚಿ, ಸಭೆಯಲ್ಲಿ ನಗೆಯ ಬುಗ್ಗೆಗಳನ್ನು ಚಿಮ್ಮಿಸುತ್ತಾರೆ.

ಉದಾಹರಣಾರ್ಥವಾಗಿ ಭೀಮಣ್ಣನ ದೊಡ್ಡಪ್ಪನ ಮಗ ಪುಟ್ಟೂರಾಯನ ಪ್ರಸಂಗವನ್ನೇ ತೆಗೆದುಕೊಳ್ಳಿ. ಪುಟ್ಟೂರಾಯ ಪುಸ್ತಕದ ಹುಳು. ಬರೀ ಓದು, ಓದು, ಓದು ಬಿಟ್ಟರೆ ಬೇರೆ ಪ್ರಪಂಚವೇ ಇರಲಿಲ್ಲ ಅವನಿಗೆ. ಗಂಗಾಮೂಲ ಎಲ್ಲಿದೆ ಎಂದು ಯಾರೋ ಮಾತನಾಡುತ್ತಿದ್ದಾಗ ಪುಟ್ಟುವು ಒಡನೆಯೇ "ಕಿಪ್ಲಿಂಗಿನ ಗಂಗಾದಿನ್ ಎಂಬ ಪದ್ಯದಲ್ಲಿ" ಎಂದು ಹೇಳಿ ಎಲ್ಲರನ್ನೂ ಅಚ್ಚರಿಗೊಳಿಸಿದ್ದನು. ಅಂತಹ ಪುಸ್ತಕ ಪ್ರೇಮಿಗೆ ಅಚ್ಚಿನಲ್ಲಿದ್ದುದೆಲ್ಲಾ ವೇದ ವಾಕ್ಯ. "ಈ ವರ್ಷ ಒಂದೇ ದಿವಸದಲ್ಲಿ ಹದಿನೆಂಟು ಅಂಗುಲ ಮಳೆ ಬಿದ್ದು ಜಲಪ್ರಳಯವಾಗುವುದು" ಎಂದು ಒಬ್ಬ ವಿಜ್ಞಾನಿ ಹೇಳಿದ್ದನೆಂದು ವಾರಪತ್ರಿಕೆಯೊಂದರಲ್ಲಿ ಓದಿಬಿಟ್ಟು, ಬೇರೆ ಎತ್ತರವಾದ ಪ್ರದೇಶ ಯಾವುದೂ ಸಿಕ್ಕದೆ, ಮನೆ ಅಂಗಳದಲ್ಲಿ ಬೆಳೆದಿದ್ದ ಅರವತ್ತು ಅಡಿ ಅಡಿಕೆ ಮರದ ಮೇಲೆ ಮೂರು ದಿವಸ ಕೂತಿದ್ದಂಥಾ ಆಸಾಮಿ ಅವನು !"

ಒಂದು ಸಲ ಪುಟ್ಟೂರಾಯ "ದೇಹಕ್ಕೆ ಖಾರ ಹಾನಿಕರ" ಎಂಬ ಸುದ್ದಿಯನ್ನು ಯಾವುದೋ ಲೇಖನದಲ್ಲಿ ಓದಿ, ಮಾರನೆಯ ದಿನ ಖಾರ ತಿನ್ನುವುದನ್ನು ಬಿಟ್ಟುಬಿಡಬೇಕೆಂದು ಸಂಕಲ್ಪಮಾಡಿಕೊಂಡನು. ಅವರ ಮನೆಯಲ್ಲೋ ಖಾರ ಎಂದರೆ ಸ್ವಲ್ಪ ಇಷ್ಟ. ಅವರ ಮುತ್ತಾತಂದಿರ ಮೂರನೆಯ ಮದುವೆಗೆ ಆಂಧ್ಯಪ್ರದೇಶದ ಹುಡುಗಿಯನ್ನು ತಂದುಕೊಂಡಾಗ ಆಕೆ ಬಳುವಳಿಯಾಗಿ ಮೂಟೆಗಟ್ಟಲೆ ಮೆಣಸಿನಕಾಯಿ ತಂದಿದ್ದಳಂತೆ! ಪುಟ್ಟೂರಾಯನಿಗೂ ಖಾರ ಎಂದರೆ ಪ್ರಾಣ. ಅಂತಹವನು ಖಾರವನ್ನು ಸಂಪೂರ್ಣವಾಗಿ ತ್ಯಜಿಸಿದನೆಂದರೆ, ಅವನ ಮನೋಸ್ಥೈರ್ಯವನ್ನು ನೀವೇ ಊಹಿಸಬಹುದು. ಒಂದು ವಾರದ ನಂತರವೂ ಪುಟ್ಟು , ಸಿಹಿ ಸಾರು, ಖಾರ ಸೋಕದ ಪಲ್ಯ, ನೀರು ಮಜ್ಜಿಗೆ ಇವುಗಳನ್ನು ಬಿಟ್ಟು ಬೇರೆ ಕೇಳಲಿಲ್ಲ. ಮೆಣಸಿನ ಕಾಯಿ ತೂಗಿದ ತಕ್ಕಡಿಯಲ್ಲಿ ತೂಗಿಸಿ ತಂದದ್ದೆಂದು ಗೆಣಸನ್ನು ಸಹಾ ಗೊಬ್ಬರಕ್ಕೆ ಒಗೆದುಬಿಟ್ಟನಂತೆ, ಪುಟ್ಟು.

ಮೊದಮೊದಲು ಈ ಪಥ್ಯದಿಂದ ಪುಟ್ಟುವಿಗೆ ಒಳ್ಳೆಯದೇ ಆಯಿತೆಂದು ಹೇಳಬೇಕು. ಅವನ ಎಂದಿನ ಕೋಪದ ಸ್ವಭಾವ ಬಹುವಾಗಿ ಶಾಂತವಾಯಿತು. ಪುಟ್ಟು ಎಲ್ಲರೊಂದಿಗೆ ಬಹು ಸೌಜನ್ಯದಿಂದ ನಡೆದುಕೊಳ್ಳುವ ರೀತಿಯನ್ನು ನೋಡಿ ಮನೆಯವರಿಗೆಲ್ಲಾ ಆಶ್ಚರ್ಯ, ಸಂತೋಷ.

ಎರಡು ವಾರ ಕಳೆದ ಮೇಲೆ ಪುಟ್ಟುವಿಗೆ ಸ್ವಲ್ಪ ಇರಸು ಮುರುಸಾಯಿತು. ಅವನ ಮನಸ್ಸಿಗೆ ಹರ್ಷವಿಲ್ಲದಂತೆ ತೋರಿತು. ದೇಹದಲ್ಲಿ ಲವಲವಿಕೆಯೇ ಇಲ್ಲದಂತೆ ತೋರಿತು.

ಒಮ್ಮೆ ಗೆಳೆಯನೊಬ್ಬನು "ನೋಡು ಪುಟ್ಟೂ, ಇವತ್ತು ನಮ್ಮ ಮನೆಯಲ್ಲಿ

ಬೆಳದಿಂಗಳೂಟ. ನಮ್ಮಜ್ಜಿ ಬಿಸಿಬೇಳೆ ಹುಳಿಯನ್ನ ಮಾಡ್ತಾರೆ. ನಿನ್ನನ್ನೂ ಕರೆಯೋಣ ಅಂದುಕೊಂಡಿದ್ದೆ. ಆದರೆ ನಿನ್ನ ವ್ರತಕ್ಕೆ ಭಂಗಬರಬಾರದೆಂದು ಸುಮ್ಮನಾದೆ" ಎಂದು ಹೇಳಿದ.

ಪುಟ್ಟುವಿಗೆ ಬಾಯಲ್ಲಿ ನೀರೂರಿತು. ಅಂದು ರಾತ್ರೆ ಚೆನ್ನಾಗಿ ನಿದ್ದೇನೇ ಬರಲಿಲ್ಲ. ಏನೇನೂ ಸ್ವಪ್ನಗಳು–ಎಲ್ಲಾ ಊಟದ್ದೇ! ಬಿಸಿಬೇಳೆ ಹುಳಿಯನ್ನ, ಬದನೇಕಾಯಿ ಎಣ್ಣೆಗಾಯಿ, ನೆಲ್ಲಿಕಾಯಿ ಉಪ್ಪಿನಕಾಯಿ, ತೆಂಗಿನಕಾಯಿ ಚಟ್ನಿ, ಖಾರದ ಹುರಿಗಾಳು ಒಂದರೊಂದಿಗೊಂದು ಕಣ್ಣುಮುಚ್ಚಾಲೆ ಆಡುವಂತೆ ತೋರಿತು. ಒಂದು ಸಲ ಉಪ್ಪಿನಕಾಯಿ ಸಿಕ್ಕಿಹಾಕಿಕೊಳ್ಳುವುದು, ಇನ್ನೊಂದು ಸಲ ಎಣ್ಣೆಗಾಯಿ. ಮತ್ತೊಂದು ಸಲ ಬಿಸಿಬೇಳೆ ಹುಳಿಯನ್ನ. ಇವುಗಳ ಜೊತೆಗೆ ಖಾರದ ಹುರುಳಿಹಪ್ಪಳ, ಹುಣಸೇ ತೊಕ್ಕು ಹೇಗೋ ಸೇರಿಕೊಂಡು ಬಿಟ್ಟವು. ಇದ್ದಕ್ಕಿದ್ದ ಹಾಗೆಯೇ ಕಾಯಿ ಚಟ್ನಿಯನ್ನು ಯಾರೂ ಹಿಡಿಯುವುದಕ್ಕೆ ಆಗಲಿಲ್ಲ. ಎಲ್ಲಿನೋಡಿದರೂ ಚಟ್ನಿಯೇ. – ಆದರೆ ಕೈಗೆ ಮಾತ್ರ ಸಿಗುವುದಿಲ್ಲ. ತಪ್ಪಿಸಿಕೊಂಡು ಓಡುತ್ತಾ ಕಿಲಕಿಲ ನಗುವುದು. ಚಟ್ನಿ, ಉಪ್ಪಿನಕಾಯಿ, ಚಟ್ನಿ, ಉಪ್ಪಿನಕಾಯಿ, ...

"ಏನೂಂದ್ರೆ ಇದೇನು ಹೀಗೆ ಕನವರಿಸುತ್ತಿದ್ದೀರಿ.? ಸ್ವಲ್ಪ ಎಚ್ಚರ ಮಾಡಿಕೊಳ್ಳಿ" ಎಂದಳು ಪುಟ್ಟುವಿನ ಹೆಂಡತಿ.

ಮಾರನೆಯ ದಿನ ಭಾನುವಾರ. ಮನೆಯಲ್ಲಿ ಮಸಾಲೆ ದೋಸೆ ಮಾಡಿದ್ದರು. ಬಿಸಿಬಿಸಿ ದೋಸೆ, ಒಳ್ಳೇ ಮಸಾಲೆ ಹಾಕಿದ ಈರುಳ್ಳಿ ಆಲೂಗೆಡ್ಡೆ ಪಲ್ಯ, ಕೇಳಬೇಕೆ ಅದರ ಸ್ವಾರಸ್ಯ. ಎಲ್ಲರೂ ಬಾಯಿ ಚಪ್ಪರಿಸುತ್ತಾ ನಾಲ್ಕು ಐದು ಮಸಾಲೆದೋಸೆಗಳನ್ನು ಹೊಡೆಯುತ್ತಿದ್ದರು. ಪುಟ್ಟುವಿನ ತಾಯಿಯು, "ಮಗೂ, ನಿನಗೋಸ್ಕರ ಖಾಲಿದೋಸೆಗೆ ಸಕ್ಕರೆ ಹಾಕಿ ಇಟ್ಟಿದ್ದೇನೆ. ಒಂದು ಚೂರು ರುಚಿ ನೋಡ್ತೀಯಾ ?" ಅಂತ ಮಮತೆಯಿಂದ ಕೇಳಿದರು.

ಅಷ್ಟು ಹೊತ್ತಿಗೆ ಸರಿಯಾಗಿ ಬಿಸಿಬಿಸಿ ಮಸಾಲೆ ಹೊಡೆಯುತ್ತಿದ್ದ ಅವನ ನಾದಿನಿಯ ಗಂಡ "ಏನು ಪುಟ್ಟೂರಾವ್, ಇವತ್ತು ಮ್ಯಾಟಿನಿ ಸಿನಿಮಾಕ್ಕೆ ಎಷ್ಟು ಹೊತ್ತಿಗೆ ಹೋಗೋಣ?' ಅಂತ ಕೇಳಿದ.

ಪುಟ್ಟೂ ರಾಯನಿಗೆ ಬವಳಿ ಬಂದಹಾಗಾಯಿತು. "ಸಿನಿಮಾ ಅಂತೆ ಸಿನಿಮಾ, ತಗೋ ನಿನ್ ಸಿನಿಮಾ" ಎನ್ನುತ್ತಾ ಒಂದು ದಪ್ಪ ಪುಸ್ತಕವನ್ನು ಅವನ ಕಡೆ ಎಸೆದನು. ಅದು ಗುರಿಯಾಗಿ ಬಂದು ಮೈದುನನ ಮೂಗನ್ನು ಅಪ್ಪಿತು. ಮತ್ತೊಂದು ಪುಸ್ತಕವು ನಾದಿನಿಯ ಗಂಡನ ಎದೆಯನ್ನು ತಾಕಿತು. ಅವುಗಳ ಹಿಂದೆ ಪುಟ್ಟೂರಾಯನೂ ಹಾರಿಬಂದನು. ನಾದಿನಿಯ ಗಂಡನು ಸೋಫಾದ ಹಿಂದೆ ಔತುಕೊಂಡನು. ಪೈಲ್ವಾನರು ಪಟ್ಟಿಗೆ ಹೊಂಚು ಹಾಕುವಂತೆ ಇಬ್ಬರೂ ಸೋಫಾದ ಸುತ್ತಲೂ ಸುತ್ತುತ್ತಾ ಹೊಂಚು ಹಾಕತೊಡಗಿದರು. ಒಡನೆಯೇ ಪುಟ್ಟುವು" ಭಲ್ ಗುಡುಗುಡು ಅನ್ನುತ್ತಾ ಹಾರುತ್ತಿದ್ದಾಗ....... ಎಲ್ಲರೂ ಬಂದು ಸಾಹಸಮಾಡಿ ಪರಿಸ್ಥಿತಿಯನ್ನು ತಹಬಂದಿಗೆ ತಂದರು. ದಿನವೆಲ್ಲಾ ಪುಟ್ಟುವನ್ನು ಕುರ್ಚಿಯಲ್ಲಿ ಕಟ್ಟಿ ಕೊಠಡಿಯಲ್ಲಿ ಬಂಧಿಸಿದ್ದರು. ರಾತ್ರಿಯ ಹೊತ್ತಿಗೆ ಪುಟ್ಟುವಿನ ಉದ್ವೇಗ ಇಳಿದಿತ್ತು. ಅವನ ಹೆಂಡತಿ ರಾತ್ರಿಯೆಲ್ಲಾ ಅವನ ಬಳಿ ಕುಳಿತಳು.

ಅರ್ಧ ರಾತ್ರಿ ಸಮಯ. ಸ್ವಲ್ಪ ಜೂಕರಿಸುತ್ತಿದ್ದ ಪುಟ್ಟುವಿಗೆ ಎಚ್ಚರವಾಯಿತು. ಬೆಳಗ್ಗೆಯಿಂದ ಏನೂ ತಿಂದಿರಲಿಲ್ಲ. ಬಹಳ ಹಸಿವಾಗಿತ್ತು. ನಿಟ್ಟುಸಿರು ಬಿಟ್ಟನು. ಅವನ ಹೆಂಡತಿ ದುಃಖದಿಂದ "ಅಲ್ಲ ಏನೇನೋ ಹಾಳು ಪುಸ್ತಕಗಳನ್ನು ಓದಿ, ಇಲ್ಲದ ಪಥ್ಯ

ಮಾಡುತ್ತೀರಿ. ಅದರಿಂದಲೇ ಹೀಗಾಗಿದೆ ಎಂದು ಖಂಡಿತ ನನ್ನ ನಂಬಿಕೆ. ದಮ್ಮಯ್ಯ ಈ ಪಥ್ಯವನ್ನು ಸಾಕುಮಾಡಿ" ಎಂದು ಬೇಡಿದಳು. ಪುಟ್ಟು ಒಪ್ಪಿದ ತಕ್ಷಣ, ಇಬ್ಬರೂ ಎದ್ದು ಮೆಲ್ಲಗೆ ಹೆಜ್ಜೆ ಹಾಕುತ್ತಾ ಅಡಿಗೆ ಮನೆಗೆ ಹೋದರು. ಏನೂ ಸಿಕ್ಕಲಿಲ್ಲ. ರಾತ್ರಿ ಮಿಕ್ಕಿದ್ದ ಅನ್ನವನ್ನ ಕಲಗಚ್ಚಿಗೆಂದು ಒಂದು ಕಡೆ ತೆಗೆದಿಟ್ಟಿದ್ದರು. ಆ ಅನ್ನವನ್ನೇ ತೆಗೆದುಕೊಂಡು, ಸ್ವಲ್ಪ ಸಾರಿನ ಪುಡಿ, ಉಪ್ಪು, ತುಪ್ಪ ಹಾಕಿ ಕಲಸಿಕೊಂಡು ತಿಂದನು. ಖಾರವನ್ನು ತಿಂದು ಎಷ್ಟೋ ದಿವಸಗಳಾಗಿದ್ದ ಪುಟ್ಟುವಿಗೆ ಅದು ಅಮೃತದಂತಿತ್ತು.

ಪುನಃ ಕೊಠಡಿ ಸೇರಿದ ಮೇಲೆ, ಹೆಂಡತಿ, "ಇನ್ನು ಮೇಲೆ ಪಥ್ಯ ಮಾಡುವುದಿಲ್ಲವೆಂದು ಮಾತು ಕೊಡಿ." ಎಂದಳು. ಪುಟ್ಟು ಭಾಷೆ ಕೊಟ್ಟನು.

"ಆ ಸಾರಿನ ಪುಡಿ ಎಷ್ಟು ಚೆನ್ನಾಗಿತ್ತು" ಎಂದು ಪುಟ್ಟು ಹೇಳಿದ್ದಕ್ಕೆ, ಅವನ ಹೆಂಡತಿ." ಅಯ್ಯೋ ಅದಕ್ಕೇನು, ಜೊತೆಗೆ ನಿಂಬೇಕಾಯಿ, ನೆಲ್ಲೀಕಾಯಿ, ಹೆರಳೇ ಕಾಯಿ..." ಎನ್ನುತ್ತಿರುವಷ್ಟರಲ್ಲಿ ಪುಟ್ಟು ಮಧ್ಯೆ ಬಾಯಿ ಹಾಕಿ "ಖಾರಾಸೇವೆ , ಉಪ್ಪೇರಿ, ಖಾರಾಬೂಂದಿ..." ಎಂಬ ಸಲ್ಲಾಪದಲ್ಲಿ ದಂಪತಿಗಳು ರಾತ್ರಿಯನ್ನು ಕಳೆದರು.

ಬೀರಣ್ಣನವರ ಹಾಸ್ಯದ ಸೊಗಡು ಸವಿಯಬೇಕಾದರೆ "ಪುಟ್ಟೂರಾಯನ ಪಥ್ಯ" ಎಂಬ ಮೂಲ ಲೇಖನದ ಪೂರ್ಣ ಪಾಠವನ್ನು ಓದಬೇಕು. ಇಲ್ಲಿ ನೀಡಿರುವುದು ಕೇವಲ ಒಂದು ಪರಿಚಯಾತ್ಮಕ ಸಾರಾಂಶವಷ್ಟೆ.

ನಾರಾಯಣ ಐಯ್ಯಂಗಾರ್ ರಾಶಿಯವರಿಗೆ ಬಾಲ್ಯದ ಗೆಳೆಯ. ನಮ್ಮ ತಂದೆಗೆ ಅವರು ಅಪ್ಪಣ್ಣ. ಅವರಿಗೆ ನಮ್ಮ ತಂದೆ ಶಿವು. ಮಲ್ಲೇಶ್ವರದ ವೆಸ್ಟ್ ಪಾರ್ಕ್ ರಸ್ತೆಯಲ್ಲಿ ನಮ್ಮ ತಾತನವರ ಮನೆ ಇತ್ತು. ಮೂರು ಬೀದಿ ಆಚೆ ಅಪ್ಪಣ್ಣನ ಮನೆ. ಸೆಂಟ್ರಲ್ ಕಾಲೇಜು, ಮೆಡಿಕಲ್ ಕಾಲೇಜುಗಳಲ್ಲಿ ಇಬ್ಬರೂ ಸಹಪಾಠಿಗಳು. ರಾಶಿಯವರು ವೃದ್ಧಾಪ್ಯದಲ್ಲಿ ಒಮ್ಮೆ ನನ್ನನ್ನು ಕರೆದು, "ಮಸಲಾ ನನಗೇನಾದರೂ ಆದರೆ ಈ ನಂಬರ್ ನಿನ್ನ ಹತ್ರ ಇರಲಿ. ಅಪ್ಪಣ್ಣನ ನಂಬರ್ ಅದು. ಶ್ರೀರಾಮಪುರದಲ್ಲಿ ಅವರ ಮನೆ ಗೊತ್ತು ತಾನೆ?' ಅಂತ ಹೇಳಿದ್ದರು. ತಮ್ಮ ಆಪ್ತ ಮಿತ್ರನ ಬಗ್ಗೆ ಅವರು ಅನೇಕ ಬಾರಿ ತಮ್ಮ ನೆನಪುಗಳನ್ನು ನನ್ನೊಡನೆ ಹಂಚಿಕೊಂಡಿದ್ದರು. ಈ ಕುರಿತ ಒಂದು ತುಣುಕನ್ನು ಅವರ ಬಾಯಿಂದಲೇ ಕೇಳಿ.

"ಒಂದು ಸಲ ಕಾಲೇಜಿನಲ್ಲಿ ಪಾಠ ಬಹಳ ನೀರಸವಾಗಿತ್ತು. ನಿಜಕ್ಕೂ ಮಹಾ ಬೋರು, ಮುಗಿದ ಬೆಲ್ ಹೊಡೆದ ತಕ್ಷಣ ಅಪ್ಪಣ್ಣ ಮತ್ತು ನಾನು ಬಂಧ ವಿಮುಕ್ತ ಪ್ರಾಣಿಗಳಂತೆ ಹೊರಕ್ಕೆ ಧಾವಿಸಿದೆವು. ಅಪ್ಪಣ್ಣ ತುಂಬ ಜಾಣ. ಚುರುಕೂ ಸಹಾ. ಅಪ್ಪಣ್ಣ ಮಾತುಗಾರಿಕೆ ಎಂದರೆ ನಿಜಕ್ಕೂ ಒಂದು ರಸಗವಳ ಇದ್ದಂತೆ. ಬಲು ರುಚಿಕಟ್ಟಾದದ್ದು. ಯಾವುದೇ ವಿಷಯವಿರಲಿ, ಅದರ ಮೇಲಿನ ಅವನ ವ್ಯಾಖ್ಯಾನ ಬುದ್ಧಿಗೆ ಪ್ರಚೋದಕವಾದದ್ದು.

ತರ್ಕ ವಾದಗಳೆಂದರೆ ಅಪ್ಪಣ್ಣನಿಗೆ ಪ್ರಾಣ. ಸರಸೋಕ್ತಿ ಹರಿತವಾದ ನಾಲಿಗೆ ಇವುಗಳಲ್ಲಿ ಅಪ್ಪಣ್ಣ ಎತ್ತಿದ ಕೈ.

"ಹೀಗೆ ಸುತ್ತಾಡಿಕೊಂಡು ಬರೋಣ ಬಾರೋ" ಎಂದು ಅವನನ್ನು ಧರ್ಮಾಂಬುದಿ ಕೆರೆ ಏರಿಯ ಮೇಲೆ ತಿರುಗಾಟಕ್ಕೆ ಆಹ್ವಾನಿಸಿದೆ. ಅಂದು ಅಪ್ಪಣ್ಣ ಯಾಕೋ ತುಂಬ ಮೌನದಿಂದಿದ್ದ. ನಮ್ಮ ಆಪ್ತ ಗೆಳೆತನದಲ್ಲಿ ಇಂತಹ ಮೌನ ಸಂವಹನ ಮಾತನಾಡುವುದಕ್ಕಿಂತಲೂ ಹೆಚ್ಚು ಪ್ರಭಾವಶೀಲವಾಗಿರುತ್ತಿತ್ತು. ಮೌನವೇ ಬಾಯ್ದೆರೆದಂತಹ

ಸಂದರ್ಭ. ಉದ್ದಕ್ಕೂ ಮೌನವಾಗಿಯೇ ದಾರಿ ತುಳಿದ ನಾವು ಎಡಪಕ್ಕದಲ್ಲಿದ್ದ ತುಳಸಿ ತೋಟದ ಬಳಿಗೆ ಬಂದಿದ್ದೆವು. ಅಲ್ಲಿದ್ದ ರಂಗಮಂದಿರದಲ್ಲಿ ವಿವಿಧ ವಿನೋದಾವಳಿ ಕಾರ್ಯಕ್ರಮವೊಂದು ನಡೆಯುವುದಿತ್ತು. " ಇದಕ್ಕೇ ಹೋಗೋಣವೇನೋ?' ಎಂದು ಅಪ್ಪಣ್ಣ ಕೇಳಿದಾಗ ನಾನು ಒಡನೆಯೇ ಒಪ್ಪಿದೆ. ಪ್ರವೇಶ ಶುಲ್ಕ ಕೊಟ್ಟು ನಾವಿಬ್ಬರೂ ಹಿಂದಿನ ಸಾಲಿನಲ್ಲಿ ಹೋಗಿ ಕುಳಿತೆವು.

ಒಂದೆರಡು ನಿಮಿಷಗಳಲ್ಲೇ ಮಧ್ಯವಯಸ್ಸಿನ ಪುರುಷನೊಬ್ಬ ಎಡ ಪಾರ್ಶ್ವದಿಂದ ರಂಗ ಪ್ರವೇಶ ಮಾಡಿದ. ಕಪ್ಪು ನೆಟ್ ಬನಿಯನ್ ಧರಿಸಿ ಕಚ್ಚೆ ಪಂಚೆ ಉಟ್ಟಿದ್ದ ಕಾಲು ಬರಿಗಾಲು. .ಒಂದು ಕ್ಷಣ ಪ್ರೇಕ್ಷಕರತ್ತ ಒಂದು ನೋಟ ಹರಿಸಿದ. ಆಮೇಲೆ ದೊಡ್ಡ ದನಿಯಲ್ಲಿ ಒಂದು ಸುಪರಿಚಿತವಾದ ಇಂಗ್ಲೀಷ್ ಶಿಶುಗೀತೆಯೊಂದನ್ನು ಹೇಳಲು ಪ್ರಾರಂಭಿಸಿದ.

ದೇರ್ ವಾಸ್ ಎನ್ ಓಲ್ಡ್ ವುಮನ್

ಹು ಲಿವ್ಡ್ ಇನ್ ಎ ಷೂ

ಷಿ ಹ್ಯಾಡ್ ಟೂ ಮೆನಿ ಛಿಲ್ಡ್ರನ್

ಷಿ ಡಿನ್ಟ್ ನೋ ವಾಟ್ ಟು ಡು

ನಿಧಾನವಾಗಿ ರಂಗದುದ್ದಕ್ಕೂ ನಡೆದು ಬಲಪಾರ್ಶ್ವ ಸೇರಿದ ಆ ಕಪ್ಪು ಬನೀನ್ ಪೈಲ್ವಾನ್.

ಇದೊಂದು ಓಬೀರಾಯನ ಕಾಲದ ಶಿಶುಗೀತೆ. "ಇದನ್ನ ನೋಡುಕ್ಕೆ ದುಡ್ಡುಕೊಟ್ಟು ಬಂದೆವೇ " ಅಂತ ಅಪ್ಪಣ್ಣ ಹಲುಬಿದ. ಅಷ್ಟುಹೊತ್ತಿಗೆ ನಮ್ಮ ಗಿರಾಕಿ ಪುನಃ ಪ್ರಾರಂಭಿಸಿದ.

ದೇರ್ ವಾಸ್ ಅನದರ್ ಓಲ್ಡ್ ವುಮನ್

ಹು ಲಿವ್ಡ್ ಇನ್ ಅನದರ್ ಷೂ

ಷಿ ಹ್ಯಾಡ್ ನೋ ಛಿಲ್ಡ್ರನ್

ಎಂದು ಹೇಳಿ ಸ್ವಲ್ಪ ಪಾಸ್ ಕೊಟ್ಟು

ಬಟ್ ಬೈ ಗ್ಯಾಡ್ ಷಿ ನ್ಯೂ ವಾಟ್ ಟು ಡು

–ಅಂತ ಹೇಳಿದಾಗ ಅಪ್ಪಣ್ಣ ಮತ್ತು ನಾನು ಉಲ್ಲಾಸದ ಬುಗ್ಗೆಗಳಾದೆವು. ನಗು ಹೊನಲಾಗಿ ಹರಿಯಿತು. ಅಪ್ಪಣ್ಣ ನನ್ನ ಕಡೆ ತಿರುಗಿ ಹೇಳಿದ. "ಲೋ ಇವನು ಮೇಧಾವಿ ಕಣೋ"

ಆ ಕಪ್ಪು ಬನೀನ್ ವ್ಯಕ್ತಿ ಇನ್ನಾರೂ ಅಲ್ಲ. ಕನ್ನಡ ಪ್ರಹಸನ ಪ್ರಪಿತಾಮಹ ಎಂಬ ಖ್ಯಾತಿಯ ಕೈಲಾಸಂ. ಕಾರ್ಯಕ್ರಮದ ನಂತರ ನಾವಿಬ್ಬರೂ ಕೈಲಾಸಂರವರನ್ನು ಭೇಟಿಮಾಡಿದೆವು. ಕೈಲಾಸಂರೊಡನೆ ಇದೇ ನಮ್ಮ ಮೊದಲ ಭೇಟಿ."

ನಾರಾಯಣ ಐಯ್ಯಂಗಾರ್ ಕೊರವಂಜಿಗೆ ಒಂದೂವರೆ ದಶಕಗಳ ಕಾಲ ನಿರಂತರವಾಗಿ ಲೇಖನಗಳನ್ನು ನೀಡಿದರು. ಅವರ ಪ್ರೌಢ ಹಾಸ್ಯ ಇಂದಿಗೂ ನಗೆರಸಿಕರನ್ನು ರಂಜಿಸುತ್ತಿದೆ ಎಂದರೆ ತಪ್ಪಾಗಲಾರದು.

■

# ಹಂಡಾಹುಂಡಿ ಗುಂಡ

**ಪುಷ್ಪಲತ. ಟಿ.ಜಿ**

ಬಿಡದೇ ಸುರಿಯುವ ಮಳೆಗೆ ಕರೆಂಟ್ ಮುಖವನ್ನು ಕಾಣದೆ ಐದಾರು ದಿನವಾಗಿತ್ತು. ಹಿಂದಿನಂತೆ ಸೀಮೆ ಎಣ್ಣೆಯು ಸಿಗುವುದಿಲ್ಲವಾದರಿಂದ ಡೀಸೆಲ್ ಬೆಳಕಿನಲ್ಲಿ ಚಿಮಣಿ ಬುಡ್ಡಿ ಹಚ್ಚಿಕೊಂಡು ಕಲ್ಲಿನಲ್ಲಿ ಖಾರ ತಿರುವುತ್ತಿದ್ದಳು ಗೌರಿ. ಹಿಂದೆಲ್ಲ ಆ ಚಿಮಣಿ ಬೆಳಕಿನ ಕೆಳಗೆ ಓದುತಿದ್ದ ಮಕ್ಕಳ ನೆನಪು ಮಾಡಿಕೊಳ್ಳುತ್ತಾ ಕಳೆದು ಹೋಗಿದ್ದವಳು ಗುಂಡನ ಕೂಗಿಗೆ ಹೊರ ಇಣುಕಿದಳು. ಹೊರಗೆ ಗೇಟಿನ ಬಳಿ ಮಾಸ್ತಿ ಯಾವುದೋ ಹುಡುಗನ ಬಳಿ ಮಾತನಾಡಿಕೊಂಡು ಬರುತ್ತಿದ್ದ. ಮೊನ್ನೆ ಮೊನ್ನೆ ಮೊಲವೋ ಮುಂಗಿಸಿಯೋ ಬೇಟೆಗೆಂದು ಬಂದಿದ್ದ ಹುಡುಗ ಅವನೇ ಅಲ್ಲವೇ ಎಂಬುದನ್ನು ತೀಕ್ಷ್ಣವಾಗಿ ಪರಿಶೀಲಿಸಿದಳು. ಅವಳಿಗೆ ಗುರುತು ಹತ್ತಿತೋ ಇಲ್ಲವೋ ಗುಂಡು ಮಾತ್ರ ಅವರಿಗೆ ದಾರಿ ಬಿಡದಂತೆ ಅಡ್ಡ ನಿಂತು ಬೊಗಳುತಿತ್ತು.ಅಕ್ಕ ನಾಯಿ ಕರಿ.... ಎಂಬ ಮಾಸ್ತಿ ಮಾತಿಗೆ ಮೊನ್ನೆ ನಮ್ಮ ಮನೆಗೆ ಕಲ್ಲು ಎಸೆದು ಓಡಿ ಹೋದವವ ಇನ್ಯಾಕೆ ಕರೆದುಕೊಂಡು ಬಂದಿಯೋ.... ಮನೆಗೆ ನುಗ್ಗಿ ಮತ್ತೇನು ಮಾಡ್ಬೇಕು ಅಂತಿದ್ದಾನೋ ಎಂದು ಅಲ್ಲಿಂದಲೇ ಕೂಗಿದ್ದಳು.ಅವಳ ಕೂಗು ಕೇಳದಂತೆ ಘರ್ಜಿಸಿತ್ತು ಗುಂಡ. ಅಷ್ಟರಲ್ಲಿ ಅದೇ ಗೇಟಿನ ಬಳಿ ಗೀತಾ ಪ್ರತ್ಯಕ್ಷವಾಗಿದ್ದು ಕಂಡಿದ್ದೆ ಅಂಗಳಕ್ಕೆ ಇಳಿದಳು ಗೌರಿ.

ನಿಮ್ಮ ಮನೆ ಹತ್ರ ಬಂದಿದ್ದೆ ಮೊದಲು.... ನಾನು ಬಂದೆ ಇಲ್ಲ ಎಂದು ಮಾಸ್ತಿ ಮರೆಯಲ್ಲಿ ನಿಂತ ಹುಡುಗ ಹೇಳುತ್ತಲೇ ಅವರು ಇಲ್ಲ ಲೈನ್ ರಿಪೇರಿ ಹೋಗಿದ್ದಾರೆ ಎಂದಳು ಗೌರಿ. ತಾವು ಅಲ್ಲೇ ಹೋಗುತ್ತೇವೆ ಎನ್ನುತ್ತಾ ಇಬ್ಬರೂ ಹಿಂದಿರುಗಿದರೆ ಗುಂಡ ಗೀತಾ ಹಿಂದೆ ಬಾಲ ಆಡಿಸುತ್ತಾ ಬಂದವ ಥಡಿ ಏರಿ ಕುಳಿತು ಟೀಪು ಎಲ್ಲಿ ಹೋಯಿತೆಂದು ಹುಡುಕುತಿದ್ದ.

ಗೌರಿ ಗೀತನೊಡನೆ ಮಾತನಾಡುತ್ತಾ ಮೊನ್ನೆ ಕಥೆ ಹೇಳುತ್ತಿದ್ದಳು. ಮೊನ್ನೆ ಮುಸ್ಸಂಜೆ ಹೊತ್ತಿಗೆ ದೊಡ್ಡ ಗಾತ್ರದ ಕಲ್ಲು ಹಂಚನ್ನು ಸೀಳಿ ಡೈನಿಂಗ್ ಟೇಬಲ್ ಬಳಿ ಬಿತ್ತೆಂದು ಅಕಸ್ಮಾತ್ ತಲೆ ಮೇಲೆ ಬಿದ್ದಿದ್ದರೆ ಎಂದು ಒಂದಿಷ್ಟು ಕೂಗಿದಳು.ಅವತ್ತು ಬಂದವ ಇವನೇ ತಮಗೂ ಸಿಕ್ಕಿದ್ದ ಉಡದ ಭೇಟೆ ಎಂದು ತಿರುಗುತ್ತಿದ್ದ ಎಂದು ಗೀತಾ ಒಂದಿಷ್ಟು ಬೈಗುಳ ಸೇರಿಸಿತು.

ಆದರೆ ಸತ್ಯ ಬೇರೆಯೇ ಇತ್ತು.

ನಿಜಕ್ಕೂ ಅಂದು ನಡೆದಿದ್ದು ನಾಟ ಕೊಯ್ಯಲು ಜಾಗ ಹುಡುಕಲು ಬಂದಿದ್ದ ಒಂದು ತಂಡ ಊರಿನವ ಎಂದು ಅವನನ್ನು ಕರೆದುಕೊಂಡು ಕಾಡು ಸುತ್ತುತ್ತಿತ್ತು.ಅವರಿಗೆ ಸಹಾಯವಾಗಲೆಂದೋ ಇಲ್ಲ ತನ್ನ ಮಾಂಸ ತಿನ್ನುವ ಚಪಲಕ್ಕೆಂದೋ ತನ್ನ 3 ನಾಯಿಯನ್ನು ಕರೆದುಕೊಂಡು ಬಂದಿದ್ದ ಚಂದು. ಅವನ ಕಪ್ಪು ಬಿಳಿಯ ನಾಯಿಗಳು ಒಂದೆರಡು ಮುಂಗುಸಿಯನ್ನು ಅಟ್ಟಿದ್ದು ಬಿಟ್ಟರೆ ಇನ್ಯಾವ ಪ್ರಾಣಿಯ ತಂಟೆಗೂ ಹೋಗಲಿಲ್ಲ.ಅದೇ ಸಮಯಕ್ಕೆ ಅಲ್ಲಿ ಟೀಪು ಗುಂಡು ಪ್ರತ್ಯಕ್ಷವಾಗಿದ್ದೆ ಅಲ್ಲಿಂದ ಕಾಲ್ಕಿತ್ತಿದ್ದವು. ತನ್ನ ನಾಯಿ ಮೇಲೆ ಎಗರುತಿದ್ದ ಗುಂಡನಿಗೆ ಒಂದೆರೆಡು ಹೊಡೆದು ಬೆರೆಸಿದ್ದ.ಆದರೆ ಅಷ್ಟರಲ್ಲಾಗಲೇ ಅವನ ಹಂಡ ಹುಂಡ ನಾಯಿಗಳು ನಾಪತ್ತೆಯಾಗಿದ್ದವು. ಚಂದುವಿಗೆ ಆದ ನಿರಾಸೆ ಅಷ್ಟಿಷ್ಟಲ್ಲ. ರಾತ್ರಿ ಊಟಕ್ಕಾದರು ಮೂಳೆ ಕಡಿಯಬೇಕೆಂದಿದ್ದವನ ಮನ ಒಡೆದಂತಾಯಿತು. ಇಷ್ಟಕ್ಕೆಲ್ಲ ಕಾರಣವಾದ ಈ ಎರಡೂ ನಾಯಿಗಳನ್ನು ಬಡಿದೆ ತೆಗೆಯಬೇಕೆಂದಿದ್ದವ ಅತ್ತ ತಿರುಗುವಷ್ಟರಲ್ಲಿ ಪೊದೆಯಿಂದ ಮೊಲ ವೊಂದನ್ನು ಹೊರಡಿಸಿ ಅದರ ಹಿಂದೆ ಓಡುತ್ತಿತ್ತು

ಮೂರು ಕಾಲಿನ ಟೀಪು.ತಡಮಾಡದೆ ನೆಗೆದ ಗುಂಡು ಟೀಪುವನ್ನು ದಾಟಿ ಮೊಲದ ಹೊಟ್ಟೆಗೆ ಬಾಯಿ ಹಾಕಿತ್ತು. ಚಂದು ನೋಡು ನೋಡುತ್ತಿದ್ದಂತೆ ಮೊಲ ನಾಯಿ ಪಾಲಾಗುತ್ತಿತ್ತು. ಚಂದು ಬಾಯಲ್ಲಿ ನೀರೂರಿತು. ಮೂಳೆ ಜಗಿಯುವ ಆಸೆಗೆ ಆ ದೇವರೇ ಅಸ್ತು ಎಂದಂತೆ ಎರಡು ನಾಯಿಗಳು ವರವಾಗಿ ಕಂಡಿದ್ದವು ಅವನ ಪಾಲಿಗೆ. ನಾಯಿಯಿಂದ ಹೇಗಾದರೂ ಬಿಡಿಸಿ ಮೊಲವನ್ನು ತನ್ನ ಚೀಲಕ್ಕೆ ತುಂಬಿಸಿಕೊಳ್ಳುವ ಆಸೆಯಿಂದ ತನ್ನ ನಾಟ ಬಳಗವನ್ನು ಅಗಲಿ ನಾಯಿಗಳತ್ತ ಓಡಿದ. ಓಡಿ ಬರುವ ಅವನನ್ನೇ ಗುರ್ ಎನ್ನುತ್ತಾ ನೋಡುತ್ತಿತ್ತು ಟೀಪು. ಚಂದು ಪುಟ್ಟ ದನಿಯಲ್ಲಿ ಬಾ ಮಗ....ಇಲ್ಲಿ ಕೊಡು....ಎನ್ನುತ್ತಾ ಹೆಜ್ಜೆ ಮುಂದಿಡುತಿದ್ದ. ಹಲ್ಲು ಕಚ್ಚಿಕೊಂಡೆ ಗುರ್ ಎಂದಿತ್ತು ಟೀಪು. ಅದರ ಕಚ್ಚಿದ ಹಲ್ಲು, ಉಬ್ಬಿದ್ದ ಕುತ್ತಿಗೆಯ ರೋಮಗಳು ಒಂದೆರಡು ಇಂಚು ಎದ್ದು ನಿಂತಿದ್ದವು. ನೆಗೆದೇ ಬಿಡುವಂತಿದ್ದ ಅದರ ವರ್ತನೆ ಅಪಾಯವನ್ನು ಸೂಚಿಸುತ್ತಿತ್ತು. ಚಂದು ಗುಂಡುವಿನತ್ತ ಆಸೆಗಣ್ಣಿನಿಂದ ನೋಡುತ್ತಾ ಎಷ್ಟೇ ಮಗ ಎಂದರು ತಿರುಗದೆ ಮೊಲ ಸತ್ತಿದ್ದು ಖಚಿತವಾಗುತ್ತಲೇ ಮನೆ ದಾರಿ ಹಿಡಿದವು. ಎರಡೂ ನಾಯಿ ಅಲ್ಲಿಂದ ಓಡುತಿದ್ದುದು ಕಂಡ ಚಂದು ಇನ್ನೂ ಬಿಟ್ಟರೆ ಕೆಟ್ಟೆ ಎಂದುಕೊಂಡವ ಅಕ್ಕ ಪಕ್ಕದಲ್ಲಿದ್ದ ಕಲ್ಲುಗಳನ್ನು ಎತ್ತಿಕೊಳ್ಳುತ್ತ ಅವುಗಳಿಗೆ ತೂರುತ್ತ ಹೊಡೆದು ಬಿಡಿಸಿಕೊಳ್ಳಲು ಅವುಗಳ ಹಿಂದೆ ಮುಳ್ಳು ಮಟ್ಟಿ ಎನ್ನದೆ ಗುಡ್ಡದ ಏರುಪೇರುಗಳಲ್ಲಿ ಓಡುತಿದ್ದ. ನಾಯಿಗಳು ಗುಡ್ಡ ಇಳಿದು ಬೇಲಿ ದಾಟುವವರೆಗೂ ಸಿಕ್ಕಷ್ಟು ಕಲ್ಲುಗಳಿಂದ ಪ್ರಯತ್ನಿಸಿದ್ದ. ಅವು ಗೇಟು ದಾಟಿ ಇನ್ನೇನು ಮರೆಯಾಗುತ್ತಿದ್ದವು ಎನ್ನುವಷ್ಟರಲ್ಲಿ ಮನೆಯವರೆಲ್ಲ ಹೊರ ಬಂದು ಗುಡ್ಡದತ್ತ ನೋಡುತ್ತಾ ಕೂಗುತ್ತಾ ಬರುತ್ತಿರುವುದು ಕಂಡು ಅಲ್ಲೇ ಮಟ್ಟಿಯೊಳಗೆ ಅಡಗಿ ಕುಳಿತ. ಅವರು ಕೂಗುವುದು ಅಸ್ಪಷ್ಟವಾಗಿ ಕೇಳಿದ್ದ ಅವನಿಗೆ ನಾಯಿಗೆ ಕಲ್ಲು ತೂರುವುದು ಕಂಡಿರಬೇಕು ಎಂದುಕೊಂಡ. ತನ್ನ ಕಲ್ಲು ಮನೆಯ ಹಂಚು ಸೀಳಿ ಒಳ ಬಿದ್ದಿದ್ದರ ಸುಳಿವು ಅವನಿಗೆ ಇರಲಿಲ್ಲ. ಅವರು ಮರೆಯಾಗುವ ವರೆಗೂ ಅಲ್ಲೇ ಕುಳಿತವ ನಂತರ ನಿರಾಸೆಯಲ್ಲಿ ಮರೆಯಾದ. ಮನೆಯವರು ಎಷ್ಟು ಕೂಗಿದ್ದರೂ ಯಾರೆಂದು ತಿಳಿಯದೆ ಮುಷ್ಟಿ ಸಡಿಲಿಸಿ ವಾಪಸಾದರು. ನಂತರ ಒಂದೆರಡು ದಿನದ ನಂತರ ಅವರಿವರು ತಮಗೆ ಬೇಟೆಗೆಂದು ನಾಯಿಯೊಂದಿಗೆ ಅಲೆದಾಡುತ್ತಿದ್ದ ಚಂದು ಸಿಕ್ಕಿದ್ದನೆಂದೂ ಅವನದೇ ಈ ಕೆಲಸ ಎಂದು ಊಹಾಪೋಹ ಹೇಳಿದಾಗ ಇನ್ನೊಮ್ಮೆ ಬರಲಿ ಎಂದು ಬೈಯ್ದುಕೊಂಡು ಸುಮ್ಮನಾದರು. ಅಚಾನಕ್ ಇಂದು ಬಂದು ಸಿಕ್ಕುಬಿದ್ದಿದ್ದವ ತನ್ನ ಸುಳಿವು ಸಿಕ್ಕಿದ್ದು ಗೊತ್ತಾಗುತ್ತಲೇ ಮಾಸ್ತಿ ಜೊತೆ ಅಂತರ್ಧಾನನಾಗಿದ್ದ.



ಗೀತಾ ಒಂದಿಷ್ಟು ಅತ್ತೆಯ ದೂರು ಹೇಳುತ್ತಿದ್ದಾಗಲೇ ಲೈನ್ ನೋಡಲು ಹೋಗಿದ್ದ ಗಣಪತಿ, ಡಾಕಪ್ಪ ಇಬ್ಬರೂ ಬಂದರು. ಕರೆಂಟ್ ಮಾತ್ರ ಬಂದಿರಲಿಲ್ಲ. ಎರಡು ಮೂರು ಲೈನ್ ಬಿದ್ದಿದ್ದು ಸದ್ಯ ಕರೆಂಟ್ ಇಲ್ಲ ಎಂಬುದನ್ನು ಖಾತ್ರಿ ಪಡಿಸುತ್ತಲೇ ಸೀತಾರಾಮ ಧಾರಾವಾಹಿ ಮುಗಿದೆ ಹೋಗಿರುತ್ತದೆ ಎಂಬ ಬೇಸರ ಇಬ್ಬರು ಹೆಂಗಳೆಯರನ್ನು ಆವರಿಸಿತು.

# ಥ್ಯಾಂಕ್ಸ್...ಮಂಗಣ್ಣಾ...!

ವಿ.ವಿಜಯೇಂದ್ರ ರಾವ್

ಬನ್ನೇರುಘಟ್ಟದ ಕಾಡಿನಲ್ಲಿ ಸಿಂಹಿಣಿಯು ಗಾಂಭೀರ್ಯದಿಂದ ನಡೆದುಕೊಂಡು ಬರುವಾಗ ಒಂದು ದೊಡ್ಡ ಮುಳ್ಳು ಅದರ ಕಾಲಿಗೆ ಚುಚ್ಚಿ ಅದಕ್ಕೆ ಅಪಾರ ನೋವಾಯಿತು.ಮುಳ್ಳನ್ನು ಹೇಗೋ ಕಷ್ಟ ಪಟ್ಟು ತೆಗೆದರೂ ಇನ್ನೂ ಕಾಲು ನೋಯುತ್ತಿದ್ದರಿಂದ, ಅದು ಸ್ವಲ್ಪ ಕುಂಟುತ್ತಾ, ಕುಂಟುತ್ತಾ ಬರುತ್ತಿರುವುದನ್ನು ಬಲಪಕ್ಕದಲ್ಲಿ ನಿಂತಿದ್ದ ಒಂದು ಜಿಂಕೆಯು ನೋಡಿದ್ದಕ್ಕೆ, ಅದಕ್ಕೆ ಅವಮಾನವಾದಂತಾಗಿ, ಆದರೂ ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ, ತನ್ನ ಎಂದಿನ ಗತ್ತಿನಲ್ಲಿ ಜಿಂಕೆಯ ಹತ್ತಿರ – ಏ ಜಿಂಕೆ ಮರಿ, ಹೇಗಿದೆ ನನ್ನ ಹೊಸ ವಾಕಿಂಗ್ ಸ್ಟೈಲ್ ? ಎಂದು ಕೇಳಿದಾಗ, ಅದು ಪಾಪ ಪ್ರಾಮಾಣಿಕವಾಗಿ – ಥೂ, ಒಂದು ಚೂರು ಚೆನ್ನಾಗಿಲ್ಲ, ಏನೋ ಹೆಳವನಂತೆ ಕುಂಟುತ್ತಾ ಬರೋದು ನೋಡೋಕಾಗಲ್ಲ ಎಂದಾಗ, ಅದಕ್ಕೆ ಕೋಪ ಬಂದು, ಪಟೀರನೆ ಜಿಂಕೆಯ ಕೆನ್ನೆಗೆ ಬಾರಿಸಿದಾಗ, ಅದು ಬದುಕಿದರೆ ಸಾಕು ಬಡಜೀವವೇ ಅಂದ್ಕೊಂಡು ಓಡಿ ಹೋಯಿತು.

ಅದರ ಎಡಪಕ್ಕದಲ್ಲಿ ಇದನ್ನು ಗಮನಿಸುತ್ತಾ ನಿಂತಿದ್ದ ನರಿಯ ಹತ್ತಿರವೂ, ಸಿಂಹಿಣಿಯು – ಹೇಗಿದೆ ನನ್ನ ಹೊಸ ರೀತಿಯ ನಡಿಗೆ ಎಂದು ಕೇಳಿದಾಗ, ನರಿಗೆ ಹೊಗಳುವುದನ್ನು ಹೇಳಿ ಕೊಡಬೇಕೆ ? ಎಂದು ಎಂದಿನಂತೆ – ನಿಮ್ಮ ನಡಿಗೆಯು ಇತ್ತೀಚೆಗೆ ಬಂದ ಕಾಂತಾರ ಸಿನಿಮಾದಲ್ಲಿ ರಾಣಿಯಂತೆ ಲಾಸ್ಯದಿಂದ ನಡೆಯುತ್ತಿದ್ದ ರುಕ್ಮಿಣಿ ವಸಂತ್ ತರಾ ಇತ್ತು ಎಂದಾಗ, ಮತ್ತೆ ಸಿಂಹಿಣಿಯು ಕೋಪದಿಂದ – ಏನು, ನನ್ನನ್ನು ಸಿನಿಮಾ ನಟಿಯೊಂದಿಗೆ ಹೋಲಿಸುತ್ತೀಯಾ ? ಎಂದು ನರಿಯ ಕೆನ್ನೆಗೂ ಬಾರಿಸಿದಾಗ, ಅದು ಬಿಟ್ರೆ ಸಾಕಪ್ಪಾ... ಅಂದ್ಕೊಂಡು ಓಡಿ ಹೋಯಿತು.

ಇದನ್ನೆಲ್ಲಾ ಮರದ ಮೇಲೆ ಕುಳಿತಿದ್ದ ಕೋತಿಯೊಂದು ನೋಡುತ್ತಿತ್ತು. ಮರದ ಮೇಲಿದ್ದ ಕೋತಿಯ ಮೇಲೆ ಸಿಂಹಿಣಿಯ ಗಮನ ಬಿದ್ದು – ಎಲೈ ಮಂಗವೇ ನೀನಾದ್ರೂ ಸರಿಯಾಗಿ ಹೇಳು ನನ್ನ ನಡಿಗೆ ಹೇಗಿತ್ತು ಅಂತ ಕೇಳಿದಾಗ, ಕೋತಿಯು ಮನಸ್ಸಿನಲ್ಲೇ ಯೋಚಿಸಿತು. ಈ ದರ್ಪದ ಸಿಂಹಿಣಿಗೆ ಹೊಗಳಿದ್ರೂ ಕೆನ್ನೆಗೆ ಹೊಡಿತಾಳೆ, ತೆಗಳಿದರೂ ಕೆನ್ನೆಗೆ ಹೊಡಿಯುತ್ತಾಳೆ, ಆದ್ದರಿಂದ... ನಾನು ನನಗೆ ಕಿವಿ ಕೇಳದಿದ್ದ ಹಾಗೆ ನಟಿಸಿಬಿಡ್ತೀನಿ ಅಂದ್ಕೊಂಡು, ಅದು ಎಷ್ಟು ಸರ್ತಿ ಕೇಳಿದರೂ, ಕೋತಿ ಏನೂ ಉತ್ತರ ಕೊಡದೆ ಸುಮ್ಮನೆ ಇದ್ದದ್ದನ್ನು ಕಂಡು, ಕೊನೆಗೆ ಸಿಂಹಿಣಿಗೆ ಬೇಜಾರಾಗಿ, ತನ್ನ ಪಾಡಿಗೆ ತಾನು ಕುಂಟುತ್ತಾ ಹೊರಟು ಹೋಯಿತು...!

ಸರಿ....ಇನ್ನು ನಾವು ಈಗ ಕಾಡಿನಿಂದ ನಾಡಿಗೆ ಬರೋಣ. ಇಲ್ಲಿ ನಿಮ್ಮ ನಿಮ್ಮ ಸಿಂಹಿಣಿಯು ನಿಮ್ಮ ನಿಮ್ಮ ಧರ್ಮಪತ್ನಿಯರೇ....! ಮರದ ಮೇಲಿನ ಕೋತಿಗಳು..ಯಾರೆಂದು ಅರ್ಥವಾಗಿರಬೇಕಲ್ವೇ ? ಅದು ನೀವೇ ....ಅವರವರ ಗಂಡಂದಿರುಗಳು.....!

ನಿಮ್ಮ ಮನೆಯ ಸಿಂಹಿಣಿಯು – ಈ ಸೀರೆ ನನಗೆ ಚೆನ್ನಾಗಿ ಕಾಣುತ್ತಾ ?, ಈ ಕಲರ್ ಸೀರೆ ನನಗೆ ಒಪ್ಪುತ್ತಾ ?, ಈ ಸೀರೆಯಲ್ಲಿ ನಾನು ಸಣ್ಣದಾಗಿ ಕಾಣಿಸ್ತೀನಾ ? ಮ್ಯಾಚಿಂಗ್ ಬ್ಲೌಸ್ ಇದಕ್ಕೆ ಸರಿಯಾಗಿದ್ಯಾ ? ಇನ್ನೂ ಈ ತರಹದ ಹಲವಾರು ಪ್ರಶ್ನೆಗಳಿಗೆ ಮರದ ಮೇಲಿನ ಕೋತಿಯಂತೆ ಕಿವಿ ಕೇಳಿಸಿದರೂ ಕೇಳದಿದ್ದ ಹಾಗೆ ಜಾಣ್ಮೆಯಿಂದ ನಡೆದುಕೊಂಡರೆ ನಿಮಗೆ ಎಂದಿಗೂ ಕ್ಷೇಮ ಅಂತ ನಾನು ಬೇರೆ ಬಿಡಿಸಿ ಹೇಳ್ಬೇಕಾ...ಎಂಬಲ್ಲಿಗೆ ಈ ಕಥಾಕಾಲಕ್ಷೇಪವನ್ನು ಮುಗಿಸುತ್ತಾ.......

ಸರ್ವೇ ಜನಾಃ ಸುಖಿನೋ ಭವಂತು..!

# ಕೇಡು ಪ್ಯಾಕೇಟು, ಹಿಟ್ಟಿನ ಗುಟ್ಟು

ಸುಮನಾ

"ಅಮ್ಮಾ ಹೋಂ ಡೆಲಿವರಿ ಬಂದಿದೆ ತೊಗೋಳಿ, ನಂಗೆ ಆಫೀಸಿಗೆ ಲೇಟ್ ಆಗ್ತಿದೆ ಅಂತ ಮಗಳು ಹೇಳಿದಾಗ..ಅಮ್ಮ, ಸರಿ ಕಣಮ್ಮಾ ಅಂತ ಬಾಗಿಲು ತೆಗೆದು ಡೆಲಿವರಿ ಬಾಯ್ ಕೊಟ್ಟ ಸಾಮಾನು ಗಳನ್ನು ನೋಡಿ ಎಲ್ಲ ಬಂದಿದೆ ಅಲ್ವೇನಪ್ಪಾ ಅಂದ್ರು.."




"ಹ್ಞೂ ..ಮೇಡಂ. ಒಂದು ಸರ್ತಿ ಹೇಳ್ಬಿಡ್ತೀನಿ ಕೇಳಿ..ಅಂತ ಮಿಲ್ಕ್, ಬೀನ್ಸ್, ಜಾಗರಿ, ರವೆ, ಶುಗರ್ ಇತ್ಯಾದಿ ಹೇಳಿ.."

ಕೇಡು ಎರಡು ಪ್ಯಾಕೇಟು ಅಂದಾಗ ಅಮ್ಮ ಶಾಕ್ ಆದ್ರು..

ಏನಪ್ಪಾ ಯಾವ ಕೇಡು, ಅದ್ಯಾವ್ದು ಅಂದಾಗ ಇಲ್ಲಿದೆ ನೋಡಿ ಹಾಲು ಪ್ಯಾಕೇಟೀನ ಪಕ್ಕ ಅಂದವನೇ ಅವನು ಹೊರಟು ಬಿಟ್ಟ ಅಮ್ಮ ನೋಡಿ ನಗು ತಡೆಯಲಾಗದೇ ಒಳಗೆ ಓಡಿ ಬಂದ್ರು, ಏನಾಯಿತಮ್ಮ ಅಂತ ಕೇಳಿದ ಮಗಳಿಗೆ..

ಅಯ್ಯೋ, ನಿನ್ನ ಲಿಸ್ಟ್‌ನಲ್ಲಿ ಕೇಡಿಗೂ ಜಾಗ ಇದ್ಯಲ್ಲೇ,ಏನು ಕೇಡುಗಾಲವೋ ಅಂತ ಕೇಡು ಪ್ಯಾಕೆಟು ತೋರಿಸಿದ್ರು..ಅದನ್ನು ನೋಡಿದ ಮಗಳೂ, ಬಿದ್ದು ಬಿದ್ದೂ ನಕ್ಕಳು.

ಕರ್ಡ್..(ಮೊಸರು) ಅನ್ನೋದು ಡೆಲಿವರಿ ಬಾಯ್‌ನ ಬಾಯಲ್ಲಿ ಕೇಡ್ ಆಗಿತ್ತು.

*******

ಹಿಟ್ಟು..

ಅಮ್ಮ ಅಡಿಗೆ ಮನೆಯಿಂದ ಅಂದ್ರು: ಏ..ಗುಂಡಾ ಆ ಹಿಟ್ ತೊಗೊಂಡು ಬಾ, ಗುಂಡ ಸ್ಟೋರ್ ರೂಮಿಂದ ಕೈಲಿ ಪ್ಯಾಕೆಟು ಹಿಡಿದು ಓಡಿಬಂದ ಯಾವುದಮ್ಮ,?? ಅಕ್ಕೀದೋ, ಗೋಧೀದೋ,ರಾಗೀದೋ ....ತೊಗೋ..ಮೂರೂ ಹಿಟ್ಟು ತಂದಿದೀನಿ

ಅಮ್ಮ: ತಲೆಮೇಲೆ ಕೈ ಹೊತ್ತು,

ಅಯ್ಯೋ..ಹಿಟ್ಟು ಅಂದ್ರೆ ಇದಲ್ಲಾ ಕಣೋ..

ಇಲ್ಲಿ ಜಿರಲೆಯಿದೆ, ಅದನ್ನ ಹೊಡೆಯೋಕೆ ಹಿಟ್ ಕೇಳಿದ್ದು..

ಒಳ್ಳೇ ಗುಂಡ ಕಣೋ ನೀನು ಅಂದ್ರು,

ಗುಂಡನೂ ಮನಸಾರೆ ನಕ್ಕು, ಅಮ್ಮ ಈ ಸರ್ತಿ ನನ್ನ ಜೋಕ್‌ಗೆ ನನಗೂ ತಡೆಯಲಾರದಷ್ಟು ನಗು ಬರ್ತಿದೆ ಅಂದ.

■

# ಬೇತಾಳಮ್ಮನ ಪ್ರಿಯರಿಗಾಗಿ

ಶಾಂತಾನಾಗರಾಜ್

ಎಂದಿನಂತೆ ರಾಜಾ ತ್ರಿವಿಕ್ರಮನು ಶತಶತಮಾನಗಳಿಂದ ಹೊತ್ತು ತರುವ ಬೇತಾಳವನ್ನು ಈ ಸಲ 'ಫಾರ್ ಎ ಚೇಂಜ್' ಅಂತ ಆಡಿಕಾರಿನಲ್ಲಿ ಕರೆತಂದು ಮಂತ್ರವಾದಿಗೆ ಒಪ್ಪಿಸಿಯೇ ಬಿಡುವೆನೆಂದು ಹಠ ಹಿಡಿದು ಹೊರಟನು. ಆ ಹೊತ್ತಿಗೆ ಸರಿಯಾಗಿ ಹೊರ ಬಂದ ರಾಣಿ ತ್ರಿವಿಕ್ರಮೆ "ನಿನ್ನ ಕಾರುಬಾರು ನನಗರ್ಥವಾಯಿತು. ಈ ಸಲ ನೀನು ಹೋಗಬೇಡ. ಆ ಕಾರಿನ ಕೀಯನ್ನು ನನಗೆ ಕೊಡು. ನಾನೇ ಆ ಬೇತಾಳವನ್ನು ಹಿಡಿದು ತರುತ್ತೇನೆ. ಅದರ ಅಡ್ರೆಸ್ಸು ಮತ್ತು ಲೊಕೇಶನ್ನನ್ನು ವಾಟ್ಸ್ಆ್ಯಪ್ ಮಾಡು" ಎಂದಳು. ನೂರಾರು ವರ್ಷಗಳಿಂದ ಮಾಡಿದ್ದೇ ಕೆಲಸ ಮಾಡಿ ಬೋರ್ ಹೊಡೆಸಿಕೊಂಡಿದ್ದ ರಾಜ "ಹೂಂ ಅದೂ ಸರಿ" ಎಂದು ಕಾರಿನ ಕೀ ಕ್ಯಾಚ್ ಹಾಕಿ, ಅಡ್ರೆಸ್ ಲೊಕೇಷನ್ ಕಳಿಸಿ ಆರಾಮವಾಗಿ ಟಿ–ಟ್ವೆಂಟಿ ಕ್ರಿಕೆಟ್ ಮ್ಯಾಚ್ ನೋಡುತ್ತಾ ಕುಳಿತ.

ನೀಲಿ ಜೀನ್ಸ್ ಧರಿಸಿ ಅದಕ್ಕೊಪ್ಪುವ ಟಾಪ್ ಹಾಕಿ, ವಿದೇಶಿ ಸೆಂಟನ್ನು ಮೈತುಂಬಾ ಸ್ಪ್ರೇ ಮಾಡಿಕೊಂಡ ತ್ರಿವಿಕ್ರಮೆ ಬಾಬ್ ಮಾಡಿದ ಕೂದಲನ್ನು ಹಾರಾಡಿಸುತ್ತಾ ಕಾರು ಚಲಾಯಿಸಿದಳು. ಕ್ರಿಕೆಟ್ ಮ್ಯಾಚಿನ ದಯೆಯಿಂದ ನಗರದ ರಸ್ತೆಗಳೆಲ್ಲಾ ಖಾಲಿ ಹೊಡೆಯುತ್ತಿದುದರಿಂದ 150/180ರಷ್ಟು ವೇಗವನ್ನು ಹೆಚ್ಚಿಸಿದಳು.

ಇತ್ತ ಕ್ರಿಕೆಟ್ ನೋಡುತ್ತಾ ತನ್ಮಯನಾಗಿದ್ದ ಬೇತಾಳದ ಮನಃಪಟಲದ ಮೇಲೆ ತ್ರಿವಿಕ್ರಮ ರಾಣಿಯನ್ನು ಕಳಿಸಿದ್ದು ಗೋಚರವಾಗಿಯೇ ಹೋಯಿತು. ತಾನೂ ಯಾಕೆ ಸೋಲಬೇಕೆಂದು ಒಳಗಿದ್ದ ಬೇತಾಳಮ್ಮನನ್ನು ಕರೆದು "ನೋಡು ರಾಜಾ ತ್ರಿವಿಕ್ರಮ ತನ್ನ ಕೈಯಲ್ಲಿ ಆಗಲಿಲ್ಲವೆಂದು ನನ್ನನ್ನು ಅರೆಸ್ಟ್ ಮಾಡಿಸಲು ತ್ರಿವಿಕ್ರಮೆಯನ್ನು ಕಳಿಸಿದ್ದಾನೆ. ನಾನೂ ನನ್ನ ಪಟ್ಟನ್ನೂ ವರಸೆಯನ್ನೂ ತೋರಿಸುತ್ತೇನೆ. 'ನನ್ನಗಂಡ ಬಿಜಿ ಇದ್ದಾನೆ. ಈ ಸಲ ನಿನ್ನ ಜೊತೆಗೆ ನಾನು ಬರುತ್ತೇನೆ' ಅಂತ ಹೇಳಿ, ಚೆನ್ನಾಗಿ ಡ್ರೆಸ್ ಮಾಡಿಕೊಂಡು ಆ ರಾಣಿಯನ್ನು ಮರುಳು ಮಾಡಿ ಬಾ" ಎಂದಿತು. ಇದೇ ಛಾನ್ಸು ಅಂತ ಬೇತಾಳಮ್ಮ ಆ ರಾಣಿಗಿಂತಾ ಆಧುನಿಕವಾಗಿ ಸಿಂಗರಿಸಿಕೊಂಡು ಸ್ಮಶಾನದ ಬಾಗಿಲಲ್ಲೇ ನಿಂತು, ರಾಣಿಕಾರಿಗೆ ಕೈ ತೋರಿಸಿ ನಿಲ್ಲಿಸಿ, ಮುಂದಿನ ಸೀಟಿನಲ್ಲಿ ವಿರಾಜಮಾನೆಯಾಗಿ, 'ಗಂಡನ ಬದಲು ಫಾರ್ ಎ ಚೇಂಜ್' ತಾನೇ ಬರುವೆನೆಂದಿತು.

ರಾಣಿಗೂ ಖುಷಿಯಾಗಿ ಹೇಳಿದಳು "ನೋಡು ನಾವೇನೋ ಗಂಡಂದಿರ ಕೆಲಸವನ್ನು ಈಗ ಕೈಗೊಂಡಿದ್ದೇವೆ. ಆದರೆ ಆ ಮೂರ್ಖಗಂಡಂದಿರ ಹಾಗೆ ಒಬ್ಬರು ಮೌನವಾಗಿರುವುದು, ಮತ್ತೊಬ್ಬರು ಕಥೆ ಹೇಳಿ ಪ್ರಶ್ನೆ ಕೇಳಿ 'ಸರಿಯಾದ ಉತ್ತರ ಹೇಳದಿದ್ದರೆ ತಲೆ ಸಾವಿರ ಹೋಳು' ಎಂದು ಹೆದರಿಸುವುದು ಇವೆಲ್ಲಾ ನಾನ್ಸೆನ್ಸ್ ಬೇಡ. ಸುಮ್ಮನೇ ಹಾಯಾಗಿ ಹರಟುತ್ತಾ ಹೋಗೋಣ. ಇಲ್ಲದಿದ್ದರೆ ಹೆಣ್ಣು ಎನಿಸಿಕೊಂಡು ಏನು ಲಾಭ"

ಬೇತಾಳಮ್ಮನೂ ಒಪ್ಪಿ ಹರಟುತ್ತಲೇ ಸಾಗಿದಾಗ ಇದ್ದಕ್ಕಿಂದ್ದಂತೆ "ಈ ವಾಟ್ಸ್ಆ್ಯಪ್ ಮೆಸೇಜ್ ಹೇಗಿದೆ ನೋಡು" ಫೋನನ್ನು ರಾಣಿಯ ಕಣ್ಣಮುಂದೆ ಹಿಡಿದಳು. ರಾಣಿ ಡ್ರೈವ್ ಮಾಡುತ್ತಲೇ ಓದಿದಳು.

'ಅಂಗನವಾಡಿಯ ಪ್ರೀತಿಯ ಭಗಿನಿಯರೇ ಇದೇನು ನೀವು' ನಮಗೆ ಸೀರೆ

ಬೇಡ ಅದರ ಬದಲು ಗೌರವ ಧನ ಹೆಚ್ಚಿಸಿ ಎನ್ನುವ ಇಂಥಾ ಆತ್ಮಾಘಾತವಾಗುವಂಥಾ ಹೇಳಿಕೆಯನ್ನು ಕೊಟ್ಟುಬಿಟ್ಟಿದ್ದೀರಿ? ಅದೂ 'ವಿಶ್ವಮಹಿಳಾದಿನಾಚರಣೆ' ಯ ದಿನವೇ ಇಂಥಾ ಸುದ್ದಿ ಪತ್ರಿಕೆಯಲ್ಲಿ ಬರುವಂತೆ ಮಾಡಿಬಿಟ್ಟಿದ್ದೀರಲ್ಲ ಇದು ಥರವೇ? ಇದು ನ್ಯಾಯವೇ? ಭಾರತೀಯ ಮಹಿಳೆಯ ಅಸ್ಮಿತೆಯನ್ನು ಎತ್ತಿಹಿಡಿವ, ಪಾವಿತ್ರ್ಯತೆಯನ್ನು ಕಾಪಾಡುವ, ವಿಶ್ವಮಹಿಳೆಯರ ಗಮನ ಸೆಳೆಯುವ ಸೀರೆಯಂಥಾ ಸೀರೆಯನ್ನು ಯಾರಾದರೂ ಬೇಡ ಎನ್ನುವವರುಂಟೇ? ನಿಮಗೆ ಈ ಯೋಜನೆಯ ಹಿಂದಿರುವ ವಿಶಾಲ ವ್ಯವಸ್ಥಾಲೋಕದ ಅರಿವಿಲ್ಲ ಪಾಪ! ಅದಕ್ಕೇ ಸಾರಾಸಗಟಾಗಿ ಸ್ತ್ರೀಕುಲವೇ ಬೆಚ್ಚಿಬೀಳುವಂತೆ 'ಸೀರೆಭಾಗ್ಯ' ವನ್ನು ಬೇಡವೆಂದು ತಿರಸ್ಕರಿಸಿಬಿಟ್ಟಿದ್ದೀರಿ. ಇದರಲ್ಲಿ ಎಂಥೆಂತಹ 'ಬೇಕು' ಗಳ ಪಟ್ಟಿಯಿದೆ ಎನ್ನುವುದು ಗೊತ್ತಿದೆಯೇ ನಿಮಗೆ. ನಾನು ಹೇಳುತ್ತೇನೆ. ಕೇಳುವಂಥವರಾಗಿ.

ಮೊದಲು ಕರ್ನಾಟಕದಲ್ಲಿ ಎಷ್ಟು ಅಂಗನವಾಡಿಗಳಿವೆ, ಅಲ್ಲಿ ಬೋಧಕರು, ಸಹಾಯಕರು, ಅಡುಗೆ ತಯಾರಿಸುವವರು, ಕಸಗುಡಿಸುವವರು ಹೀಗೆ ಎಲ್ಲರ ಜನಗಣತಿ ಮಾಡಬೇಕು. ಇದಕ್ಕೆ ಸಂಬಂಧ ಪಟ್ಟ ಇಲಾಖೆಯ ಜನರನ್ನು ನಿಯೋಜಿಸ ಬೇಕು. ನಂತರ ಎಷ್ಟು ಸೀರೆಗಳು ಬೇಕಾಗುತ್ತವೆ? ಅವುಗಳ ಮೊಬಲಗುಗಳೆಷ್ಟು ಮುಂತಾದವನ್ನು ಅಂದಾಜು ಪಟ್ಟಿಯಲ್ಲಿ ತಯಾರಿಸಬೇಕು. ನಂತರ ಅದರ ಖರ್ಚು ವೆಚ್ಚಗಳ ಯಾದಿ ತಯಾರಿಸಿ ಹಣಕಾಸಿನ ಇಲಾಖೆಗೆ ರವಾನಿಸಿ 'ಸ್ಯಾಂಕ್ಷನ್' ಗಾಗಿ ಕಾಯಬೇಕು. ಈ ಕಾಯಕದಲ್ಲಿ ಲೆಕ್ಕಾಚಾರಗಳನ್ನು ಅಪರತಪರವನ್ನು ತಪ್ಪದೇ ಮಾಡಲೇಬೇಕು. ಉದಾಹರಣೆಗೆ, ಸೀರೆಭಾಗ್ಯಕ್ಕೆ ಅರ್ಹರಾದ ಮಹಿಳೆಯರ ಸಂಖ್ಯೆ ಒಂದಷ್ಟು ಲಕ್ಷವಿದ್ದರೆ, ಅದನ್ನು ಇಮ್ಮಡಿಯೋ ಮುಮ್ಮಡಿಯೋ ಮಾಡಿ ಕಳಿಸಬೇಕು. ಹಣ ಬಿಡುಗಡೆಯಾಗುವ ಮುನ್ನವೇ ಟೆಕ್ಸ್ ಟೈಲ್ ಕಂಪನಿಯವರಿಗೆ ಟೆಂಡರ್ ರವಾನಿಸಬೇಕು. ಈ ಕ್ರಿಯೆಯಲ್ಲಿ ಆಪ್ತರೂ, ನೆಂಟರೂ, ಸೂಟ್ ಕೇಸ್ ದಾನಿಗಳೂ ಎಷ್ಟೆಲ್ಲಾ ಜನರನ್ನು ಒಳಗೊಂಡು ನಿಭಾಯಿಸಬೇಕು. ಆಮೇಲೆ ಸೀರೆ ಖರೀದಿ, ಗೋಡೌನಿನಲ್ಲಿ ಶೇಖರಣೆ, ಬೇಕೆಂದೇ ಕಾರ್ಯಚಟುವಟಿಕೆಯನ್ನು ನಿಧಾನಿಸಿ, ಹೆಗ್ಗಣ ಇಲಿಗಳಿಗೆ ಸಮೃದ್ಧಿ ಆಹಾರ ಒದಗಿಸಿ, ನಷ್ಟದ ಪಟ್ಟಿ ತಯಾರಿಸಿ, ಅದಕ್ಕೆ ಮತ್ತೆ ಪರಿಹಾರಧನವನ್ನು ಪಡೆದು, ಪತ್ರಿಕೆಗಳಲ್ಲಿ ಟಿವಿಗಳಲ್ಲಿ ಚಿತ್ರಸುದ್ದಿಗಳು ರಾರಾಜಿಸಿ ಟ್ರಕ್ಕು ಲಾರಿಗಳ ಸಂಭ್ರಮದ ಸುತ್ತಾಟಗಳು, ನಿಮ್ಮ ನಿಮ್ಮ ಊರುಗಳಿಗೆ ತಲುಪಿಸುವಿಕೆಯಾಗಬೇಕು.



ಏನೆಲ್ಲಾ ಕಾರ್ಯಭಾರವಿದೆ ಎನ್ನುವುದನ್ನು ನೀವು ಮೊದಲು ಅರಿಯಬೇಕಲ್ಲವೇ ?

ಅಲ್ಲಿಗೇ ಮುಗಿಯಿತೇ? ಇಲ್ಲಾ.... ಸೀರೆಗಳನ್ನು ನಿಮಗೆ ವಿತರಿಸಲು ಸಮಾರಂಭಗಳನ್ನು ಏರ್ಪಡಿಸಬೇಡವೇ? ಅದಂತೂ ಅತ್ಯಂತ ಶ್ರಮದ ಕೆಲಸ. ಅದಕ್ಕಾಗಿ ಎಷ್ಟೆಲ್ಲಾ ಪುರುಷಶ್ರೇಷ್ಠರು ಟೊಂಕಕಟ್ಟಿ ನಿಲ್ಲುತ್ತಾರೆನ್ನುವ ಅರಿವು ಪಾಪ ಹುಲುಮಾನವರಾದ ನಿಮಗಿಲ್ಲ, ಕೇಳಿ ಹೇಳುತ್ತೇನೆ. ರಾಜಧಾನಿ, ಉಪರಾಜಧಾನಿ, ಮರಿರಾಜಧಾನಿ, ಎಲ್ಲ ಸಿಟಿಗಳೂ, ಜಿಲ್ಲಾ ಕೇಂದ್ರಗಳೂ, ತಾಲ್ಲೋಕು ಕೇಂದ್ರಗಳೂ, ಗ್ರಾಮ ಕೇಂದ್ರಗಳೂ ತಮ್ಮತಮ್ಮ ವಿಸ್ತಾರ ಮತ್ತು ಯೋಗ್ಯತೆಗೆ ತಕ್ಕಂತೆ ಊರಿನ ಅತ್ಯಂತ ದೊಡ್ಡ ಮೈದಾನವನ್ನು ಆರಿಸಿ, ವೇದಿಕೆ ನಿರ್ಮಿಸಿ, ಹೂವುಬಟ್ಟೆಗಳಿಂದ ಸಿಂಗರಿಸಿ, ಕುರ್ಚಿಗಳಿಂದ ಅಲಂಕರಿಸಿ, ಅದನ್ನಲಂಕರಿಸುವ ಮಂದಿಗೆ , ಸಮಾರಂಭಕ್ಕೆ ಬರಲು ವಾಹನಗಳನ್ನೇರ್ಪಡಿಸಿ, ಬಿರಿಯಾನಿ ಭೋಜನದ ಪೊಟ್ಟಣಗಳನ್ನೂ ವಿತರಿಸಿ, ಚಪ್ಪಾಳೆ ತಟ್ಟಲು ಶಕ್ತಿ ಸಂಚಯಿಸಿ ಇದೇನು ಸಣ್ಣಕೆಲಸವೆಂದು ತಿಳಿದಿರಾ? ಮುಗಿಸುವ ಹೊತ್ತಿಗೆ ಕುರಿಕೋಣಗಳು ಬಿದ್ದುಹೋಗುತ್ತವೆ ಗೊತ್ತೇ ನಿಮಗೆ?

ಹಾಂ. ಮುಖ್ಯ ಸಂಗತಿಯನ್ನೇ ಹೇಳಲು ಮರೆತೆನಲ್ಲ? ಆ ನಿರ್ಮಿಸಿದ ವೇದಿಕೆಯ ಯೋಗ್ಯತೆಗೆ ತಕ್ಕಂತೆ ಸಮಾರಂಭದ ಅಧ್ಯಕ್ಷರೂ ಮುಖ್ಯ ಅತಿಥಿಗಳೂ ಆಗಮಿಸಬೇಕಲ್ಲವೇ? ಅದು ಮುಖ್ಯಮಂತ್ರಿಗಳಿಂದ ಹಿಡಿದು, ಅಮುಖ್ಯ ಮಂತ್ರಿಯವರೆಗೂ ಮುಂದುವರೆದು, ಮರಿಪುಢಾರಿ, ಗಿರಿಪುಢಾರಿ, ಐಎಎಸ್, ಐಪಿಎಸ್, ಉಪಜಿಲ್ಲಾಧಿಕಾರಿ ಊರಿನ ಭವಿಷ್ಯ ಮುಖಂಡ ಹೀಗೇ ಹಂತಹಂತವಾಗಿ ಬೆಳೆದು ಸಣ್ಣಗ್ರಾಮದ ಶ್ರೀಮಂತ ಜಮೀನ್ದಾರರವರೆಗೆ ವೇದಿಕೆಗೆ ತಕ್ಕಂಥಾ ಯೋಗ್ಯವ್ಯಕ್ತಿಗಳನ್ನು ಆಮಂತ್ರಿಸಿ, ವೈಭವದ ಆಹ್ವಾನಪತ್ರಿಕೆ ಮುದ್ರಿಸಿ, ಊರುಕೇರಿಗಳಿಗೆ, ಬೇಕಾದವರಿಗೆ ಬೇಡವಾದವರಿಗೆ ರವಾನಿಸಿ, ವೇದಿಕೆಯನ್ನಲಂಕರಿಸಿದ ಗಣ್ಯರಿಗೆ ಹಾರ, ತುರಾಯಿ, ಮೈಸೂರುಪೇಟ, ಏಲಕ್ಕಿಹಾರ, ಡ್ರೈಫ್ರೂಟ್ ಡಬ್ಬಗಳು. ಜರೀಶಾಲುಗಳೂ ಛೇ..ಛೇ..ಛೇ.. ಎಷ್ಟೆಲ್ಲಾ ವೈಭವದ ನೋಟಗಳಿಗೆ ನೀವು ಸಾಕ್ಷಿಯಾಗುತ್ತಿದ್ದಿರಿ? ನೀವು ಸೀರೆಪಡೆಯುತ್ತಿರುವ ಫೋಟೋಗಳು ಎಲ್ಲಾ ಪತ್ರಿಕೆಗಳ ಮುಖಪುಟಗಳಲ್ಲೂ, ವಿಡಿಯೋಗಳು ಎಲ್ಲಾ ಚಾನೆಲ್ ಗಳಲ್ಲೂ ರಾರಾಜಿಸಿ, ಚಾನಲ್ ದಾಸಯ್ಯಗಳು ಜಾಗಟೆ ಶಂಖಗಳನ್ನೂದಿ ನಿಮ್ಮೆಲ್ಲರನ್ನೂ ಎಷ್ಟು ಜನಪ್ರಿಯಗೊಳಿಸುತ್ತಿದ್ದರು! ಇಂಥಾ ಮಹಾಭಾಗ್ಯವನ್ನು ಹೀಗೆ ಕೈಚೆಲ್ಲಿ ಬಿಟ್ಟುಬಿಡುವುದೇ ತಾಯಂದಿರಾ?

ಅಲ್ಲಾ ಇಷ್ಟೆಲ್ಲಾ ಸಂಭ್ರಮ, ಸಡಗರ, ಲಾಭದ ವ್ಯವಹಾರಗಳು, ಇಡಿಗಂಟುಗಳೂ ಇದನ್ನೆಲ್ಲಾ ತ್ಯಾಗ ಮಾಡಿ, ನೀವು ಹೇಳಿದಿರೆಂದು ಕೇವಲ ಹೆಚ್ಚಿನ ಗೌರವಧನವನ್ನು ಆಯಾಸವೇ ಇಲ್ಲದೇ ನಿಮ್ಮ ಬ್ಯಾಂಕಿಗೆ ರವಾನೆ ಮಾಡಲು ಸರ್ಕಾರಕ್ಕೆ, ಮಂತ್ರಿಗಣಕ್ಕೆ, ಅಧಿಕಾರಿಗಳಿಗೆ ಒಳದೃಷ್ಟಿ ಮತ್ತು ದೂರದೃಷ್ಟಿ ಇಲ್ಲದ ಮಂಕು ಹಿಡಿದಿದೆ ಎಂದು ನೀವೆಲ್ಲಾ ಹೇಗಾದರೂ ಭಾವಿಸಿದಿರಿ ಅಮ್ಮಂದಿರಾ? ನಿಮಗೆ ಕೊಟ್ಟ ಸೀರೆಗಳು ಒಂದೇ ಒಗೆತಕ್ಕೆ ಬಣ್ಣಹೋಗಿ, ಗೂಬೆಯಾಗಿ, ಸಾರಿಸುವಬಟ್ಟೆಗೂ ಕಡೆಯಾಗಿ, ನಿಮ್ಮಮನೆಯ ಕಸವಾದರೂ ಚಿಂತೆಯಿಲ್ಲ, ಸರ್ಕಾರದ ಈ ಮಹಾಯೋಜನೆಯಿಂದ ಎಷ್ಟೆಲ್ಲಾ ಜೀವಿಗಳ ಉದ್ಧಾರವಾಗುತ್ತದೆನ್ನುವ ಅರಿವನ್ನೂ ಔದಾರ್ಯವನ್ನೂ ಬೆಳೆಸಿಕೊಳ್ಳಿ.' – ಬೇತಾಳಮ್ಮ.

ರಾಣಿ ಓದಿ ತಲೆಯಾಡಿಸುತ್ತಾ "ನಾನು ನಿನ್ನ ಈ ವಾದವನ್ನು ಒಪ್ಪಲ್ಲ" ಎಂದಳು. ಅಚ್ಚರಿಗೊಂಡ ಬೇತಾಳಮ್ಮ "ಯಾಕೆ"? ಎಂದಳು. "ನಾನಾಗಿದ್ದರೆ ಹೀಗೆ ಮೆಸೇಜ್ ಮಾಡುತ್ತಿದ್ದೆ" ಎಂದು ಹೇಳಲು ಶುರು ಮಾಡಿದಳು.


ಪ್ರೀತಿಯ ಭಗಿನಿಯರೇ

ಪುಟ್ಟ ಹೂವಿನಂಥಾ ಮನಸ್ಸಿನ ಮುದ್ದುಮಕ್ಕಳು ನಿಮ್ಮ ಅಂಗಳದಲ್ಲಿ, ನಿಮ್ಮ ತೊಡೆಯಲ್ಲಿ ಆಡಿ ಬೆಳೆಯುತ್ತಾರೆ.  ಅವರು ಭವಿಷ್ಯಭಾರತದ ಪ್ರಜೆಗಳು ಎನ್ನುವುದನ್ನು ಮರೆಯಬೇಡಿ. ಪ್ರತಿಮಗುವಿನ ಕಣ್ಣಲ್ಲೂ ಭಗವಂತನ ನೋಟವಿರುತ್ತದೆ. ಅವನು ನಿಮ್ಮನ್ನು ನೋಡುತ್ತಾನೆ. ನೀವು ಪ್ರತಿಯೊಬ್ಬರೂ ಯಶೋದೆಯ ಪ್ರತಿರೂಪ. ನಿಮ್ಮ ಮುಂದೆ ಕೃಷ್ಣ ಗೋಪಿಕೆಯರು ನಲಿದಾಡುತ್ತಿದ್ದಾರೆ. ಯಾವ ವೃತ್ತಿಯಲ್ಲೂ ಸಿಗದ ನಿರ್ಮಲ ಮನಸುಗಳು ನಿಮ್ಮ ಕೈಗೆ ಸಿಕ್ಕಿವೆ! ಯಾವ ಉದ್ಯೋಗದಲ್ಲೂ ಇಲ್ಲದ ಸ್ವರ್ಗಸುಖ ನಿಮಗೆ ದಕ್ಕಿದೆ. ನೀವು ಆ ಮಕ್ಕಳ ತಾಯಂದಿರಾಗಿ ಹೆಮ್ಮೆಪಡಿ! ನಿಮಗೆಲ್ಲಾ ಒಳಿತಾಗಲಿ. – ತ್ರಿವಿಕ್ರಮ.

"ನಿನ್ನ ವಾದಕ್ಕೆ ನನ್ನದೂ ಸಮ್ಮತಿಯಿದೆ. ನನಗೆ ಟೈಂ ಆಯಿತು. ಕ್ರಿಕೆಟ್ ಮ್ಯಾಚಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನಾದರೂ ನೋಡುತ್ತೇನೆ" ಎಂದ ಬೇತಾಳಮ್ಮ ಕಾರು ಓಡುತ್ತಿರುವಾಗಲೇ ಕಿಟಕಿಯಿಂದ ಹಾರಿ ಮಾಯವಾಯಿತು.

■

---




## ಪುಸ್ತಕ ಪರಿಚಯ

**ರಿವರ್ಸ್ ಲಂಚ**

ಆನಂದ

ತೇಜು ಪ್ರಕಾಶನ


ಬೆಲೆ : ರೂ 170/–

ಅಪರಂಜಿಯ ಕಾಲಂ, "ತುಂತುರು" ಖ್ಯಾತಿಯ ಆನಂದರ ಒಂದು ಹೊಸ ಪುಸ್ತಕ ಹೊರ–ಬಂದಿದೆ. ನಾಗೇಶ ಹೆಗಡೆಯವರು ತಮ್ಮ ಬ್ಲರ್ಬ್‌ನಲ್ಲಿ ಹೇಳುವಂತೆ ಮುದ್ದಣ ಮನೋರಮೆಯರ ಸಲ್ಲಾಪ, ಆನಂದರ ಲೇಖಣಿಯ ದೆಸೆಯಿಂದ ಈಗ ಈ "ರಿವರ್ಸ್ ಲಂಚ" ಪುಸ್ತಕದಲ್ಲಿ ಮತ್ತೆ ಮರುಹುಟ್ಟು ಪಡೆದಿರುವಂತೆ ಕಾಣುತ್ತದೆ.

"ವಾರೆ ನೋಟ" ದ ಆನಂದ ತಮ್ಮ ನೋಟವನ್ನು ವಾರೆಯಾಗಿಯೇ ಉಳಿಸಿಕೊಂಡು ಬಂದಿರುವುದು ಈ ಪುಸ್ತಕದ ಲೇಖನಗಳ ವೈಶಿಷ್ಟ್ಯ. ಓದುಗರು ಆನಂದರ ಈ ವಂಡರ್‌ಗಣ್ಣಿನ ನೋಟದ ಸವಿಯನ್ನು ಎಲ್ಲರೂ ಸವಿಯಲಿ ಎಂದು ಹಾರೈಸುತ್ತಾ, ಅಪರಂಜಿ ಲೇಖಕರಿಗೆ  ಎಲ್ಲ ಶುಭವನ್ನು ಕೋರುತ್ತಾಳೆ.

## ಪುಸ್ತಕ ಪರಿಚಯ

### ಪಿ.ಜಿ. ವುಡ್ ಹೌಸ್ ಆಯ್ದ ಕಥೆಗಳು




**ಪಾಲಹಳ್ಳಿ ವಿಶ್ವನಾಥ್**


ಕದಂಬ ಪ್ರಕಾಶನ

ಬೆಲೆ ರೂ. 200/–

ಪಿ ಜಿ ವುಡ್ ಹೌಸ್ ಬಹಳ ಕಾಲದಿಂದ ಕನ್ನಡ ಓದುಗರಿಗೆ ಪರಿಚಿತ. ಆತನ ಕಥೆಗಳನ್ನು ಇಂಗ್ಲಿಷಿನಲ್ಲಿಯಾಗಲೀ ಭಾಷಾಂತರದಲ್ಲಿಯಾಗಲೀ ಓದುವುದು ಹಿತವಾಗಿರುತ್ತದೆ. ಅಪರಂಜಿ ಬರಹಗಾ–ರರಾದ ವಿಶ್ವನಾಥ್ ಅವರು ಸುಮಾರು 17 ಕತೆಗಳನ್ನು ಈ ಪುಸ್ತಕದಲ್ಲಿ ಸಂಕಲಿಸಿದ್ದಾರೆ. ಎಲ್ಲವೂ ಅತ್ಯಂತ ಕುತೂಹಲಕಾರಿ ಕಥೆಗಳಾಗಿದ್ದು ಮೈಸೂರು ಪೇಟ, ಬ್ರಾಡ್ ಮನರ ಟೋಪಿ, ಅಮರನಾಥನ ಆತಂಗಳು ವಿಶೇಷವಾಗಿ ಸೆಳೆಯುತ್ತವೆ. ಲೇಖಕರಿಗೆ ಅಪರಂಜಿಯ ಶುಭಾಶಯ

---

### ಗುಬ್ಬಿಗಾನ




**ವೈ. ಎನ್. ಗುಂಡೂರಾವ್**

ನ್ಯೂ ವೇವ್ ಬುಕ್ಸ್, ಬಸವನಗುಡಿ,

ಬೆಲೆ ರೂ. 170/–

ಹಿರಿಯ ಬರಹಗಾರರು ಮತ್ತು ಅಪರಂಜಿಯ ಬರಹಗಾರರೂ ಆದ ಗುಂಡೂರಾವ್ ಅವರ ಇತ್ತೀಚಿನ ಪ್ರಬಂಧ ಸಂಕಲನ ಇದು. ಸುಮಾರು 20 ಪ್ರಬಂಧಗಳಿರುವ ಈ ಪುಸ್ತಕ ಲೇಖಕರೇ ಹೇಳಿಕೊಂಡಿರವಂತೆ ಮನೋಲ್ಲಾಸ–ಕರವಾಗಿಯೇ ಇದೆ. ಪ್ರಬಂಧಗಳೆಲ್ಲಾ ಲೇಖಕರ ಬದುಕಿನ ಬೇರೆ ಬೇರೆ ಸಂದರ್ಭಗಳಲ್ಲಿನ ಅನುಭವಗಳನ್ನು ಒಳಗೊಂಡಿದ್ದಾಗಿದೆ. ಹೀಗಾಗಿ ಓದುವುದಕ್ಕೆ ಇದು ಆಪ್ತವಾಗಿದೆ. ಒಂದೊಂದು ಲೇಖನವೂ ವಿಭಿನ್ನವಾಗಿದ್ದು ಓದುಗರಿಗೆ ಹೊಸ ಹೊಸ ಅನುಭವಗಳನ್ನು ತಂದುಕೊಡುತ್ತದೆ.

# ನಮ್ಮ ತಂದೆತಾಯಿಗಳು ಬಿಟ್ಟುಹೋದ ಆಸ್ತಿಗಳು

ಪ್ರಮೋದ್ ಕುಲಕರ್ಣಿ

**ಆಸ್ತಿ–1**

ಬಹಳ ಜನ ಕೇಳುವ ಒಂದು ಸಾಮಾನ್ಯ ಪ್ರಶ್ನೆಯೆಂದರೆ ನಿಮ್ಮ ತಂದೆ ತಾಯಿಗಳು ಅವರ ಜೀವಿತಾವಧಿಯ ನಂತರ ನಿಮಗಾಗಿ ಯಾವ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ ಎಂಬುದು.

ನಾನು ನನ್ನ ತಂದೆತಾಯಿಗಳು ಬಿಟ್ಟುಹೋದ 25 ಆಸ್ತಿಗಳನ್ನು ಇಲ್ಲಿ ಪಟ್ಟಿ ಮಾಡುತ್ತಿದ್ದೇನೆ. ಬಹುಶಃ ನನ್ನ ಈ ಉತ್ತರವು ಓದುಗರಿಗೆ ಆಶ್ಚರ್ಯವನ್ನುಂಟು ಮಾಡಬಹುದು.

ಸಾಮಾನ್ಯವಾಗಿ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವುದು ಹಣಕಾಸಿನ ಆಸ್ತಿ. ನಾನು ಮೊದಲು ಹಣಕಾಸಿನ ಆಸ್ತಿಯನ್ನು ಮೊದಲು ವಿಷದೀಕರಿಸಿ ಹಾಗೂ ಉಳಿದ ಆಸ್ತಿಗಳನ್ನು ಬರುವ ಕಂತುಗಳಲ್ಲಿ ವಿವರಿಸುವೆ.

ನನ್ನ ತಂದೆ ತೀರಿಹೋಗಿ (7 ನೇ ಮೇ 1994) ಆರು ತಿಂಗಳು ಆದಮೇಲೆ, ಟ್ರಂಕಿನಲ್ಲಿ ಕೆಲ NSC (ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್) ಗಳು ಸಿಕ್ಕವು. NSC ಗಳ ಒಟ್ಟು ಮೊತ್ತ ರೂಪಾಯಿ 30,000/– ( 30 ಸಾವಿರ) ಆಗಿತ್ತು.

ನಾವು ಉಳಿದ ಮಕ್ಕಳು 6 ಜನ ಆಗಿದ್ದುದರಿಂದ ನಾನು ಆ ಹಣವನ್ನು ಪೋಸ್ಟ್ ಆಫೀಸ್ ನಿಂದ ತೆಗೆದು ಎಲ್ಲರಿಗೂ ರೂಪಾಯಿ 5,000/– ದಂತೆ ಹಂಚಿದೆ. ಆಶ್ಚರ್ಯದ ಸಂಗತಿಯೆಂದರೆ ಮೊದಲು ಎಲ್ಲರೂ ಆ ಹಣವನ್ನು ತೆಗೆದುಕೊಳ್ಳಲು ನಿರಾಕರಿಸಿದರು ಹಾಗೂ ಆ ಹಣವನ್ನು ನಾನೇ ಇಟ್ಟುಕೊಳ್ಳುವಂತೆ ತಿಳಿಸಿದರು (ನನ್ನ ಅಕ್ಕ ಅಣ್ಣಂದಿರ ಈ ಸ್ವಭಾವವನ್ನು ನನ್ನ ತಂದೆತಾಯಿಗಳು ಬಿಟ್ಟು ಹೋದ ದೊಡ್ಡ ಆಸ್ತಿ ಎಂದು ನಾನು ಪರಿಗಣಿಸುತ್ತೇನೆ). ಆದರೆ ನಾನು ಎಲ್ಲರಿಗೂ ಬರುವ ಸಮನಾದ ಹಣ ರೂಪಾಯಿ 5,000/– ವನ್ನು ಖುದ್ದಾಗಿ ಎಲ್ಲರಿಗೂ ಸಂದಾಯ ಮಾಡಿದೆ.

**ಆಸ್ತಿ–2**

ನನಗೆ ನೆನಪಿರುವಂತೆ ನನ್ನ ತಂದೆ ನನ್ನ ಪಕ್ಕದಲ್ಲಿ ಕುಳಿತು ಅಂಕಗಣಿತದ ಬಿಡಿಸ ಬಹುದಾದ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ಸಾಮಾನ್ಯವಾಗಿ 2 ಗುಣಿಲೆ 2 ರಿಂದ ಹಿಡಿದು, 4*2, 8*2, 16*2 32*2, 64*2,128*2, 256*2, 512*2,1024*2 ಹೀಗೆ ಅಂಕಿ ಲಕ್ಷದ ವರೆಗೆ ಹೋಗುತ್ತಿತ್ತು ಮತ್ತು ಇದು ಪ್ರತಿದಿನ ಬೆಳಗಿನ ಹೊತ್ತು ಪುನರಾವರ್ತನೆ ಆಗುತ್ತಿತ್ತು. ಅವರು ತಮ್ಮ ಬಿಡುವಿಲ್ಲದ ದಿನಚರಿಯ ನಡುವೆಯೂ ಹೇಗಾದರೂ ಸಮಯವನ್ನು ಹೊಂದಿಸಿಕೊಂಡು ನಮ್ಮ ಇಂತಹ ಚಟುವಟಿಕೆಗಳಿಗೆ ಗಮನ ಕೊಡುತ್ತಿದ್ದರು.

ಅವರು ಹೀಗೆ ವೈಯಕ್ತಿಕ ಗಮನ ಕೊಟ್ಟಿದ್ದಕ್ಕೆ ನಾನು 100% ಪ್ರತಿಶತ ಅಂಕಗಳನ್ನು ಗಳಿಸಲು ಸಾಧ್ಯವಾಯಿತು. (ಕೂಡುವುದು, ಕಳೆಯುವುದು, ಭಾಗಾಕಾರ, ಗುಣಾಕಾರ). ನಾನು ಶಾಲೆಯಲ್ಲಿದ್ದಾಗ ಅಂದರೆ ಎರಡನೇ ತರಗತಿಯಲ್ಲಿದ್ದಾಗ ಇಂತಹ 100 ಲೆಕ್ಕಗಳನ್ನು ಅನಾಯಾಸವಾಗಿ ಹದಿನೈದು ನಿಮಿಷಗಳಲ್ಲಿ ಮಾಡಬಲ್ಲವನಾಗಿದ್ದೆ.

ನನ್ನ ತಂದೆಯವರು ತಮ್ಮ ವೈಯಕ್ತಿಕ ಗಮನವನ್ನು ಉಳಿದ ಮಕ್ಕಳಿಗೂ ತಮ್ಮ ಆಫೀಸ್ ಕೆಲಸದ ಒತ್ತಡದ ನಡುವೆಯೂ ಕೊಡುತ್ತಿದ್ದರು. (ಅಂಚೆ ಕಚೇರಿಯ ಕೆಲಸ). ಇದನ್ನು ನಾನು ನಮ್ಮ ತಂದೆಯವರು ನಮಗೆ ಕೊಟ್ಟ ಒಂದು ಆಸ್ತಿ ಎಂದು ಭಾವಿಸಿದ್ದೇನೆ. ■

# ಬಿಸಿಸಿಐ ನ ಮುಂದಿನ ಪ್ಲಾನ್

ಇ.ಆರ್. ರಾಮಚಂದ್ರನ್

ಬಿಸಿಸಿಐನ ಪ್ರಮುಖ ಮೆಂಬರ್ಗೆ ಮೈಯೆಲ್ಲಾ ಕೋಪದಿಂದ ಉರೀತಿತ್ತು.

ಅಹಮದಾಬಾದ್ ನಿಂದ ಮುಂಬೈಗೆ ಹೊರಟ ಟ್ರೈನ್ನಲ್ಲಿ ಶಿವಂ ದುಬೆ ಮತ್ತು ಅವರ ಪತ್ನಿ ಮತ್ತು ಮಗು ಮೂರನೆಯ ಎಸಿ ಸ್ಲೀಪರ್ ನಲ್ಲಿ ಮಲಗಿದ್ದಾಗ ಟಿಕೆಟ್ ಕಲೆಕ್ಟರ್ ಬಂದು ಎಬ್ಬಿಸಿ, ಅವರ ಟಿಕೆಟ್ನೋಡಿ, 'ಒಹೊ! ಶಿವಂ ದುಬೆ ಇಲ್ಲಿ ಮಲಗಿದ್ದಾರೆ! ನಿನ್ನೆ ರಾತ್ರಿ ಆಡಿದರಲ್ಲ, ಅವರೇನಾ ಇವರು, ಎಂದಾಗ, ಅವರ ಪತ್ನಿ ಆ ದುಬೆ ಟ್ರೈನ್‌ನಲ್ಲಿ ಯಾಕೆ ಬರ್ತಾರೆ! ಇವರು ಅವರಲ್ಲ ಎಂದು ಪರಿಸ್ಥಿತಿಯನ್ನು ನಿಭಾಯಿಸಿದರು!

ಆಕೆ ಹೇಳಿದ್ದು, ನಿಜವೇ! ದುಬೆ ಟ್ರೈನ್‌ನಲ್ಲಿ ಹೋಗುವ ಸ್ಥಿತಿ ಬಂದಿದೆಯೇ ನಮಗೆ? ಬಿಸಿಸಿಐನ ಮಾನ ಮೂರಾಬಟ್ಟೆ ಅಯಿತಲ್ಲ! ನಾವು ಬಿಸಿಸಿಐ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ದಿನ ಹೋಗಿ ನಮ್ಮ ಪ್ಲೇಯರ್ ಸಾಮಾನ್ಯ ನಾಗರೀಕನಾಗಿ ಟ್ರೈನ್ನಲ್ಲಿ ಓಡಾಡುತ್ತಾನೆ ಎಂದರೆ ಎಂಥಹ ಅವಮಾನ!

ತಕ್ಷಣವೇ ಪ್ರಸಿಡೆಂಟ್, ಸೆಕ್ರೆಟರಿ, ಟ್ರೆಶರರ್ಗೆ ಫೋನ್ ಮಾಡಿ ತುರ್ತು ಮೀಟಿಂಗ್ ಕರೆಯಲು ಹೇಳಿದರು. ಕಪ್ ಗೆದ್ದು ಐದನೇ ದಿವಸವಾದರೂ ಎಲ್ಲರೂ ಅಲ್ಲೇ ಬೇರೆಬೇರೆ ಪಾರ್ಟಿಗಳು, ಡ್ಯಾನ್ಸ್ ಶೊಗಳಲ್ಲಿ ಮುಳುಗಿದ್ದರು.

ಮೀಟಿಂಗ್ ಕರೆಯಲೂ ಸುಲಭವಾಯಿತು.

'ನನಗೂ ಆ ಹೆಣ್ಣು ಮಗು ಹೇಳಿದ್ದು ಸರಿ ಅನ್ನಿಸಿತು. ನಮ್ಮ ಕ್ರಿಕೆಟ್ ಹೀರೋ ಅಲ್ಲಿ ಯಾಕಿರಬೇಕಾಗಿತ್ತು. ರಾತ್ರಿ ವರ್ಲ್ಡ್ ಕಪ್ ಗೆಲ್ಲಿಸಿ ಮುಂಜಾನೆ ಮೂರನೇ ದರ್ಜೆಯ ಸ್ಲೀಪರ್ ಕೋಚಿನಲ್ಲಿ ಮಲಗಿದ್ದಾನೆ ಅಂತ. ಎಂಥಹ ನಾಚಿಗ್ಗೇಡು!'

ತಕ್ಷಣವೇ ಟ್ರೆಶರರ್ ಬಾಯಿ ಬಿಟ್ಟರು.

'ನಾನು 2 ವರ್ಷದಿಂದ ಹೇಳ್ತಾ ಇದೀನಿ. ನಮಗೇನು ದುಡ್ಡು ಕಡಿಮೇನಾ? ನಮ್ಮದೇ ಒಂದು ಪ್ಲೇನ್ ಕೊಂಡುಕೊಳ್ಳೋಣ ಅಂತ. ನಮ್ಮ ಪ್ಲೇಯರ್ಸ್ಗೆ ಏರ್ಪೋರ್ಟ್ನಲ್ಲಿ ಫ್ಲೈಟ್ಗೆ ಕಾಯುವಾಗ ಸೆಲ್ಫಿ, ಅಟೋಗ್ರಾಫ ನವರ ಕಾಟ. ಇದರಿಂದ ಮುಕ್ತಿ ನಮ್ಮದೇ ಪ್ಲೇನ್ ಇದ್ದರೆ ಒಳ್ಳೆದು. ಯಾರ ಕಾಟವೂ ಇರಲ್ಲ. ಎಷ್ಟಾಗುತ್ತೆ ದುಡ್ಡು? 10 ಕೋಟಿ? ಇಪ್ಪತ್ತು ಕೋಟಿ? 50 ಕೋಟೀನೇ ಇರಲಿ. ಬೇಗ ತೊಗೊಂಡು ಬಿಡೋಣ.'

ತಲೆ ಕೂದಲು ನರೆತ ಮೆಂಬರ್ ಒಬ್ಬರು, 'ನಾನು ಹೈಸ್ಕೂಲಿನಲ್ಲಿದ್ದು ಸೈಕಲ್ ಕಲೀತಿರುವಾಗ ನನ್ನ ಜೋಬಿನಲ್ಲಿ ಯಾವಾಗಲೂ ಎರಡು ವಾಲ್ವ್ಯೂಬನ್ನು ಇಟ್ಟುಕೊಂಡಿದ್ದೆ. ಒಂದು ಹೋದರೆ ಇನ್ನೊಂದು ಕೆಲಸಕ್ಕೆ ಬರುತ್ತೆ ಇರಲಿ ಅಂತ. ನನಗೆ ಅನ್ನುತ್ತೆ. ನಾವು ಎರಡು ಪ್ಲೇನ್ ಇಟ್ಟುಕೊಂಡರೆ ಒಳ್ಳೆದು. ಯಾವಾಗಲಾದರೂ ಕೆಲಸಕ್ಕೆ ಬರುತ್ತೆ. ಎರಡು ವರ್ಷದ ಹಿಂದೆ ರವಿಚಂದ್ರನ್ ತಾಯಿಗೆ ಹುಶಾರಿಲಿಲ್ಲ, ಟೆಸ್ಟ್ ಆಡುತ್ತಿದ್ದ ಅಶ್ವಿನ್ನ ಮನೆಗೆ ಕಳಿಸುವುದು ಎಷ್ಟು ಕಷ್ಟವಾಯಿತು. ಈಗ ಶಿವಂ ದುಬೆಗೂ ಅದೇ ತರಹ ಪ್ರಾಬ್ಲಂ ಆಯತು. ಒಂದನ್ನು ಹ್ಯಾಂಗರ್ ನಲ್ಲಿ ಹಾಕಿ ಇಡೋಣ. ಪೈಲಟ್ ಅಲ್ಲೆ ಇರಲಿ. ಮ್ಯಾಚ್ ಆಡೋ ಕಡೆ ಪೈಲಟ್ ಜೊತೆಗೆ ಪ್ಲೇನ್ ಇಡೋಣ'.

'ಇದರ ವಿಚಾರ ಇನ್ನು ಚರ್ಚೆ ಸಾಕು. ನಮಗೇನು ದುಡ್ಡು ಕಡಿಮೇನಾ? ನಾವು ಐಸಿಸಿ ಕೊಡುವ ಜುಜುಬಿ 25 ಕೋಟಿಗೆ, 5 ಪಟ್ಟು ಮೇಲೆ 132 ಕೋಟಿ ನಮ್ಮ ಪ್ಲೇಯರ್ಸ್‌ಗೆ ಬಹುಮಾನವಾಗಿ ಕೊಟ್ಟಿದೀವಿ. ನಾಳೆನೇ 2 ಬೊಯಿಂಗ್ 757ಗೆ ಆರ್ಡರ್

ಮಾಡಿ, ಜೊತೆಗೆ ಇನ್ನೆರೆಡು 20 ಸೀಟರ್ ಗಳ ಸಣ್ಣ ಪ್ಲೇನ್ ನೂ ಸೇರಿ ಆರ್ಡರ್ ಮಾಡ್ತಿನಿ. ಅವುಗಳು ನಮ್ಮ ಮೀಟಿಂಗ್ ಗಳಿಗೆ ಅಗುತ್ತೆ. ನಮ್ಮದೆ ಅದದ್ದರಿಂದ 'ಬಿಸಿಸಿಐ ಏರ್ವೇಸ್' ಅಂತ ಕರಿಯೋಣ'. ದೇಶದಲ್ಲಿ ನಮ್ಮದೇ ಏರ್ಪೋರ್ಟ್ಗಳು ಮಾಡಿಕೊಳ್ಳೋಣ. ಯಾರ ತಂಟೇನೇ ಬೇಡ. ಮುಂದೆ ವಿದೇಶದಲ್ಲೂ ಏರ್ಪೋರ್ಟ್ ಗೆ ಜಾಗ ನೋಡೋಣ.'

'ಇನ್ನೊಂದು ಪ್ರಾಬ್ಲಂ ವಕ್ರಿಸಿದೆ ನಮ್ಮ ಪ್ಲೇಯರ್ಸ್ಗೆ. ನಾನು ಇದನ್ನು ವರ್ಲ್ಡ್ ಕಪ್ ನಲ್ಲಿ ಶ್ರೀ ಲಂಕಾದಲ್ಲಿ ನೋಡಿದೆ. ನಮ್ಮ ಪ್ಲೇಯರ್ಸ್ ಇದ್ದ ಹೊಟೆಲ್ ನಲ್ಲಿ ಅವರಿಗೆ ಮಲಗಲೂ ಫ್ಯಾನ್ಸ್ ಬಿಡಲಿಲ್ಲ. ಗೆದ್ದು ಬಂದರೆ, ರಾತ್ರಿಯೆಲ್ಲಾ ಹೊಟೆಲ್ ಸುತ್ತಲೂ ನಿಂತು ಕೂಗುತ್ತಾ ನಿಂತಿದ್ದರು.  ಇದು ಎಲ್ಲಾ ಕಡೆಯೂ ಅಗ್ತಿದೆ. ಮುಂದೆ ಇಂಗ್ಲೆಂಡ್ ಟೂರ್ ಇದೆ. ಅಲ್ಲಿ ಹೇಗೆ ಮ್ಯಾನೇಜ್ ಮಾಡ್ತಿವೋ ಹೇಗಾಗುತ್ತೋ, ನನಗಂತೂ ಏನೂ ತೋಚ್ತಿಲ್ಲ. '

'ರಾಣಿ ಎಲಿಜಬೆತ್ ಹೋದ ಮೇಲೆ ಬಕಿಂಗ್ಹ್ಯಾಂ ಅರಮನೆ ಅರ್ಧಕ್ಕರ್ಧ ಖಾಲಿ ಅಗಿದೆ, ಚಾರ್ಲ್ಸ್ ಅವರ ಹೆಂಡತಿಗೆ ಕಡಿಮೆ ಜಾಗವಾದರೆ ಸಾಕಂತೆ. ನಿಮ್ಮ ಪೋಲೊ ಸ್ನೇಹಿತ ಅದನ್ನು ಕೊಡಿಸಲು ಸಾಧ್ಯವೇ?'

'ಅವರ ಸದ್ಯಭಾವ ಮೈದ ಅವರಿಗೆ ಬಕಿಂಗ್ ಹ್ಯಾಂನಲ್ಲೆ ಕೆಲಸ! ಅಲ್ಲಿ ಅವರು ಸ್ಟಿವರ್ಡ್ ಆಗಿ ಕೆಲಸಮಾಡ್ತಾರೆ. ಅವರನ್ನು ಸಂಪರ್ಕಿಸಿ ಅರಮನೆಯನ್ನು ಕೊಡಿಸುವ ಜವಾಬ್ದಾರಿ ನನ್ನದು'.

'ಬಕಿಂಗ್ ಹ್ಯಾಂ ಅರಮನೆ ದೊಡ್ಡದಾಗಲ್ವೆ? ' ಹುಟ್ಟಿದಾಗಿಂದ 1-bhk ಲಿ ಇದ್ದ ಮೆಂಬರ್ನಿಂದ ಗೊಣಗು.

'ನಾವು ಈಗ ಪ್ಲೇಯರ್ಸ್ ಜೊತೆಗೆ ಅವರ ಗರ್ಲ್ ಫ್ರೆಂಡ್ಸ್, ಹೆಂಡತಿ ಮಕ್ಕಳನ್ನು ಕಳುಹಿಸಿತ್ತಿದ್ದೀವಿ. ಅವರ ಜೊತೆ ಪ್ಲೇಯರ್ಸ್ನ ತಂದೆತಾಯಿ, ಅತ್ತೆ, ಮಾವನೂ ಹೋಗಲಿ ಬಿಡಿ. ನಮಗೇನು ದುಡ್ಡು ಕಡಿಮೇನಾ?'

'ಆದರೆ ರಾಜ ಮಾಹಾರಾಜರ ಅರಮನೆಯಲ್ವಾ? ಖರ್ಚು ಜಾಸ್ತಿಯಾಗುತ್ತೆ'.

'ಆಗಲಿ. ನಮಗೇನು ದುಡ್ಡು ಕಡಿಮೇನಾ? ಚಾರ್ಲ್ಸ್ ಜೊತೆ ಮಾತನಾಡಿ ಇದನ್ನು ಫಿಕ್ಸ್ ಮಾಡಿಬಿಡಿ. ಅದರ ಜೊತೆಗೆ ಬಕಿಂಗ್ಹ್ಯಾಮ್ ಪ್ಯಾಲೆಸ್ನ ಪೊಲಿಸ್ – ಬಾಬೀಸ್ನ ಕೂಡ ಬುಕ್ ಮಾಡ್ಬಿಡಿ. ನಮ್ಮ ಪ್ಲೆಯರ್ಸ್ ಸೆಕ್ಯೂರಿಟಿಗೂ ಒಳ್ಳೆದು. ಸಂಜೆ ಮಕ್ಕಳು ಅವರ ಜೊತೆ ಅಡಬಹುದು.  ಬೇರೆ ಟಾಪಿಕ್ ಏನಾದರೂ ಇದೆಯಾ? '

'ಯು. ಎಸ್.ಎ. ಕ್ರಿಕೆಟ್ ಬೋರ್ಡ್ ಆ ದೇಶದಲ್ಲಿ ಬಂದು ಅಡುವುದಕ್ಕೆ ನಿಮಂತ್ರಣ ನೀಡಿದ್ದಾರೆ. ಅಲ್ಲಿ ವೈಟ್ ಹೌಸ್ನ ಒಂದು ಪೂರ್ತಿ ವಿಂಗ್ ನಮಗೆ ಇರಲಿಕ್ಕೆ ಕೊಡ್ತಾರಂತೆ.'

'ವಂಡರ್ಫುಲ್!'

'ಆದರೆ ಒಂದು ಕಂಡಿಷನ್ ಹಾಕಿದ್ದಾರೆ. ಮ್ಯಾಚ್ಗಳಲ್ಲಿ 1 ಮಿಲಿಯನ್ ಡಾಲರ್ ಗೇಟ್ ಮನಿ ಭರವಸೆ ಕೊಟ್ಟರೆ ಅಲ್ಲಿನ ಪ್ರೆಸಿಡೆಂಟ್ ಮ್ಯಾಚಿಗೆ ಮೊದಲು ಬಂದು ಪ್ಲೇಯರ್ಸ್ ಜೊತೆಗೆ ಕೈಕುಲಿಕಿ, ಫೋಟೊ ತೆಗಿಸಿಕೊಳ್ತಾರಂತೆ. ಅದು ಸಾಧ್ಯನಾ?'

'ನಾವು 5 ಮಿಲಿಯನ್ ಡಾಲರ್ಗೆ ಭರವಸೆಗೆ ರೆಡಿಯೆಂದು ಹೇಳಿದ್ದೀವಿ!'

'ಅದಕ್ಕೇನು ಅವರ ಉತ್ತರ'?

'ಶಹಭಾಶ್ ಹೇಳಿ ಟಾಸ್ ಅವರೇ ಮಾಡ್ತಾರಂತೆ. ಇದು ಪಕ್ಕ ಡೀಲ್ ಎಂದಿದ್ದಾರೆ!'


■

# ಸುಂಕ ತೆತ್ತ ಸುಗುಣಾಕರ!

ಒಂದಾನೊಂದು ಕಾಡಿನಲ್ಲಿ ಸುಗುಣಾಕರನೆಂಬ ಮರ ಕಡಿಯುವವನು, ತನ್ನ ಜೀವನಕ್ಕಾಗಿ ಮರ ಕಡಿಯಲು ಹೋಗಿದ್ದ.



ಮರ ಕಡಿಯುವ ಭರಾಟೆಯಲ್ಲಿ ಅವನ ಕೊಡಲಿ ಹಾರಿ ಹತ್ತಿರದ ನದಿಯಲ್ಲಿ ಮುಳುಗಿಹೋಯಿತು.



ಸುಗುಣಾಕರ ಮೇಲಿನ ಕರುಣೆಯಿಂದ ದೇವತೆಯೊಂದು ಪ್ರತ್ಯಕ್ಷವಾಯಿತು.




ಸತ್ಯಸಂಧನಾದ ಸುಗುಣಾಕರ 'ಇಲ್ಲ' ಅಂದ.



ಸುಗುಣಾಕರ ಬೆಳ್ಳಿಯೂ ತನ್ನದಲ್ಲವೆಂದು ಹೇಳಿದ್ದರಿಂದ ಸಂತಸಗೊಂಡು ದೇವತೆ ಮೂರನ್ನೂ ಅವನಿಗೆ ಬಳುವಳಿಯಾಗಿ ನೀಡಿತು.




ಸುಗುಣಾಕರ ಆಶ್ಚರ್ಯ ಚಕಿತನಾಗಿ ದೇವತೆಗೆ ವಂದಿಸಿದ.



ಸುಗುಣಾಕರ ಆನಂದತುಂದಿಲನಾಗಿ ಊರಿಗೆ ನಡೆದುಬಂದ.







**ನೀತಿ: H1B ಬೇಡ**

**ತೆಪ್ಪಗೆ ಮನ್ಲಿರು!!**

ದಂಣಆ

- ✓ ಆಶೀರ್ವಾದಗಳಿಗೆ ಬದುಕುಳಿದವರು, ಶಾಪಗಳಿಗೆ ಸತ್ತವರು ಯಾರೂ ಇಲ್ಲ.
- ✓ ಇಫ್ ಇಟ್ ಈಸ್ ನಾಟ್ ಯುವರ್ಸ್ ಡೋಂಟ್ ಟೇಕ್ ಇಟ್; ಇಫ್ ಇಟ್ ಈಸ್ ನಾಟ್ ರೈಟ್ ಡೋಂಟ್ ಡು ಇಟ್; ಇಫ್ ಇಟ್ ಈಸ್ ನಾಟ್ ಟ್ರು ಡೋಂಟ್ ಸೆ ಇಟ್. ಇಫ್ ಯು ಡೋಂಟ್ ನೊ ಬಿ ಕ್ವೈಟ್.
- ✓ ಸೋಲುವುದು ನಿಜವಾದ ಅವಮಾನ ಅಲ್ಲ. ಆದರೆ ಸೋತಾಗ ಎದ್ದು ನಿಲ್ಲದಿರುವುದು ನಿಜವಾದ ಅವಮಾನ.
- ✓ ಪಂಚಾಂಗ ಬರೆದವನು, ಕುಂಡಲಿ ಹಾಕಿದವನು, ಜಾತಕ ನೋಡಿದವನು, ಜ್ಯೋತಿಷ್ಯ ಹೇಳುವವನು, ಎಲ್ಲಾ ಮನುಷ್ಯನೇ.. ಎಲ್ಲಾ ಮಾನವನೇ ನಿಶ್ಚಯಿಸುವದಾದರೆ ಭಗವಂತನಿಗೇನು ಕೆಲಸ?
- ✓ ಡೈರಕ್ಷನ್ ಈಸ್ ಮೋರ್ ಇಂಪಾರ್ಟೆಂಟ್ ದ್ಯಾನ್ ದಿ ಸ್ಪೀಡ್, ಯು ಕೆನ್ ಗೊ ಫಾಸ್ಟ್ ಇನ್ ದಿ ರಾಂಗ್ ಡೈರೆಕ್ಷನ್.
- ✓ ಮನೆಯಲ್ಲಿ ಸೋಫಾ ಸೆಟ್, ಡಿನ್ನರ್ ಸೆಟ್, ಮೇಕಪ್ ಸೆಟ್ ಇಟ್ಟುಕೊಂಡಿದ್ದರೂ ಸರಿಯಾದ ಮೈಂಡ್ ಸೆಟ್ ಇಲ್ಲದಿದ್ದರೆ ಎಲ್ಲವೂ ಸೆಟ್ ಆಗಲಾರ.
- ✓ ವಿಶ್ರಾಂತಿಯನ್ನು ಪಡೆಯಬೇಕು, ಆದರೆ ಕೊಟ್ಟ ಕೆಲಸವನ್ನು ಮುಗಿಸಿದ ಮೇಲೆ.
- ✓ ವಾಟೆವರ್ ಯು ಡು ಗಿವ್ ಯುವರ್ 100% ಅನ್‌ಲೆಸ್ ಯು ಆರ್ ಡೊನೇಟಿಂಗ್ ಬ್ಲಡ್.
- ✓ ನಮ್ಮ ಕೈ ಹಿಡಿದವರೆಲ್ಲ ನಮ್ಮ ನಮ್ಮನ್ನು ಮೇಲೆತ್ತುವವರೆಂದುಕೊಂಡರೆ ಅದು ತಪ್ಪು. ಎಷ್ಟೋ ಬಾರಿ ಅವರು ಮೇಲೇಳಲು ನಮ್ಮ ಕೈ ಹಿಡಿದಿರುತ್ತಾರೆ.
- ✓ ತಪ್ಪು ಆಕಸ್ಮಿಕ ಆದರೆ ಸುಳ್ಳು ವಂಚನೆ ಆಕಸ್ಮಿಕವಲ್ಲ, ಆಯ್ಕೆಗಳು.
- ✓ ಫಿಟ್‌ನೆಸ್ ಈಸ್ ಮೋರ್ ಅಬೌಟ್ ಫೀಲಿಂಗ್ ಬೆಟರ್ ದ್ಯಾನ್ ಜಸ್ಟ್ ಲುಕಿಂಗ್ ಬೆಟರ್. ಲುಕಿಂಗ್ ಗುಡ್ ಈಸ್ ಟೆಂಪೊರರಿ. ಫೀಲಿಂಗ್ ಗುಡ್ ಈಸ್ ಟೈಂಲೆಸ್.
- ✓ ಬರೆದಿಟ್ಟಂತೆ ಜೀವನ ನಡೆಸಲು ಯಾರಿಗೂ ಸಾಧ್ಯವಿಲ್ಲ. ಆದರೆ ಬರೆದಿಡುವಂತೆ ಬದುಕಲು ಸಾಧ್ಯವಿದೆ.
- ✓ ಗುರಿಯನ್ನು ತಲುಪಲಾಗದೆ ಇರುವುದು ಸೋಲಲ್ಲ. ತಲುಪುವುದಕ್ಕೆ ಒಂದು ಗುರಿಯೇ ಇಲ್ಲದಿರುವುದು ಬದುಕಿನ ನಿಜವಾದ ಸೋಲು.
- ✓ ಪೀಪಲ್ ಶುಡ್ ಲಾಫ್ ವಿತ್ ಈಚ್ ಅದರ್ ಅಂಡ್ ನಾಟ್ ಅಟ್ ಈಚ್ ಅದರ್.
- ✓ ಬ್ರೇಕಿಂಗ್ ನ್ಯೂಸ್ ಎಂದಾಗ ಬ್ರೇಕ್ ಆಗಿದ್ದಾದರೂ ಏನು?
- ✓ ಎ ಕೋಚ್ ಡಸಂಟ್ ಹ್ಯಾವ್ ಟು ಬಿ ಆನ್ ದಿ ಫೀಲ್ಡ್.

■

# ಈ ಬೆಂಗಳೂರು ನಮಗಲ್ಲ

ಪಾಲಹಳ್ಳಿ ವಿಶ್ವನಾಥ್

ರಾಕೇಶನ ವಿಷಯದಲ್ಲಿ ಜೀವ್ಸ್ ತಪ್ಪು ಮಾಡಿರಬಹುದು ಎಂಬ ಅನುಮಾನ ಬಂದಿತ್ತು. ಜೀವ್ಸ್ ಗೊತ್ತಲ್ಲ? ನನ್ನ ಅಡಿಗೆಯವ, ನನ್ನ ಕಾರ್ಯದರ್ಶಿ, ಆಗ ಈಗ ತೊಂದರೆಗಳು ಬಂದರೆ ಅದನ್ನು ನಿವಾರಿಸುವ ಆಪತ್ಬಾಂಧವಕೂಡ ! ಈ ಪ್ರಕರಣ ಶುರುವಾಗಿದ್ದುಒಂದು ಬೆಳಿಗ್ಗೆಯೇ ! ನನ್ನಜೀವನ ಹೀಗೇ ಆಗಿಬಿಟ್ಟಿದೆ. ನಾನೋ ರಾತ್ರಿ ಬಹಳತಡವಾಗಿ ಮಲಗಿಕೊಳ್ಳುವವನು; ಕ್ಲಬ್ಬು, ಗೆಳೆಯರು ಎಲ್ಲಾ ಆದ ಮೇಲೆ ಟಿವಿಯಲ್ಲಿ ನನ್ನಂತವರಿಗೇ ಮಾಡಿದ್ದ ಹಳೆಯ ಸಿನೆಮಾಗಳು. ಆದ್ದರಿಂದ ಬೆಳಿಗ್ಗೆ ನಿದ್ರೆ ನನಗೆ ಮುಖ್ಯ. ಆದರೆಜನ ಬೆಳಿಗ್ಗೆ ನನ್ನನ್ನು ನಿದ್ದೆ ಮಾಡಲು ಬಿಡುವುದೇ ಇಲ್ಲ. ತಮ್ಮ ತೊಂದರೆಗಳನ್ನು ನನ್ನ (ಅಂದರೆ ಜೀವ್ಸ್) ಮೇಲೆ ಹೊರಿಸುವ ಗೆಳೆಯರಿಗೂ, ಅಗಾಥಾ ಚಿಕ್ಕಮ್ಮ ಎಂದೆನಿಸಿಕೊಂಡಿರುವ ದುರ್ಗಾವತಿದೇವಿಯವರಿಗೂ ಬೆಳಿಗ್ಗೆಯೇ ಆಗಬೇಕು! ಸರಿ, ಈವತ್ತೂ ಯಾರೋ ಬೆಲ್ಮಾಡುತ್ತಿದ್ದಾರೆ ! ಜೀವ್ಸ್ ಯಾರನ್ನೋ ಕರೆದುಕೊಂಡು ಬಂದು 'ಸಾರ್' ಎಂದ. ಕಣ್ಣು ಬಿಟ್ಟು ನೋಡಿದಾಗ ಇದೇನು ಭ್ರಮೆ ಎಂದುಕೊಂಡೆ. ನನಗೆ ತಿಳಿದ ಹಾಗೆ ದೂರದಲ್ಲಿ ಕೆಂಗೇರಿಯ ಹತ್ತಿರದ ಹಳ್ಳಿಯಲ್ಲಿ (ಹೆಸರೇ ನೆನಪಿಗೆ ಬರ್ತಾ ಇಲ್ಲ) ಇರಬೇಕಾದ ರಾಕಿ ! ರಾಕೇಶ ಪಿನಾಕಿ ! ನನ್ನ ತರಹವೇ ಮಧ್ಯಾಹ್ನದ ಮುಂಚೆ ಎದ್ದೇಳದ ಸ್ವಭಾವದವನು !

ರಾಕೇಶ ಒಂದು ರೀತಿಯ ಕವಿ. ಅವನೇ ಹೇಳಿಕೊಳ್ಳುವಂತೆ ಕವಿತೆಯೇ ಅವನ ಆದಿಯಂತೆ, ಅಂತ್ಯವಂತೆ ! ನಿಜ ಹೇಳಬೇಕೆಂದರೆ ಅವನು ಅಷ್ಟೇನೂ ಬರೆದಿಲ್ಲ. ಯಾವುದೂ ಪ್ರಕಟವಾಗಿಯೂ ಇಲ್ಲ. ಪ್ರಚಾರದಲ್ಲಿ ಅವನಿಗೆ ನಂಬಿಕೆ ಇಲ್ಲವಂತೆ. ಪ್ರತಿವಾರದ ಮೊದಲ ಎರಡುದಿನಗಳುಕವಿತೆಗೆ ಮೀಸಲಾಗಿಡುತ್ತಾನಂತೆ. ಬರೆಯುತ್ತಾನೋ ಇಲ್ಲವೋ ಮುಖ್ಯವಲ್ಲ. ಬೇರೆಯ ಸಮಯದಲ್ಲಿ ಏನೂ ಮಾಡದವ (ಅಂದರೆ ನಮ್ಮ ಪ್ರಕಾರ) ನಮ್ಮ ರಾಕಿ. ಒಂದು ದಿನ ಅವನ ಹಳ್ಳಿಗೆ ಹೋದಾಗ ಹತ್ತಿರದ ಹೂತೋಟದಲ್ಲಿ ಹಾಗೇ ಕುಳಿತಿದ್ದ. ಏನೋ ಮಾಡ್ತಿದೀಯಾ ಎಂದರೆ ನೋಡು, ಆ ಹೂವು ಅರಳುವುದನ್ನೇ ಗಮನಿಸುತ್ತಿದ್ದೇನೆ. ಎಲ್ಲರಿಗೂ ಆ ಸೌಂದರ್ಯೋಪಾಸನೆ ಇದ್ದಿದ್ದರೆ ಎನ್ನಿಸುತ್ತೆ. ಶ್ರೀಮಂತ ತಂದೆತಾಯಿಯರು, ಆದರೆಅವರು ಅವನ ಚಿಕ್ಕಂದಿನಲ್ಲೇ ತೀರಿಹೋಗಿದ್ದರು. ಅವರ ಹಣವನ್ನೆಲ್ಲಾ ಅವನ ಅತ್ತೆ (ತಂದೆಯ ತಂಗಿ) ಶಕುಂತಲಾ ದೇವಿಯವರ ಹತ್ತಿರ ಬಿಟ್ಟರಂತೆ. ಅವನ ಜೀವನೋಪಾಯಕ್ಕೆಎಂದು ಅವನ ಅತ್ತೆ ಪ್ರತಿ ತಿಂಗಳೂಹಣ ಕಳಿಸುತ್ತಿದ್ದರು. ಆದರೆ ಹುಡುಗ ವಿವೇಚನೆಯಿಂದ ಇರಲಿ ಎಂದು ಕಡಿಮೆ ಹಣವನ್ನೇ ಕೊಡುತ್ತಿದ್ದರು. ಅವನೇನೂ ಕೇಳುತ್ತಿರಲಿಲ್ಲವಾದರೂ ನನ್ನಂಥ ಗೆಳೆಯರು ಅವನ ಸೌಂದರ್ಯೋಪಾಸನೆಯನ್ನು ಮೆಚ್ಚುತ್ತಾ ಆಗ ಈಗ ಸ್ವಲ್ಪ ಹಣ ಕೊಡುತ್ತಿದ್ದೆವು. ಅಂತೂ ರಾಕಿ ಹೀಗೆ ಆ ಹಳ್ಳಿಯಲ್ಲಿ ತನ್ನ ಜೀವನವನ್ನು ನಡೆಸುತ್ತಿದ್ದ.

ಹೀಗಿದ್ದವನು ಬೆಳಿಗ್ಗೆಯೇ ಬಂದು ನನ್ನ ನಿದ್ದೆ ಹಾಳುಮಾಡುತ್ತಿದ್ದ. 'ಏನೋ ನಿನ್ನ ಗೋಳು' ಎಂದು ಕೇಳಿದೆ. "ನೋಡು ಬರ್ಟೀ, ನೀನುಕೂಡ ಜೀವ್ಸ್ ! ನನ್ನ ಅತ್ತೆ ಈ ಪತ್ರ ಬರೆದಿದ್ದಾರೆ" 'ಏನು ಬರೆದಿದ್ದಾರೋ ಓದು' ಎಂದಾಗ ರಾಕೇಶ ಶುರುಮಾಡಿದ.." ನನಗೆ ಬೆಂಗಳೂರಿನ ಬಗ್ಗೆ ಇರುವ ಕುತೂಹಲ ನಿನಗೇ ಗೊತ್ತು ! ಅಲ್ಲಿಯ ಜೀವನ ಹೇಗಿರುತ್ತೋ ಎಂದು ನಾನು ಚಿಕ್ಕವಳಾಗಿದ್ದಿನಿಂದಲೂ ಯೋಚಿಸುತ್ತಲೇ ಇದ್ದೇನೆ.

ನಿಮ್ಮ ಸೋದರ ಮಾವನವರನ್ನು ಎಷ್ಟು ಕೇಳಿದರೂ ಅವರು ಕರೆದುಕೊಂಡು ಹೋಗಲಿಲ್ಲ. ಅಂತೂ ನಾನಾಯಿತು. ನಮ್ಮ ಹೊಲ ಗದ್ದೆಗಳಾದವು, ಈ ಪುಟ್ಟೂರು ಆಯಿತು ಅಷ್ಟೇ ನನ್ನ ಜೀವನ! ಇನ್ನು ಎಷ್ಟು ದಿನ ಎಂದು ನಿನಗೇ ಗೊತ್ತು." "ಏನಾಗಿದೆಯೋ ನಿಮ್ಮ ಅತ್ತೆಗೆ'ಎಂದು ಕೇಳಿದಾಗ ರಾಕೇಶ' ಏನಿಲ್ಲ, ಸರಿಯಾಗಿಯೇ ಇದ್ದಾರೆ.... ನಾಟಕ ಆಡದಿದ್ದರೆ ಆವರಿಗೆ ತಿಂದದ್ದುಜೀರ್ಣವಾಗೋಲ್ಲ, ಸರಿ, ಮುಂದೆ ಓದ್ತೀನಿ "ಏನೇ ಆಗಲಿ ನನಗೆ ಸಿಗದಿದ್ದು ನಿನಗಾದರೂ ಸಿಗಲಿ. ಆ ಜೀವನವನ್ನು ನೀನಾದರೂ ಅನುಭವಿಸು. ನಿಮ್ಮ ತಂದೆ ತಾಯಿಯರ ಹಣದಿಂದ ನಾನು ನಿನಗೆ ಪ್ರತಿ ತಿಂಗಳೂ ಕಳಿಸುತ್ತಿದೇನಲ್ಲವೆ. ಈಗ ನನ್ನ ಹಣದಿಂದಲೇ ನಾನು ನಿನಗೆ ಸ್ವಲ್ಪ ಭಾಗವನ್ನು ಪ್ರತಿ ತಿಂಗಳೂ ಕಳಿಸುತ್ತೇನೆ, ನೀನಾದರೂ ಬೆಂಗಳೂರಿಗೆ ಹೋಗಿ ಆಭವ್ಯ ನಗರಿಯನ್ನು ಅನುಭವಿಸು. ನೀನು ಈಗ ಇರುವಹಳ್ಳಿಯನ್ನು ಬಿಟ್ಟು ಬೆಂಗಳೂರಿಗೆ ಹೋಗು. ಅಲ್ಲಿರುವ ಖ್ಯಾತ ಹೋಟಲುಗಳಲ್ಲಿ ತಿಂದು ಬಾ. ಥಿಯೇಟರುಗಳಲ್ಲಿ ಸಿನೆಮಾ ನೋಡಿಬಾ, ನಾಟಕಗಳನ್ನು ನೋಡಿಬಾ. ಆ ಮಹಾನಗರದ ಜೀವನವನ್ನು ಅನುಭವಿಸು. ಆದರೆ ಒಂದು ಮಾತ್ರ ಮರೆಯಬೇಡ ಆ ನಿನ್ನ ಅನುಭವಗಳನ್ನು ನನಗೆ ಪ್ರತಿವಾರವೂ ಬರೆದು ತಿಳಿಸು. ಯಾವ ವಿವರವನ್ನೂ ಬಿಡಬೇಡ ಆದಷ್ಟು ಬೇಗ ಈಕೆಲಸವನ್ನು ಮಾಡು 'ನಿನ್ನ ಪ್ರೀತಿಯ ಅತ್ತೆ' ಶಕುಂತಲಾದೇವಿ!"

ರಾಕೇಶ ಈ ಕಾಗದ ಓದಿದ ಮೇಲೆ 'ಅಲ್ಲ ಕಣೋ ! ಸಂತೋಷ ಪಡಬೇಕು. ನೀನೋ ಅಳತಾ ಇದ್ದೀಯಾ?' "ಏನು ಸಂತೋಷ ಬರ್ಟಿ ! ನಿನ್ನ ಬೆಂಗಳೂರು ಯಾರಿಗೆ ಬೇಕು ? ಎಲ್ಲಾ ಕೃತಕ ಜೀವನ ! ಬಣ್ಣದ ಬದುಕು.ಆ ಟ್ರಾಫಿಕ್ ನಿನ್ನಂತಹವರಿಗೇ ಸರಿ ! ನಾನು ನನ್ನ ಹಳ್ಳಿಯನ್ನು ಬಿಟ್ಟು ಬರಲಾರೆ. ಆದರೆ ಇಲ್ಲ ಎಂದರೆ ಆ ನನ್ನ ಅತ್ತೆ ಏನು ಮಾಡ್ತಾರೋಗೊತ್ತಿಲ್ಲ. ಕಳಿಸ್ತಾ ಇರೋ ದುಡ್ಡೂ ಹೋಗಬಹುದು ಈಗ ಜೀವ್ಸ್ ಏನು ಮಾಡೋಣ? "ಹಾಗೇ ನಾವು ಯೋಚಿಸ್ತಾ ಕುಳಿತಿದ್ದಾಗ ಜೇವ್ಸ್ "ಸಾರ್, ಒಂದೇ ಉಪಾಯ ಹೊಳೀತಾ ಇದೆ. ಯಾರಾದರೂ ಬೇರೆಯವರು ಈಊರಿನ ವೈಭವಗಳನ್ನೆಲ್ಲಾ ನೋಡಿದ ಹಾಗೆ ಪ್ರತಿವಾರವೂ ಶಕುಂತಲಾದೇವಿಯವರಿಗೆ ಬರೆಯುವುದು" ' ಸರಿಯಾ ರಾಕೇಶ? "ಎಂದು ಕೇಳಿದೆ. ಆದರೆ ಬರೆಯುವರು ಯಾರು? "ಇನ್ನು ಯಾರು ಜೀವ್ಸರೀಬೇಕಾಗುತ್ತೆ". ಜೀವ್ಸ್ ಒಪ್ಪಿಕೊಂಡ.

ಸರಿ, ಶಕುಂತಲಾದೇವಿಯವರಿಗೆ ರಾಕೇಶನಿಂದ (ಅಂದರೆ ಜೀವ್ಸ್ ಇಂದ) ಪತ್ರಗಳು ಹೋಗಲು ಶುರುವಾಯಿತು."ಅತ್ತೆ, ಈವತ್ತು ಗಾಂಧಿಬಜಾರಿನ ವಿದ್ಯಾ ಭವನ ಎಂಬ ಹೊಟೇಲಿಗೆ ಹೋಗಿದ್ದೆ. ಒಳಹೋಗಲು ಬಹಳ ಜನ ಕಾದಿದ್ದರು ತಿರುಪತಿ ನೆನಪಿಗೆ ಅಂದಿತು. ಒಳಗೆ ಹೋದರೆ ಗೋಡೆಯ ಮೇಲೆಲ್ಲಾ ಗಣ್ಯರ ಚಿತ್ರಗಳು! ದೋಸೆಯೋ ! ನಾನು ಹೇಳುವುದಿಲ್ಲ. ನೀನೇ ಬಂದು ತಿನ್ನಬೇಕು" ಎಂದು ಮೊದಲ ಪತ್ರ ಹೋಯಿತು "ಈವತ್ತು ಕೂಕೂ ಮಾಲ್ ಗೆ ಹೋಗಿದ್ದೆ. ಹೇಗೆ ಬಣ್ಣಿಸಲಿ ಅತ್ತೆ ಈ ಅಂಗಡಿಗಳ ಸೊಬಗನ್ನು ! ದೇವೇಂದ್ರ ಇದನ್ನು ನೋಡಿ ನಾಚಿ ತನ್ನ ಅಮರಾವತಿಯ ಸುಂದರೀಕರಣಕ್ಕೆ ಹೋಗಬೇಕಾಗುತ್ತದೆ" : ಅತ್ತೆ ಈವತ್ತು ಲಾಲ್ಬಾಗಿನ (ಅದರ ಬಗ್ಗೆ ಇನ್ನೊಂದು ದಿನ) ಹತ್ತಿರದ ಟಿಫಿನ್ ರೂಂ ಎಂಬ ಹೋಟೆಲಿಗೆ ಹೋಗಿದ್ದೆ. ಇಲ್ಲಿಯೇ ಬಹಳ ಹಿಂದೆ ರವೆ ಇಡ್ಲಿ ಹುಟ್ಟಿತಂತೆ, ಇಲ್ಲಿಯ ದೋಸೆಯೂ ವಿಶ್ವ ವಿಖ್ಯಾತ. ದೆಹಲಿಗೆ ಯಾರಾದರೂ ಹೊರಗಿನ ನಾಯಕ ನಾಯಕಿಯರು ರು ಬಂದರೆ ಅವರಿಗೆ ಇಲ್ಲಿಂದಲೇ ದೋಸೆಯ ಸ್ಸರಬರಾಜು !" "ಅತ್ತೆ ! ನೀನು ವಿಧಾನ ಸೌಧ ನೋಡಲೇ ಬೇಕು. ಯಾವ ಅರೆಮನೆಗೂ ಕಡಿಮೆಯಿಲ್ಲ. ಅದರಲ್ಲಿ ಕೂರುವರು ಯಾವ ರಾಜರಿಗೂ ಕಡಿಮೆಯಿಲ್ಲ" "ಕೋಶಎಂಬ ಹೊಟೇಲಿದೆ. ಹಿಂದಿನಕಾಲದ ಹೋಟೆಲು. ಆಂಗ್ಲ ಅಧಿಕಾರಿಗಳೆಲ್ಲಾ ಹೋಗುತ್ತಿದ್ದಾರಂತೆ.

ಆಮೇಲೆ ಸ್ವತಂತ್ರ ಭಾರತದ ಗಣ್ಯರೆಲ್ಲಾ ಹೋಗುತ್ತಿದ್ದರಂತೆ. ಲೇಖಕರು, ಕಲಾವಿದರು ಎಲ್ಲಾ ಅಲ್ಲಿ ಸೇರುತ್ತಾರೆ. ನೀನು ಅಲ್ಲಿಯ ಕಾಫಿ ಕುಡಿಯಲೇ ಬೇಕು" "ರಂಗ ಎನ್ನುವ ನಾಟಕಗೃಹವಿದೆ. ಅಲ್ಲಿ ನಾಟಕನೋಡುವುದೇ ಬೇರೆಯ ಅನುಭವ !" ಇದೆಲ್ಲಾ ಬರೆದ ಜೀವ್ಸ್ ತಾನೇಎಲ್ಲಾ ಕಡೆಗೂ ಹೋಗಿದ್ದನೇ ಎಂಬ ಸಂದೇಹ ಹುಟ್ಟಿದಾಗ' ಇಲ್ಲ, ಸಾರ್ ಅಲ್ಲಿಇಲ್ಲಿ ಓದಿ ಊಹಿಸಿ ಬರೆದಿರುವುದು' ಎಂದ. ಇದೆಲ್ಲಾ ನಡೆಯುತ್ತಿದ್ದಾಗ ರಾಕೇಶ ಅವನ ಹಳ್ಳಿಯಲ್ಲಿ ಹೂವುಗಳು ಅರಳು-ವುದನ್ನು ನೋಡುವು-ದರಲ್ಲಿ ಜೀವನವನ್ನು ಕಳೆಯುತ್ತಿದ್ದ .




ಹೀಗೇ ಒಂದು ಮಧ್ಯಾಹ್ನ ತೂಕಡಿಸು-ತ್ತಿದ್ದಾಗ ಮನೆಯ ಕಾಂಪೌಂಡ್ ಗೇಟ್ ಶಬ್ದವಾಯಿತು. ಯಾರೋ ಒಂದಿಬ್ಬರು ಧಡೂತಿ ವ್ಯಕ್ತಿಗಳು ಬರುತ್ತಿರುವ ಹಾಗೆ ನೆಲ ಕಂಪಿಸುತ್ತಿತ್ತು. ಜೀವ್ಸ್ ನೋಡು ಎಂದಾಗ "ನಾನು ಶಕುಂತಲಾದೇವಿ. ರಾಕೇಶ ಪಿನಾಕಿಯ ಅತ್ತೆ, ಇದು ಅವನ ಮನೆ ತಾನೇ ?"ಎಂದು ಗಡಸು ಧ್ವನಿಯ, ಎತ್ತರ ಮತ್ತು ತೂಕ ಹೆಚ್ಚೇ ಇದ್ದ ಹಿರಿಯ ಸ್ತ್ರೀಯೊಬ್ಬರು ಒಳಗೆ ಬಂದರು. 'ಹೌದು ಕುಳಿತು ಕೊಳ್ಳಿ' ಎಂದು ಜೀವ್ಸ್ ಅವರನ್ನು ಕೂರಿಸಿ ಒಳ ಬಂದ 'ಸಾರ್ ಶಕುಂತಲಾದೇವಿಯವರು !'. ಹೊರಗೆ ಬಂದು ನಮಸ್ಕಾರಹೇಳಿದೆ "ನೀನು ರಾಕೇಶನ ಸ್ನೇಹಿತನಿರಬೇಕು. ಅವನೆಲ್ಲಿ ?ನೀನು ಯಾರು ?" ಪರಿಚಯ ಮಾಡಿಕೊಂಡೆ. ಅವರು ನನ್ನನ್ನು ನೋಡಿದ ರೀತಿ ಹೇಗಿತ್ತು ಎಂದರೆ ರಾಕೇಶ ಯಾವನೋ ಬೀದಿಯಲ್ಲಿ ಹೋಗುವವನನ್ನು ತಂದು ಮನೆಯಲ್ಲಿ ಇರಿಸಿಕೊಂಡಿದ್ದಾನೆ ಎನ್ನುವ ತರಹ ಇತ್ತು. ಮಾತು ಬದಲಾಯಿಸಲು 'ಕಾಫಿ ಕುಡಿಯುತ್ತೀರಾ ಪಾಪ ದೂರದಿಂದ ಬಂದಿದ್ದೀರಾ ! ನಾನೂ ಜೀವ್ಸ್‌ಗೆ ಹೇಳಿ ಬರುತ್ತೇನೆ" ಎಂದು ಒಳಗೆ ಹೋದೆ. ಜೀವ್ಸ್ ಎಲ್ಲಾ ಕೇಳಿಸಿಕೊಂಡಿದ್ದ. "ಸಾರ್, ರಾಕೇಶ ಪಿನಾಕಿಯವರ ಪತ್ರಗಳೆಲ್ಲಾ ಈವಿಳಾಸದಿಂದಲೇ ಅಲ್ಲವೇ ಹೋಗಿರುವುದು! ಆದ್ದರಿಂದಲೇ ಅವರು ಇದು ರಾಕೇಶರ ಮನೆ ಅಂತ ತಿಳಿದಿದ್ದಾರೆ. 'ಎಂದು ಹೇಳಿದ. ಮತ್ತೆ ನಾನು ವರಾಂಡಗೆ ಹೋಗಿ 'ನೀವು ಬಂದಿದ್ದು ಆಶ್ಚರ್ಯ!' ಎಂದೇ ಅದಕ್ಕೆ ಅವರು "ಆಶ್ಚರ್ಯ ಏಕೆ ? ನನ್ನ ಸೋದರಳಿಯನನ್ನು ನೋಡೋಕೆ ಅವನ ಮನೆಗೆ ಬಂದಿದೀನಿ. ಅದಿರಲಿ ಆ ರಾಕೇಶನ ಆಳಿಗೆ ಹೇಳು ನನ್ನ ಸಾಮಾನೆಲ್ಲ ಒಳಗ ತೆಗೆದುಕೊಂಡು ಹೋಗಲು 'ದೂರದಿಂದ ಜೀವ್ಸ್ ಗೋಣಗಿಕೊಳ್ಳುತ್ತಿದ್ದು ಕೇಳಿಸಿತು.' ನೀನು ಯಾರಪ್ಪ? ಗೆಳಯ ಇರಬಹುದು ಆದರೆ ನಿನ್ನದೇ ಮನೆ ಅನ್ನೋ ತರಹ ಆಡ್ತಾ ಇದ್ದೀಯಲ್ಲ! ಅದೂ ಮಧ್ಯಾಹ್ನ ನಿದ್ರೆ ಬೇರೆ ಕೆಟ್ಟ ಅಭ್ಯಾಸ! "ರಾಕೇಶನ ಜೊತೆ ಇರಲು ಬಂದಿದ್ದೆ' ಅಂದೆ. ಈಗ ನಾನೂ ಬಂದಿದೀನಲ್ಲ, ನೀನು ಬಟ್ಟೆ ಎಲ್ಲ ತೊಗೊಂಡು ನಿಮ್ಮಮನೇಗೆ

ಹೊರಟುಹೋಗು' ಜೀವ್ಸ್ ಎಲ್ಲಾ ಕೇಳಿಸಿಕೊಂಡಿದ್ದು ಒಳಗೆ ನನ್ನ ಪೆಟ್ಟಿಗೆಯಲ್ಲಿ ಬಟ್ಟೆ ಜೋಡಿಸತಾ ಇದ್ದ. "ಏನಿದು ಜೀವ್ಸ್ ? ನಾನು ಎಲ್ಲಿಗೆ ಹೋಗಲಿ ?' ' ರಾಕೇಶ ಪಿನಾಕಿಯವರಿಗೋಸ್ಕರ ತಡೆದುಕೊಳ್ಳಿ ಸಾರ್, ನಾನು ನಿಮಗೋಸ್ಕರ ಒಂದು ಹೊಟೇಲಿನಲ್ಲಿ ರೂಂ ರಿಸರ್ವ್ ಮಾಡೀದೀನಿ' ಎಂದ ! ನನ್ನ ಪೆಟ್ಟಿಗೆ ಹೊರ ತಂದಿಟ್ಟ. ಆಟೋ ಬಂದಿತು. ಬರ್ತೀನಿ ಜೀವ್ಸ್ ಎಂದೇ. 'ಆಗಲಿ, ಹೋಗಿ ಬನ್ನಿ ಸಾರ್' ಬೀಳ್ಕೊಡುಗೆಗಳು ಕಷ್ಟ ಅಲ್ವೇ? ಹಿಂದಿನವರು ಹೇಳ್ತಿದ್ದರಂತೆ ಜೀವನದಲ್ಲಿ ಸಣ್ಣ ಪುಟ್ಟ ನೋವುಇರಲೇ ಬೇಕು. ಅದರಿಂದ ಮನುಷ್ಯ ಬೆಳೀತಾನಂತೆ.

ಪ್ರತಿ ದಿನ ರಾಕಿ ನನ್ನ ಕಾರಿನಲ್ಲಿ ಅವನ ಅತ್ತೆಯನ್ನು ಅಲ್ಲಿ ಇಲ್ಲ ಕರೆದುಕೊಂಡು ಹೋಗಲು ಪ್ರಾರಂಭಿಸಿದ. ಆವನಿಗೆ ಕಾರು ಚಲಿಸಲು ಗೊತ್ತಿರಲಿಲ್ಲವಾದ್ದರಿಂದ ಜೀವ್ಸ್‌ವರ ಚಾಲಕನಾಗಿ ಕೆಲಸ ಮಾಡಬೇಕಾಯಿತು. ಮೂವರೂ ಮಹಾನಗರದಲ್ಲಿ ಎಲ್ಲ ಕಡೆ ಓಡಾಡಿದರು. ಶಕುಂತಲಾ ದೇವಿಯವರಿಗೆ ಉತ್ಸಾಹವೋ ಉತ್ಸಾಹ. ಹಲವಾರು ಖ್ಯಾತ ಹೋಟೆಲುಗಳಲ್ಲಿ ತಿಂದರು, ಹಲವಾರು ಪ್ರಸಿದ್ಧ ಸಭಾಗೃಹಗಳಲ್ಲಿ ಸಿನೆಮಾ, ನಾಟಕ ನೋಡಿದರು. ವಿಧಾನ ಸೌಧದ ಒಳಗೂ (ಅವರನ್ನು ನೋಡುತ್ತಲೇ ದ್ವಾರಪಾಲಕರು ಸೆಲ್ಯೂಟ್ ಹೊಡೆಯುತ್ತಾ ಒಳ ಬಿಟ್ಟರು) ಹೋಗಿ ಬಂದರು. ಹೀಗೆ ಅವರು ಖುಷಿಯಾಗಿದ್ದರು, ಆದರೆ ರಾಕೇಶ್ ಮತ್ತುನಾನು ದು:ಖದಲ್ಲಿದ್ದೆವು. ರಾಕೇಶನಿಗೋ ಇವು ಯಾವುದೂ ಬೇಕಿರಲಿಲ್ಲ, ನನಗೋ ಎಷ್ಟು ದಿನ ಹೋಟೆಲಿನಲ್ಲಿ ವಾಸ ! ಅದಲ್ಲದೆ ನನ್ನದೇಕೆಲಸ ಮಾಡಿಕೊಂಡು ಸುಸ್ತಾಗಿ ಬಿಟ್ಟಿತ್ತು

"ಏನಾದರೂ ಉಪಾಯ ಮಾಡಲೇಬೇಕು ನೀನು ಜೀವ್ಸ್" ಎಂದೆವು. ಅವನು ತಲೆ ಕೆರೆದುಕೊಂಡು "ನೋಡ್ತೀನಿ ಸರ್, ಪ್ರತಿ ಸಂಜೆ ನೀವೆಲ್ಲಾ ಇಲ್ಲಿ ಸೇರಿ ಇಸ್ಪೀಟು ಆಡಿಕೊಂಡು ಸ್ವಲ್ಪ ಗಲಾಟೆ ಮಾಡಿ" ಎಂದ ಸರಿ, ನಾನು ಎಲ್ಲರನ್ನೂ ಕರೆದೆ. ಸಂಜೆ ನನ್ನ ಅಂದರೆ ರಾಕೇಶನ ಮನೆಯಲ್ಲಿ ಸಂಧಿಸಲು ಶುರುಮಾಡಿದೆವು, ಜೀವ್ಸ್ ಶಕುಂತಲ ದೇವಿಯವರನ್ನು ತಿಲಕ್ ಇನ್ಸ್ಟಿಟ್ಯೂಟಿನ ಪ್ರವಚನಗಳಿಗೆ ಕರೆದುಕೊಂಡು ಹೋಗಲು ಪಾರಂಭಿಸಿದ. 'ಈಮಹಾನುಭಾವರು ಭಗವದ್ಗೀತೆ ಮೇಲೆ ಒಂದು ದೊಡ್ಡ ಪುಸ್ತಕವನ್ನೇ ಬರೆದಿದ್ದಾರೆ' ಎಂದು ತಿಲಕರ ಪರಿಚಯ ಮಾಡಿಸಿದ್ದ. ಅಲ್ಲಿ ಹೋಗಿ ಬರುತ್ತಾ ನಿಧಾನವಾಗಿ ಅವರಲ್ಲಿ ಏನೋ ಬದಲಾವಣೆ ಶುರುವಾಯಿತು. ಒಂದು ದಿನ ಜೀವ್ಸ್ ಅವರನ್ನು 'ಎಂಜಿ ರೋಡಿಗೆ ಹೋಗೋಣವಾ. ಮೇಡಂ' ಎಂದು ಕೇಳಿದ. ಶಕುಂತಲಾದೇವಿ "ಬೇಡ ಜೀವಯ್ಯ, ಶಂಕರ ಮಠದಕಡೆ ಹೋಗಿ ಬರೋಣ" ಎಂದರು. ಶಕುಂತಲಾದೇವಿಯವರ ಚಹರೆಯೇ ಬದಲಾಗುತ್ತ ಬಂದಿತು. ಹಿಂದೆ ರಜಸ್ಸು ತುಂಬಿದ್ದ ಮುಖದಲ್ಲಿ ಚೂರು ಸಾತ್ವಿಕ ಖಳೆ ಕಾಣಿಸಿಕೊಳ್ಳಲು ಶುರುವಾಯಿತು.

ಪ್ರತಿ ಸಂಜೆ ನಾವು ರಾಕೇಶನ (ಅಂದರೆ ನನ್ನ) ಮನೆಯಲ್ಲಿ ಸೇರಿ ಇಸ್ಪೀಟು ಆಡಲು ಶುರುಮಾಡಿದ್ದೆವಲ್ಲವೇ! ನಾವು ಅಂದರೆ ರಾಕೇಶ, ನಾನು, ಬಿಂಗೋ, ಗಸ್ಸಿ, ಕಾರ್ಕಿ! ಪಾನೀಯಗಳೂ ಇದ್ದವು, ಸ್ವಲ್ಪ ಹೆಚ್ಚೇಗಲಾಟೆ ಮಾಡುತ್ತಿದ್ದೆವು. ಅದನ್ನೆಲ್ಲಾ ನೋಡಲಾರದೇ ಶಕುಂತಲಾದೇವಿಯವರು ಮನೆ ಬಿಟ್ಟು ಹೋಗುತ್ತಿದ್ದರು. ಆದರೆ ಕಡೆಗೂ ಅವರಿಗೆ ತಡೆಯಲಾಗಲಿಲ್ಲ ಎಂದುಕಾಣುತ್ತೆ. ಬೆಳಿಗ್ಗೆ ಬೆಳಿಗ್ಗೆಯೇ ಜೀವ್ಸ್‌ಗೆ ಅವರ ಸಾಮಾನನ್ನು ಕಟ್ಟಿಡಲು ಹೇಳಿದರು. ಇನ್ನೂ ಮಲಗಿದ್ದ ರಾಕೇಶನನ್ನು ಎಬ್ಬಿಸಿ ಒಂದು ಭಾಷಣವನ್ನೇ ಕೊಟ್ಟುಬಿಟ್ಟರು:

"ರಾಕೇಶ ! ನಮಗೆ ಈ ಬೆಂಗಳೂರು ಜೀವನ ಸಾಕು ! ನೀನು ಇಲ್ಲೇ ಇದ್ದರೆ

ನಿನ್ನ ಒಳ್ಳೆಯ ಗುಣಗಳನ್ನೆಲ್ಲಾ ಕಳೆದುಕೊಂಡು ಈ ನಿನ್ನ ಸ್ನೇಹಿತರ ತರಹ ಆಗಿಬಿಡುತ್ತೀಯ! ಭೂತಕನ್ನಡಿ ಹಿಡಿದು ಹುಡುಕಿದರೂ ಇವರಲ್ಲಿ ಮನುಷ್ಯನನ್ನು ಪ್ರಾಣಿ ಜಾತಿಯ ಮೇಲೆ ಇರಿಸಿರುವಒಂದು ಗುಣವೂ ಕಾಣಿಸುವುದಿಲ್ಲ. ಬರ್ಟಿ, ಬಿಂಗೋ ಗಸ್ಸಿ, ಕಾರ್ಕಿ! ಏನು ಹೆಸರುಗಳೋ ! ಇವರನ್ನು ಏಕೆ ಬಯ್ಯಬೇಕು ? ಈ ಊರೇ ಹಾಗಿದೆ ! ಎಲ್ಲಾ ಅತಿ ಅತಿ ! ಬೆಂಗಳೂರು ಅವರ ಮೇಲೆ ಮಾಡಿರುವ ಪ್ರಭಾವದಿಂದ ಇವರೆಲ್ಲ ದಾರಿ ತಪ್ಪಿದ್ದಾರೆ. ಬೇಡ ! ಈ ಊರಿನ ಹೋಟೆಲುಗಳು, ಸಿನೆಮಾಗಳು ಮಾಲ್‌ಗಳು ಎಲ್ಲಾ ಅವರೇ ಇಟ್ಟುಕೊಳ್ಳಲಿ. ನಾವು ನಮ್ಮ ಪುಟ್ಟ ಪ್ರಪಂಚಕ್ಕೆ ವಾಪಸ್ಸು ಹೋಗೋಣ. ನೀನು ನಿನ್ನ ಕಿರಿ ಗ್ರಾಮಕ್ಕೆ, ನಾನುನನ್ನ ಪುಟ್ಟೂರಿಗೆ ! ಹಣದ ಯೋಚನೆ ಬೇಡ ಈಗಿನ ತರಹವೇ ಕಳಿಸಿಕೊಡುತ್ತೇನೆ. ನೀನು ನಿನ್ನ ಸೌಂದರ್ಯೋಪಾಸನೆಯನ್ನು ಮುಂದುವರಿಸು. ಆಗ ಈಗ ಕವಿತೆಗಳನ್ನು ಬರೆ. ಅಥವಾ ಬರೆಯದಿರು. ಆದರೆನಿನ್ನ ಶೀಲವನ್ನು ಕಾಪಾಡಿಕೊ! ಈ ದೊಡ್ಡ ಊರುಗಳು ನಮಗೆ ಬೇಡ ! ಅವುಗಳ ಅತಿರೇಕಗಳ ಅರ್ಥ ನನಗೆ ಈಗ ಆಗುತ್ತಿದೆ. ನಾನು ನನ್ನ ಉಳಿದ ಸಮಯವನ್ನುನಮ್ಮ ಊರನ್ನು ಸುಧಾರಿಸಲು ನೋಡುತ್ತೇನೆ. ಹಾಗೂ ಈ ಕೊಳಕಿನ ಮಧ್ಯೆ ಮಾಣಿಕ್ಯ ಒಂದಿದೆ ಇದೆ. ಅದೇ ಈ ಜೀವಯ್ಯ ! ನನ್ನ ಜೊತೆ ಬಂದಿರಲು ಕೇಳಿದೆ, ಹೆಚ್ಚು ಹಣ ಕೊಡ್ತೀನಿ ಎಂದೇ, ಅವನು ಒಪ್ಪಲಿಲ್ಲ. ಸಾಧ್ಯವಾದರೆ ನೀನು ಅವನನ್ನು ನಿನ್ನ ಹಳ್ಳಿಗೆ ಕರೆದುಕೊಂಡು ಹೋರಟು ಹೋಗಿಬಿಡು. ಈಗ ಬಾ. ನನ್ನನ್ನು ರೈಲು ಹತ್ತಿಸು"

ಕಡೆಯಲ್ಲಿ ನನ್ನನ್ನು ಒಂದು ರೀತಿಯ ಕರುಣೆಯಿಂದ ('ನಿನ್ನಂಥವರೂ ಇದ್ದಾರಲ್ಲ ಈ ಪ್ರಪಂಚದಲ್ಲಿ') ನೋಡಿ ಶಕೂಂತಲಾದೇವಿ ಮನೆಯಿಂದ ಹೊರಹೋದರು. ಸರಿ, ನಾನು ನನ್ನ ಮನೆಗೇ ವಾಪಸ್ಸು ಬಂದೆ ! ಮಧ್ಯಾಹ್ನ ಒಳ್ಳೆಯ ನಿದ್ರೆ ಮಾಡಿ. ಸಂಜೆ ರಾಕೇಶನನ್ನು ಅವನ ಹಳ್ಳಿಯಲ್ಲಿ ಬಿಡಲು ನಾವು ಮೈಸೂರು ರೋಡಿನ ಕಡೆ. ಹೊರಟೆವು. ಜೀವ್ಸ್ ನ್ನು ಕೇಳಿದೆ 'ಶಕುಂತಲಾದೇವಿ ನಿನ್ನನ್ನುಅವರೂರಿಗೆ ಕರೆದಿದ್ದರೆ ?' ಅವನು ಹೂ ಎಂದ.' ಎಷ್ಟು ಕೊಡ್ತೀನಿ ಎಂದರು? 'ಬಿಡಿ ಸಾರ್ ! ಇಲ್ಲ, ಪರವಾಯಿಲ್ಲಹೇಳು ಎಂದಾಗ 'ಈಗಿನ ಎರಡರಷ್ಟು' ಎಂದ ಜೀವ್ಸ್. ;ಆಯಿತು ಎಂದೆ. "ಎಡಗಡೆ ನೋಡಿ ಸಾರ್, ಅಲ್ಲಿ ವೃಷಭಾವತಿ ಹರೀತಾ ಇದೆ 'ಎಂದ ಜೀವ್ಸ್ ! ವುಡ್ ಹೌಸರ 'ಆಂಟ್ ಅಂಡ್ ದ ಸ್ಲಗರ್ಡ 'ಕಥೆಯ ರೂಪಾಂತರ–ಅಲ್ಲಿಯ ನ್ಯೂಯಾರ್ಕ್, ಇಲ್ಲಿಯ ಬೆಂಗಳೂರು')

■

## ಯುದ್ಧ – ಬುದ್ಧ

ಜಗತ್ತಿನ ತುಂಬಾ ಬರೀ ಯುದ್ಧ
ಆದರೆ ನನ್ನ ಭಾರತ ಸುಖ ಸಮೃದ್ಧಿಗೆ ಬದ್ಧ
ಇದು ಶತಸಿದ್ಧ
ಏಕೆಂದರೆ ಈ ಮಣ್ಣು ಕಂಡಿರುವುದು
ಗೌತಮ ಬುದ್ಧ !

ದಿವಾಕವಿ

# ಮೊಬೈಲ್ ರಿಂಗಣಿಸದಿದ್ದಾಗ............!?

ಎನ್.ವ್ಹಿ. ರಮೇಶ್

"ಅಮ್ಮಮ್ಮಾ! ಅಯ್ಯಯ್ಯೋ! ಎಲ್ಲೋ ಹೊರಟು ಹೋಯ್ತಲ್ಲ ನನ್ ಜೀವ–ನನ್ ಮೊಬೈಲ್! ಏನ್ ಮಾಡ್ಲಿ? ಹುಡುಕಿ ಹುಡುಕಿ ಕಣ್ಣು ಸೋತು ಹೋದ್ವು! ಎಲ್ಲಿ ಹೋದೆ ನನ್ನ ಪ್ರಿಯ ಸಂಗಾತಿ......." ಬಿಕ್ಕಿ ಬಿಕ್ಕಿ ಅಳಲಾರಂಬಿಸಿದಳು ಮಂಗಳಮ್ಮ."ಮತ್ಯಾರು ಹೋದರಮ್ಮ, ದಿನಾ ಮಳೆ ಬೇರೆ ಬರ್ತಿದೆ. ಪ್ರತೀದಿನ 2–3 ಸಲ ಸ್ನಾನ, ಅದೂ ತಲೆ ಸ್ನಾನ ಮಾಡಿ ಮಾಡಿ ಶೀತವಾಗ್ತಿದೆ" ಗೊಣಗಿದ ಮಗ ಗುಂಡ. "ಅದ್ಯಾಕೋ" ಕೇಳಿದ್ಳು ಈ ಅಮ್ಮ. "ಅಲ್ಲಾಮ್ಮ ಕರೋನಾ ಕಾಲದಲ್ಲಿ, ದಿನಾ ಸ್ನೇಹಿತರ ವಯಸ್ಸಾದ ತಂದೆ–ತಾಯಿ, ನಮ್ಮ ಬಂಧುಗಳು ಹೋಗ್ತಿದ್ರೆ, ಒಂದೇ ಊರಲ್ಲಿರೋ ನಾನು ಹೋಗಿ ನೋಡಿ ಬಂದಿದ್ದರ ರಿಸಲ್ಟ್ ಇದು!".

"ಅಲ್ರೀ ಇದೇ ಊರಲ್ಲಿ ಹೀಗಾಯ್ತು, ಹೋಗಿ ಬಂದ್ರಿ. ಧಾರವಾಡ, ಬೆಂಗಳೂರು, ಚೆನ್ನೈ, ಮುಂಬೈಲಿರೋರು ಹೋದ್ರಲ್ಲ. ಆಗ್ಯಾಕೆ ಹೋಗ್ಲಿಲ್ಲ?". ಕೇಳಿದ್ಳು ಸೊಸೆ ದೇವಿ. "ಲಾಕ್‌ಡೌನ್ ಇತ್ತಲ್ಲ ಹೋಗೋಕ್ಕಾಗ್ಲಿಲ್ಲ. ಅದಕ್ಕೆ ಮೊಬೈಲ್‌ನಲ್ಲೇ ದುಃಖ ವಿಚಾರಿಸಿದ್ವಿ ಅಲ್ವಾ" ಹೀಗೆ ಗುಂಡ ಅಂದಾಗ, ದೇವಿ ಕೇಳಿದ್ಳು "ವೀಡಿಯೋ ಫೋನಾದ್ರೂ ಇದ್ರೆ ನಮ್ಮ ಕಣ್ಣೀರು ದುಃಖ ಅವರಿಗೂ ಕಾಣಿಸ್ತಿತ್ತು". "ಅಯ್ಯೋ ವೀಡಿಯೋ ಫೋನ್‌ಗೆ ಹೋದ್ರು, ನನ್ನ ಆಡಿಯೋ ಫೋನೇ ಕಾಣ್ತಿಲ್ಲ" ಅಮ್ಮ ಗೊಣಗಿದಾಗ, ಮಗ ಅಂದ. "ಅದ್ಯಾಕಮ್ಮ ಹಾಗೆ ಕಿರಚ್ತೀ... ನನ್ನ ಫೋನಿಂದ ಒಂದು ರಿಂಗ್ ಕೊಡ್ತೀನಿ". "ಆಗೋಲಪ್ಪ. ಚಾರ್ಜ್ ಆಗ್ತಿಲ್ಲ". "ಅಲ್ಲಮ್ಮ ರೀಚಾರ್ಜ್ ಮಾಡ್ಬೇಡ ಅಂದಿದ್ನಾ. ನಿನ್ನ ಚಾರ್ಜರ್ ಎಲ್ಲಿ" ಮಗನ ಪ್ರಶ್ನೆ. "ಅಯ್ಯೋ ಚಾರ್ಜರ್ ಎಲ್ಲೋ ಇಟ್ಟಿದ್ದೀನಿ. ಅದೂ ಸಿಗ್ತಿಲ್ಲ. ಹಾಳಾದ್ದು ಟಿ.ವಿ. ಗೆ ರಿಮೋಟ್ ಇರೋ ಹಾಗೆ ಮೊಬೈಲ್‌ಗೂ ಇದ್ದಿದ್ರೆ ಎಷ್ಟೋ ಚೆನ್ನ ಇತ್ತು" ಅಂದ್ಳು ಅಮ್ಮ.

"ಅಲ್ಲ ಅತ್ತೆ, 2 ದಿನ ಮೊಬೈಲ್ ಇಲ್ಲದಿದ್ರೆ ಏನು ಗಂಟು ಹೋಗುತ್ತೆ? ಯಾರಿಗೆ ನೀವು ಅರ್ಜೆಂಟ್ ಫೋನ್ ಮಾಡ್ಬೇಕು? ಅಥವಾ ಯಾರದಾದ್ರೂ ಅರ್ಜೆಂಟ್ ಕಾಲ್ ಬರುತ್ತಾ ನಿಮಗೆ?" ಕುಟುಕಿದಳು ಸೊಸೆ. "ನಿಂಗೇನು ಗೊತ್ತಾಗುತ್ತೆ? ನನ್ನ ವಾಕಿಂಗ್ ಫ್ರೆಂಡ್ಸ್, ಸಮಾಜದವರು ಮಾಡ್ತಿರ್ತಾರೆ ಆಗಾಗ ಫೋನ್" ಮಂಗಳ ಜೋರಾಗಿಯೇ ಉತ್ತರಿಸಿ ಮಗನನ್ನ ಬೇಡಿದರು. "ಗುಂಡ ನನ್ನ ಮೊಬೈಲ್ ಚಾರ್ಜರ್ ಹುಡುಕಿ ಕೊಡೋ ದಮ್ಮಯ್ಯಾ".

"ಅಯ್ಯೋ ಹೋಗಮ್ಮ. ನಾನು Dutyಗೆ ಹೋಗಬೇಕು. ಇನ್ನೂ ರೆಡಿ ಆಗ್ಬೇಕು. ನೀರು ತುಂಬಿ ತುಂಬಿ ಸಾಕಾಯ್ತು. ನೀನೇ ಹುಡುಕ್ಕೋ" ಮಗರಾಯ ಗೊಣಗಿದ. "ಅಯ್ಯೋ ನಂಗಂತೂ ಟೈಮೇ ಸಾಲದು. ಪಾಪೂನಾ ತೂಗಲಾ? ಅದ್ಕೆ ಹಾಲು ಕುಡಿಸಿ ಮಲಗಿಸ್ಲಾ?. ರಾತ್ರಿ ಎಲ್ಲ ನಿದ್ರೇನೇ ಇಲ್ಲ. ಇದರಿಂದ. ಸಾಕಾಗಿ ಹೋಗಿದೆ. ಇನ್ನು ನಿಮ್ಮ ಮೊಬೈಲ್ ಎಲ್ಲಿ ಹುಡುಕಿ ಕೊಡ್ಲಿ". ಕೇಳುವ ಮುನ್ನವೇ ಪಟ ಪಟ ಮಾತು ಉದುರಿಸಿದಳು ಈ ಸೊಸೆಮಣಿ. "ನಿಮ್ಮಮ್ಮಂಗೆ ಇದೊಳ್ಳೇ ಮೊಬೈಲ್ ಹುಚ್ಚು. ನಮ್ಮಮ್ಮ ಹೀಗಿಲ್ಲ ಬಿಡ್ರಿ. ಅಮ್ಮ ಮೊಬೈಲೇ ಮುಟ್ಟೋಲ್ಲ" ಗಂಡನ ಕಿವಿಯಲ್ಲಿ ಉಸುರಿದಳು ಆ ಜಾಣ ಹೆಂಡತಿ.

ಮಂಗಳಮ್ಮ ಮನೆಯ ಮೇಲೆ ಮೂಲೆ ಹುಡುಕಿದ್ರು. ಅಡಿಗೆ ಮನೇಲಿ ಅಡಿಗೆ ಮಾಡ್ತಾ, ಗ್ಯಾಸ್ ಹತ್ತಿರ ಇಟ್ನಾ? ಅಡಿಗೆ ಮನೆ ಕಿಟಕೀಲಿ, ಪಾತ್ರೆಗಳ ಮಧ್ಯೆ, ನೀರಿನ ಕೊಡದ ಹತ್ತ. ಎಲ್ಲಿಟ್ಟೆ ಎಂದು ಯೋಚಿಸಿಯೇ ಯೋಚಿಸಿದರು. ಹಿಂದಿನ ಮನೆ ಗೆಳತಿ ರಮಾಗೆ ಕೂಗಿ ಕೇಳಿ, ಅಲ್ಲೋ ಅವರ ಮನೇಲೂ ಮೊಬೈಲ್ ಬಿಟ್ಟು ಬಂದಿಲ್ಲ ಅಂತ ಖಾತ್ರಿ ಮಾಡ್ಕೊಂಡ್ರು. ಅವರ ವಿಚಾರ ಲಹರಿ ಅಲೆ ಅಲೆಯಾಗಿ ಹೀಗೆ ಮುಂದುವರೀತು. ಜೀವನದ ಹಿಂದಿನ ದಿನಗಳ Flash Back ಆರಂಭವಾಯ್ತು........"ಅಲ್ಲಾ ಏನು ಗತಿ ಬಂತು ನನಗೆ. ಚಿಕ್ಕಂದಿನಿಂದ ಕಷ್ಟವೇ ಆಯ್ತು. ತವರು ಮನೇಲಿ ಬಡತನ. ಮೊಬೈಲ್ ಏನು? ಲ್ಯಾಂಡ್‌ಲೈನೂ ಬಂದಿರಲಿಲ್ಲ!. ಮದ್ವೆ ಮಾಡ್ಕೊಂಡು ಬಂದ್ರೆ, ಗಂಡಾನೇ ಮೊಬೈಲ್ ಇಟ್ಟಿರಲಿಲ್ಲ! ಇನ್ನು ನನಗೇನು ಕೊಡಿಸ್ತಾರೆ?. ಮಗ, ಮಗಳು, ಹುಟ್ಟಿದಾಗ, ಮನೆ ಕಟ್ಟೋದಕ್ಕೆ ಇದಕ್ಕೆಲ್ಲ ಸಾಲದ ಹೊರೆ. ಇನ್ನು ಮೊಬೈಲ್ ಎಲ್ಲಿಂದ ಬರುತ್ತೆ? ಅಂತೂ ಗಂಡಾನೂ ಮೊಬೈಲ್ ಕೊಡಿಸಲಿಲ್ಲ. ಅದೇ ಹಿಂದಿನ ಮನೆ ರಮಾ ಟ್ರಾವೆಲ್ ಸಂಸ್ಥೇಲಿದ್ದು, ಎರಡೆರೆಡು ಮೊಬೈಲ್ ಹೊಂದಿದ್ರು. ಅವರ ತರಹದ್ದೇ, ಸಸ್ತಾನಾದ್ರೂ ಸರಿ, ಒಂದು ಮೊಬೈಲ್ ಬೇಕೇ ಬೇಕಂತ, ಎಷ್ಟೋ ವರ್ಷ ಅನಿಸ್ತಿತ್ತು. ಗಂಡಂಗೂ ಕೇಳಿ ಕೇಳಿ ಪದೇ ಪದೇ ಅರ್ಚನೆ ಮಾಡಿಸಿಕೊಂಡಿದ್ದೆ. ಅವರು ಬೀಡಿ ಸೇದೋದು ಬಿಟ್ಟು ಆ ಖರ್ಚಿನಲ್ಲಿ ನಂಗೆ ಒಂದು ಮೊಬೈಲ್ ಕೊಡಿಸಬಾರದೇ, ಅಂತ ಹಪಹಪಿಸಿದ್ದೆ!. ಅವರಿರೋತನಕ ಮೊಬೈಲ್ ತಗೋಳೋಕೆ ಆಗ್ಲೇ ಇಲ್ಲ. ಸರಿ ಮಕ್ಕಳು ಹುಟ್ಟಿದ ಮೇಲೆ ಒಂದು ಕಡೆ ರಿಸಪ್ಷನ್ ಕೆಲಸಕ್ಕೆ ಹೋಗ್ತಿದ್ದೆ. ಆದ್ರೆ ಅಲ್ಲಿ ಬಂದ ಸಂಪಾದನೇನೂ ಈ ಮನೆ ಖರ್ಚಿಗೆ ಸುರೀಬೇಕಾಯ್ತು. ಸ್ವಂತ ಸಂಪಾದಿಸಿದ್ರೂ, ಒಂದೂ ಮೊಬೈಲ್ ಕೊಳ್ಳೋಕೇ ಆಗ್ಲಿಲ್ಲ. ಎಲ್ಲ ಬರಿ ಬಿಸಿಲುಕುದುರೆ ಅನಿಸ್ತು!. ಪ್ರತೀಸಲ ಮಾರ್ಕೆಟ್ ಬೀದಿಗೆ ಹೋದಾಗ, ಮೊಬೈಲ್ ಅಂಗಡಿಗಳ ಕನ್ನಡಿ ಬೀರುಗಳಲ್ಲಿಟ್ಟಿದ್ದ ಬಣ್ಣ ಬಣ್ಣದ ಮೊಬೈಲ್ ನೋಡಿ ನೋಡಿಯೇ ಕಣ್ತುಂಬಿಕೊಂಡೆ!. ಈ ಮಗರಾಯನ್ನ ಒಂದೆರಡು ಬಾರಿ ಸಂಕೋಚದಿಂದ ಮೊಬೈಲ್ ಕೊಡಿಸು ಅಂದಾಗ "ನಿಂಗ್ಯಾಕಮ್ಮ? ನೀನೇನು ಆಫೀಸ್‌ಗೆ ಹೋಗಬೇಕಾ? ಅಪ್ಪಾನೂ ಹೋದ ಮೇಲೆ, ಈ ಮನೇಲಿರೋದೇ ನಾನು–ಅವಳು–ಈ ಪುಟ್ಟ ಮಗು. ನಮ್ಮನ್ನ ನೋಡ್ಕೊಂಡು ಸಂತೋಷವಾಗಿರು ಸಾಕು. ಈ ಸಂಸಾರಕ್ಕೆ, ಪಾಪೂ ಖರ್ಚಿಗೆ ಹೊಂದಿಸೋಲೇ ಕಣ್ಣಕಣ್ಣು ಬಿಡ್ತಿದೀನಿ. ಮನೆ ಸಾಲಕ್ಕೆ, ಪಾಪೂ ಖರ್ಚಿಗೆ ಮಾಡಿರೋ ಸಾಲ ಮೊದಲು ತೀರಿಸಬೇಕು. ಹೋಗಹೋಗಮ್ಮ ನಿನ್ನ ಮೊಬೈಲ್ ಹುಚ್ಚು ನೋಡಿದ್ರೆ ಆ ಜೋಳಿಗೇಲಿ ಮಲಗಿರೋ ಪಾಪೂನೂ ನಗಬಹುದು" ಅಂತ ಗಂಭೀರವಾಗಿ ಹೇಳಿದ. ಆದರೆ ಅದು ನನ್ನನ್ನು ಹಾಸ್ಯದಲ್ಲಿ ಚೂಪಾಗಿ ಅಣಕಿಸಿದಂತೆ ಆಯ್ತು ನನಗೆ.

ಅವರು ಹೋದ ಮೇಲೆ ನಾನು ಒಬ್ಬಂಟಿ, ವಿಧವೆ. ಮುದುಕಿ. ಈ ಸಂಸಾರಕ್ಕೆ ನಾ ಏನಲ್ಲ ಮಾಡಿದೆ!. ನನ್ನ ಒಂದು ಪುಟ್ಟ ಆಸೇನೂ ನೆರವೇರ್ತಿಲ್ಲ!. ದೇವ್ರೇ ನನ್ನ ಹೆಣ್ಣಾಗಿ ಹುಟ್ಟಿಸಿ ಈ ಸಂಸಾರದಲ್ಲಿ ಹೀಗೆ ಏಗೋ ಹಾಗೆ ಮಾಡಿದೆಯಲ್ಲ? ಅಷ್ಟು ಕಷ್ಟಪಟ್ಟು ಮಗಳ ಮದುವೆ ಮಾಡಿದೆ. ಅದಕ್ಕೆ ಮೊದಲು ಅವಳನ್ನ ಓದಿಸಿದ ಮೇಲೆ ಅವಳೂ ಕೆಲವು ವರ್ಷ ಕೆಲಸ ಮಾಡ್ತಿದ್ದಾಗ, ಅವಳನ್ನೂ ಕೇಳಿದ್ದೆ "ನಂಗೊಂದು ಮೊಬೈಲ್" ಅಂತ. "ಹೋಗಮ್ಮ. ನಿನ್ನ ಸಂಸಾರಕ್ಕೆ ಕೊಟ್ಟ ಮೇಲೆ ನನ್ನ ಹತ್ರ ಎಷ್ಟು ಉಳಿಯುತ್ತೆ? ಆಗೋದೇ ಇಲ್ಲ" ಅಂತ ಝಾಡಿಸಿಬಿಟ್ಟಳು. ಮದ್ವೆ ಆದ ಮೇಲೆ ಅವಳ ಗಂಡ ಅವಳಿಗೆ ಕೆಂಪು ಬಣ್ಣದ ಮೊಬೈಲ್ ಕೊಡಿಸಿದ್ದ. ಮಗ ಕೆಲಸ ಮಾಡೋವಾಗ ಮೊಬೈಲ್ ಕೊಂಡ. ಆದರೆ ಅದನ್ನ ನಂಗೆ ಮುಟ್ಟೋಕೂ ಕೊಡ್ಲಿಲ್ಲ!. ನನ್ನ ಕಂಗಳಲ್ಲಿ ಮೊಬೈಲ್ ಆಸೆ ಹೊಳೀತಾನೇ ಇತ್ತು ಅಷ್ಟೊಂದು ವರ್ಷ. ಅವಂಗೆ ಮದ್ವೆ ಆಗಿ ಸೊಸೆ

ಬಂದಳು. ಪುಟ್ಟ ಮೊಮ್ಮಗಳು ಬಂದಳು. ಇನ್ನೂ, ಎಲ್ಲಿ ಮೊಬೈಲ್ ಅಂತ ಕಾದು ಕೂರೋದೇ ಆಯ್ತು!. ಅಲ್ಲ ನಾನು 60ರ ಮುದುಕಿ. ಆದ್ರೆ ನನ್ನ ಕಣ್ಣು-ಕಿವಿ ಚೆನ್ನಾಗಿವೆ. ನಾಲಿಗೆ ರುಚಿ ಇದೆ. ಪೂಜೆ ಮಾಡ್ತೀನಿ. ಸ್ತೋತ್ರ ಹೇಳ್ತೀನಿ. ವೃದ್ಧ ಸ್ನೇಹಿತೆಯರು, ಅವರ ಮಕ್ಕಳನ್ನು ಆಗಾಗ ಭೇಟಿ ಮಾಡಿ ಬರ್ತೀನಿ. ಲೈಟ್ ಬಿಲ್ಲು, ನೀರ್ ಬಿಲ್ಲು, ಅಂಗಡಿ, ತರಕಾರಿ, ರೇಷನ್, ಹಾಲು ಎಲ್ಲಾ ಕಡೆ ಓಡಾಡಿ ಮನೆಗೆ ಬೇಕಾದ ನಿತ್ಯದ ಸಾಮಾನುಗಳನ್ನು ತರ್ತೀನಿ. ಅದೇನೋ ಎಲ್ಲರ ಮುಖ ನೋಡಿ ಕಷ್ಟ-ಸುಖ ಮಾತಾಡೋವಾಗ ನೇರ ಮಾತು-ಪ್ರಕ್ರಿಯೆ ಸಿಗುತ್ತೆ. ಅದು ನಂಗೆ ಆಸೆ. ಆದ್ರೆ ಮನೆ ಕೆಲಸದ ಮಧ್ಯೆ ಕಷ್ಟ-ಸುಖ ಹಂಚ್ಕೋಳೋದು ಹೇಗೆ?. ಮಗನ ಹತ್ರ-ಸೊಸೆ ಹತ್ತಿರ ಎಷ್ಟು ಮಾತಾಡಬಹುದು?. ಮಗು ಪುಟ್ಟದು!.

ಹಿಂದಿನ ಮನೆ ರಮಾ, ಗಂಡ ಉಮೇಶ ಇಬ್ರೇ ಮನೇಲಿ ಇದ್ರೂ, ಅವರ ಊಟಕ್ಕೆ ಉಪ್ಪಿನಕಾಯಿ ತರಹ, ಹುಸಿ ಕಲಹದ ಪ್ರೀತಿಯ ಮಾತುಗಳನ್ನು ಕೇಳಿದಾಗ, ಅವರು ಪರಸ್ಪರ ಬೆಂಬಲಿಸುವುದನ್ನು ಗಮನಿಸಿದಾಗೆಲ್ಲಾ ನನಗನಿಸುತ್ತೆ......ವಯಸ್ಸಾಗ್ತಾ ಆಗ್ತಾ ಹೆಂಡ್ತಿ ಕಷ್ಟ-ಸುಖ ಕೇಳಿ ಪರಿಹರಿಸೋಕೆ ಗಂಡ ಇರಬೇಕು ಅನಿಸುತ್ತೆ, ಅವರ ಮನೆಗೆ ಹೋದಾಗ್ಲೆಲ್ಲ. ನನ್ನ ಗಂಡ ಬೇಗ ಹೋಗ್ಬಿಟ್ಟ, ನನ್ನ ಒಂಟಿ ಮಾಡಿ. ನಾನೇನೇ ಹೇಳ್ಳಿ, ಒಮ್ಮೊಮ್ಮೆ ದರ್ಬಾರ್ ಮಾಡ್ಲಿ, ನಡೆಸ್ತಿದ್ದ ಆ ಪುಣ್ಯಾತ್ಮ!. ಈಗ......ಹೂಂ ನನ್ನ ಕರ್ಮ. ಕಷ್ಟ-ಸುಖ ಇತರರ ಜೊತೆ ಹಂಚಿಕೊಳ್ಳೋಕೆ ಒಂದು ಮೊಬೈಲ್ ಬೇಡ್ವೇ?. ನಂಗೆ ಕನಸಲ್ಲಿ ದಿನಾ ಮೊಬೈಲ್ ಪ್ರಪಂಚಾನೇ ಬರ್ತಿತ್ತು. ದೇಶ-ವಿದೇಶಗಳ ಸಣ್ಣ-ದೊಡ್ಡ, ಬ್ರಾಂಡೆಡ್ ಬಣ್ಣ ಬಣ್ಣಗಳ ಮೊಬೈಲ್ ಸಂತೆ, ನನ್ನ ಕನಸು ಪೂರ್ತಿ ಕುಣೀತಿದ್ವು!. ನನ್ನ ಹಲುಬುವಿಕೆಗೆ ಅಂತೂ ಒಂದು ಅವಕಾಶ ಸಿಕ್ತು. ಮದ್ವೆ ಆದ ಮಗಳು ಬೆಂಗಳೂರಿನಿಂದ ನನ್ನ ಜೊತೆ ಮಾತಾಡೋಕೆ ಅವಳಿಗೆ ಒಂದು ಖಾಸಗಿ ಮಾಧ್ಯಮ ಬೇಕಿತ್ತು. ಅಂದರೆ ನನ್ನ ಅವಳ ನಡುವೆ ಒಂದು ಮೊಬೈಲ್ ಬೇಕಿತ್ತು. ಅಣ್ಣ ಮನೇಲಿರೋವಾಗ, ಅತ್ತಿಗೆ ಎದುರಿಗೆ, ಅವನ ಮೊಬೈಲ್‌ನಲ್ಲಿ ಈ ಅಮ್ಮನ ಜೊತೆ ಮಾತಾಡೋಕೆ ಆಗುತ್ತಾ?. ಇಲ್ವೇ ಇಲ್ಲ. ಗಂಡ-ಮಗ ಕೊಡಿಸಲಿಲ್ಲ. ಆದರೆ ಮಗಳು 1 ವರ್ಷದ ಕೆಳಗೆ, ಪುಟ್ಟ ಮೊಬೈಲ್ ಕೊಡಿಸಿದ್ಳು. ನೀಲಿ ಬಣ್ಣದ ಕಡಿಮೆ ವೆಚ್ಚದ ಮೊಬೈಲ್. ಆಕಾಶವೇ ಕೈಗೆ ಬಂದಷ್ಟು ಖುಷಿ. ಸಂಬಂಧಗಳು-ಸಂಬಂಧಿಕರು-ಮಿತ್ರರು ಅತಿ ಹತ್ತಿರ ಬಂದ ಅನುಭವ. ಆಹಾ! ಮೊಬೈಲ್ ಬಂದ ದಿನ ನಿದ್ರೇನೆ ಬರಲಿಲ್ಲ. ಊಟ ರುಚಿ ಹತ್ತಲಿಲ್ಲ. ತಾನು ಕೊಡಿಸದೇ ಅಕ್ಕ ಕೊಡಿಸಿದಳು ಅಂತ ಮಗನಿಗೆ ಸಂಕೋಚ. "ಅಬ್ಬಬ್ಬಾ ಅಂತೂ ಈ ಅತ್ತೆಗೆ ಆ ನಾದಿನಿ ಕೊಡಿಸೇಬಿಟ್ಟಳಲ್ಲ ಮೊಬೈಲ್! ಇನ್ನು ಈ ಮುದುಕಿ ಕುಣಿಯೋದೇ ಬಾಕಿ" ಅಂತ ಒಳಗೊಳಗೇ ಕುದಿದಳು ಸೊಸೆ. ಮೊಬೈಲ್ ನೋಡಿ ಮೊಮ್ಮಗಳು ಕೈ ಚಾಚಿದಳು. ಏನಾದ್ರೂ ಸ್ವಲ್ಪ ಚಿಕ್ಕವಳಾಗಿದ್ರೆ, ನಾನು ನಿಜವಾಗ್ಲೂ ಕುಣಿದೇ ಬಿಡ್ತಿದ್ದೆ ಅನಿಸ್ತು.

ಮೊಬೈಲ್ ಎಲ್ಲಾ ನೋಡಿಕೊಂಡು, ಚಾರ್ಜ್ ಮಾಡೋದು, ಮಾತಾಡಲು, ನಂಬರ್ ಒತ್ತೋದು, ಎಲ್ಲ ಕಲಿಯಲು 1 ವಾರ ಆಯ್ತು. ಗೊತ್ತಿರೋ ಎಲ್ಲರಿಗೂ ಹೋಗಿ ಹೋಗಿ ಎದುರಿಗೆ ಹೇಳಿದೆ. "ಈಗ ನನ್ನ ಹತ್ತಾನೂ ಮೊಬೈಲಿದೆ. ನಿಮ್ಮ ನಂಬರ್ ಕೊಡಿ ಬರಕೋತೀನಿ. ನನ್ನ ನಂಬರ್ ನೀವೂ ಬರಕೊಳ್ಳಿ. ಯಾವಾಗ ಬೇಕಾದ್ರೂ ಫೋನ್ ಮಾಡಿ" ಅಂತ ಸುಭ್ರಮಿಸಿದೆ. ಅಂದಿನಿಂದ ದಿನಾ ಹತ್ತಾರು ಮೊಬೈಲ್ ಕರೆ ಬಂದವು. "ಅಮ್ಮ volume ಕಮ್ಮಿ ಇಡು. ಮಗೂಗೆ ಎಚ್ಚರವಾಗಿಬಿಡುತ್ತೆ. ರಾತ್ರಿ ಎಲ್ಲ

ನಿದ್ರೆ ಇಲ್ಲದ ಅವಳಿಗೆ Disturb ಆಗುತ್ತೆ", ಅನ್ನಲಾರಂಭಿಸಿದ ಮಗ. "ಅಮ್ಮ vibrator ಇದು. ಅದರಿಂದ ಮೊಬೈಲ್‌ಗೆ ಕರೆ ಬಂದದ್ದು ಗೊತ್ತಾಗುತ್ತೆ" ಅಂದ. ಆ ವೈಬ್ರೇಟರ್ ಇಟ್ಟು ಕೊಟ್ಟ. ಮೊಬೈಲ್ ಥರಥರ ನಡುಗಿ, ಅಲುಗಾಡಿ, ಕುಣಿದ ರಭಸಕ್ಕೆ ಕೈಲಿ ಹಿಡಿದುಕೊಳ್ಳೋಕೇ ಆಗ್ಲಿಲ್ಲ. ದಿಂಬಿನ ಕೆಳಗಿಟ್ರೆ ಅದು ಕಿವಿ ಕೊರೀತು. ಒಳಗಿಟ್ಕೊಂಡ್ರೂ ಎದೆ ನಡುಗ್ತು. ನಮಗೆ ಸೌಂಡ್ ಬಂದ್ರೆ ಗೊತ್ತಾಗುತ್ತೆ. ರಿಂಗ್‌ಟೂನ್‌ನಿಂದ ಅಂತ ವೈಬ್ರೇಟರ್ ತೆಗೆಸಿ ಹಾಕಿದೆ. Sound ಕಮ್ಮಿ ಇಟ್ಟು ಎಷ್ಟೋ ಸಲ ಗೊತ್ತಾಗ್ದೇನೇ ಇರ್ಲಿಲ್ಲ ರಿಂಗ್ ಬಂದದ್ದು. ಎಲ್ಲ ಟೋಕಿಸೋಕೆ ಶುರು. "ಅಲ್ರೀ ಯಾಕೆ ಮೊಬೈಲ್ ಇಡ್ಕ್ಕೊಂಡಿದೀರಿ?. ಅರ್ಜೆಂಟ್ ಆಗಿ ಮಾತಾಡಿಸೋಕೆ ಸಿಗದಿದ್ರೆ ಎಸೀರಿ ಮೊಬೈಲ್". ಸರಿ ಹತ್ರಾನೇ ಇಟ್ಕೊಳ್ಳೋಣಾ ಅಂದ್ರೆ, ಅಡಿಗೆ ಮನೆಗೆ ಹೋಗ ಬೇಕು, ಟಾಯ್ಲೆಟ್‌ಗೆ, ಎಲ್ಲೆಲ್ಲಿ ಹೋದ್ರೆ ಅಲ್ಲೇ ಬಿಟ್ಟು ಬರ್ತಿದ್ದೆ. ರಿಂಗ್ ಬಂದಾಗ ಕೆಳಗೆ ಕೂತಿದ್ರೆ ತಕ್ಷಣ ಏಳೋಕೇ ಆಗ್ತಿರ್ಲಿಲ್ಲ, ಎಲ್ಲಿಟ್ಟೆ ಹುಡುಕು. ಬರ್ತಾ ಬರ್ತಾ ನಂಗೂ, ಮೊಬೈಲ್‌ಗೂ ಅನ್ಯೋನ್ಯತೆ ಬಂತು. ಹಿಂದಿನ ಮನೆ ಗೆಳತಿ ರಮಾಮ ಅವಳ ಗಂಡ ಉಮೇಶರನ್ನು ಕಂಡಾಗ, ಹಿರಿಯ ನಾಗರೀಕರಾಗಿದ್ದು, ಅತ ಈಕೇನ, ಈಕೆ ಆತನ್ನ ನೋಡ್ಕೋಳೋದು, ತಮಾಷೇಲಿ ಮಾತಲ್ಲೇ ಕಾಲೆಳೆಯೋದು ಕಂಡಾಗ, ಅವರ ಪರಸ್ಪರ ಭಾವನೆ, ಮಾತು, ಅನುಭವಗಳ ಹಂಚಿಕೆ ಕಂಡಾಗ, ನಂಗೆ ಏಕಾಂಗಿತನ ಕಾಡಿತು. ಆಮೇಲೆ ಕಷ್ಟ-ಸುಖಾನ, ಮೊಬೈಲ್ ಮಿತ್ರರ ಜೊತೆ ಹಂಚಿಕೊಂಡಾಗ ಹೊಸ ಜೀವ-ಖುಷಿ ಭಾವ ಬಂತು.




ಒಮ್ಮೊಮ್ಮೆ ಮೊಬೈಲ್, ಗಂಡನ ನೆನಪು ತರ್ತಿತ್ತು. ಮಾತಾಡಿಸಿದ್ರೆ ಮಾತ್ರ ಮಾತಾಡೋ ಮೊಬೈಲ್ ಹಾಗೇ, ನನ್ನ ಗಂಡಾನೂ ಇದ್ದ ಅಲ್ವೆ ಅನಿಸ್ತು!. ಒಟ್ಟಿಗೆ ವಾಕಿಂಗ್ ಹೋಗಲು ರಮಾಗೆ ಬೆಳಿಗ್ಗೆ 5 ಗಂಡನಿಗೆ Missed ಕಾಲ್ ಕೊಡ್ತಿದ್ದೆ. ಮೊಬೈಲ್ ಅಥವಾ ಜಂಗಮವಾಣಿ ಇಟ್ಕೊಂಡಿದ್ದ ಈ ಮಂಗಳನ್ನ ಕೆಲವು ಮಂಗಳವಾಣಿ ಅಂದ್ರು. ಇನ್ನೂ ಕೆಲವ್ರು ಮೊಬೈಲ್ ಮಂಗಳ ಅಂತಾನೂ ಅಂದ್ರು, ಒಮ್ಮೊಮ್ಮೆ ಮೊಬೈಲ್ ನನಗೆ ಕಷ್ಟ-ಸುಖ ಹಂಚ್ಕೊಳ್ಳೋ ದೇವ್ರು ಕೃಷ್ಣ ಅನಿಸ್ತಿತ್ತು. ನಾನು ಕೃಷ್ಣರಾಧೆ ಸೀರಿಯಲ್ ನೋಡಿದಾಗಿನಿಂದ, ಒಮ್ಮೊಮ್ಮೆ ನಾನೇ ಪ್ರೀತಿ-ಪ್ರೇಮ-ವಿಶ್ವಾಸ ಬಯಸೋ ರಾಧೆ ಅನಿಸ್ತಿತ್ತು. ಮೊಬೈಲ್ ಮಾತಿನ ಸ್ನೇಹಿತರು, ಎಲ್ಲ ನನ್ನ ಮಾತು ವಿಚಾರ ಒಪ್ಪಿದ, ಅಪ್ಪಿದ ಸ್ನೇಹಿತ್ರು ಅನಿಸ್ತಿತ್ತು. ನಂಗೆ ತಲೆ ನೋವು, ಮೈ ಕೈ ನೋವು ಅಂದಾಗ "ಏನಾದ್ರೂ ಬೇಕೇ? ತಂದು ಕೊಡಲೇ? ಮಲಗಿ ವಿಶ್ರಾಂತಿ ತಗೊಳ್ಳಿ" ಅಂತ ಅನಿಸಿಕೆ, ಬೇಸರಿಕೆಗೆ

ಸ್ಪಂದಿಸೋ, ಆರ್ದ್ರ ಹೃದಯಿಗಳು ಅನಿಸ್ತಿತ್ತು. ಒಮ್ಮೆ ಸೊಸೆ ಮಗನಿಗೆ ಅಂದ್ಳು. "ಅಯ್ಯೋ ನೋಡ್ರಿ ನಿಮ್ಮಮ್ಮನಿಂದ, ಅವರ ಮೊಬೈಲ್‌ನಿಂದ ನಮ್ಮನೆ ರಾಮಾಯಣ, ಭಾರತ ಕಸಿವಿಸಿ ರಸರುಚಿ ಎಲ್ಲ ಟಾಂಟಾಂ ಆಗ್ತಿದೆ". ಹೀಗೆ ಅನೇಕ ಬಾರಿ ಸೊಸೆ ಮಗನ ಕಿವಿ ಚುಚ್ತಿದ್ಳು ಅನಿಸೋಕೆ ಶುರು ಆಯ್ತು ನನಗೆ. ಯಾರು ಏನು ಬೇಕಾದ್ರೂ ಅನ್ಕೊಳ್ಳಲಿ ಅಂತ ಸಮಾಧಾನ ಮಾಡ್ಕೊಂಡೆ.

ಕೊರೋನಾ ಅವಧೀಲಿ ಲಾಕ್‌ಡೌನ್ ಆದಾಗಲು ಸುಮಾರು 3 ತಿಂಗಳು ಮನೇಗೇ ಜೋತು ಬಿದ್ದಾಗ, Local ಆಗ್ಲಿ–ಬೇರೆ ಊರು, ಜಿಲ್ಲೆ, ರಾಜ್ಯ ಎಲ್ಲ ಕಡೆ ಚಲನವಲನ ಬಂದಾದಾಗ, ಮೊಬೈಲ್‌ನಿಂದ ಸಂಬಂಧ–ನೆನಪು–ಸುಖ–ದುಃಖ–ವಿಚಾರಣೆ–ಸಮಾಧಾನ ಎಲ್ಲಾ ಉಳೀತು. ಕೃಷ್ಣನ ಕಥೆ ಸೀರಿಯಲ್ ನೋಡಿದಾಗ, ಅಶರೀರವಾಣಿ–ಆಕಾಶವಾಣಿ ಎಲ್ಲಾ ಕೇಳಿ ನೋಡಿದಾಗ, ಅರೆ ಇದೇ ಅಲ್ವಾ ಈಗ ಮೊಬೈಲ್ ಆಗಿದೆ ಅನಿಸ್ತು!. ಆ ರಾಮಾಯಣ–ಮಹಾಭಾರತ ಕಾಲದಲ್ಲೇ ಮೊಬೈಲ್ ಬಂದಿದ್ರೆ, ಅದರಲ್ಲಿ ಮಾತಾಡೋ ಚಟ ಬೆಳದಿದ್ರೆ, ಆ ಅಣ್ಣ–ತಮ್ಮಂದಿರ ಜಗಳ, ದಾಯಾದಿ ಕಲಹ, ಯುದ್ಧ–ಸ್ಪರ್ಧೆ ಎಲ್ಲ ನಡೀತಿರಲಿಲ್ಲವೇನೋ ಅನಿಸ್ತು!. ಅಂದ ಚೆಂದವಾಗಿ ಬಟ್ಟೆ ಆಭರಣ ಕೇಶಾಲಂಕಾರ ದೇಹದ ಸೌಂದರ್ಯ ಎಲ್ಲ ಕಡೆ ಮಹಿಳೆಯರಿಗೆ ಗಮನ ಕೊಡೋಕೆ ಆಗ ಬಹಳ ಸಮಯವಿತ್ತಲ್ಲವೇ!? ಟಿ.ವಿ. ಮೊಬೈಲ್ ಇಲ್ಲದಿದ್ರಿಂದ ಅನಿಸ್ತು. ಹಾಂ.......! ಈಗ ಹೇಳೀತು. ಈಗಿನವರ ಟಿ.ವಿ. ಮೊಬೈಲ್ ಮೋಹದಿಂದಾನೇ ಹೆಂಗಸರಿಗೆ ಅಡಿಗೆ ವೈವಿಧ್ಯ, ಮನೆ ಅಂದ–ಚೆಂದ, ಜೊತೆಗೆ ಸೌಂದರ್ಯ ರಕ್ಷಣೆ, ವಸ್ತ್ರ, ಒಡವೆ ಅಲಂಕಾರ ಎಲ್ಲದ್ರಲ್ಲೂ ಹೆಂಗಸರಿಗೆ ಆಕರ್ಷಣೆ, ಧರಿಸುವ ಸಂಭ್ರಮ, ಸಮಯ ಇವೆಲ್ಲ ಯಾವುದೂ ಇಲ್ಲದಿರುವುದು, ಗಂಡಸರಿಗೆ ಊಟ–ತಿಂಡಿ–ರುಚಿಗಳಲ್ಲಿ ನಿರಾಸಕ್ತಿ ಅಂತ ಯೋಚಿಸಿದೆ.

ಅರೆ...... ಅಯ್ಯೋ...... ನನ್ನ ಮೊಬೈಲ್ ಕಳೆದ ಕಥೆ ಹೇಳೋಕೆ ಬಂದ ನಾನು, ಮೊಬೈಲ್ ಬಗ್ಗೆ ಹರಿಕಥೆ ಶುರು ಮಾಡಿದೀನಲ್ಲ. ಮತ್ತೆ ಹುಡುಕಾಟ ಆರಂಭ. ಯಾರ ಮನೆಗೆ ಹೋಗಿದ್ದೆ? ಲಿಸ್ಟ್ ಜ್ಞಾಪಿಸಿಕೊಂಡೆ. ಅಂಗಡಿಗೆ ಹೋಗಿದ್ನಾ–ಅಲ್ಲಿ ಬಿಟ್ನಾ? ಹಾಲಿನ ಬೂತ್? ಹಿಂದಿನ ಮನೆ? ಮೊಬೈಲ್‌ನಿಂದ ರಿಂಗ್ ಮಾಡಿ ಮಾಡಿ ಎಲ್ಲಾ ಕಡೆ ಕೇಳಿದೆ. ಎಲ್ಲೂ ಇರ್ಲಿಲ್ಲ. 'ಹೋದೆಯಾ ಜೀವ ಓ ರಿಂಗಣಕಾರ' ಅಂತ ಉಸುರಿದೆ. ಎಲ್ಲಿ ಹೋಯ್ತು ಅಂತಾ ತಲೆ ಕೆರೆದು ಕೆರೆದು 4–5 ಕೂದಲು ಕಿತ್ಕೋಂಬಂತು. ಹಾಗೂ ಹೀಗೂ 24 ಗಂಟೆ ಕಳೆಯಿತು. ನಂತರ ಫೋನ್ ಹೋಯ್ತು ಬಿಡು. ನನಗೆ ಅದರ ಲಭ್ಯತೆ ಇಷ್ಟೇ ಅಂತ ಸ್ವಲ್ಪ ಅರ್ಧಂಬರ್ಧ ಸಮಾಧಾನ ಮಾಡಿಕೊಂಡೆ. ಯಾವುದೇ ಸಿಕ್ಕಿದಾಗ, ಮಿಲನದ ಖುಷಿ!. ಕಳೆದುಕೊಂಡಾಗಿನ ವಿರಹದ ದುಃಖ, ಮಿಲನದ ಖುಷಿಗಿಂತ ನೂರಾರು ಪಟ್ಟು ಜಾಸ್ತಿ. ಕಣ್ಣೀರು, ನಿಟ್ಟುಸಿರು, ಬಿಕ್ಕಳಿಕೆ, ಉಮ್ಮಳಿಕೆ ಎಲ್ಲಾ ಆಯ್ತು. ನಿರಾಶೆ ಆವರಿಸಿತು!. ಆಸೆಯ ಬಿಳಿಯ ಸ್ವಚ್ಛ ಮೋಡ ಕಾಣಿಸಲಿಲ್ಲ. 2ನೇ ದಿನ ಚಾರ್ಜರ್ ಸಿಕ್ತು, ಹಳೇ ಕಾಲದ ಜಾಕಾಯಿ ಪೆಟ್ಟಿಗೆಯಿಂದ. ಹಳೇ ಸಾಮಾನು ಹುಡುಕುವಾಗ ಅಲ್ಲಿ ಬಂದು ಬಿದ್ದು ಬಿಟ್ಟಿದೆ. ಕಳ್ಳಾ ಸಿಕ್ಕಿದೆಯಾ ಅಂತ ಸಮಾಧಾನ! ಆದ್ರೆ ಅನ್ನವಿಲ್ಲದ ಸಾರು, ಸಕ್ಕರೆ ಇಲ್ಲದ ಕಾಫಿ, ಬೆಲ್ಲ ಇಲ್ಲದ ಸಿಹಿ, ಗಂಡ ಅಥವಾ ಹೆಂಡತಿ ಇಲ್ಲದ ಒಂಟಿತನ ಏನು' ಫಲ!? ಅಲ್ಲೇ ಚಾರ್ಜರ್ ಮತ್ತೆ ಕುಕ್ಕಿದೆ.

ಅಂದು ಸಂಜೆ ಮೋಡವಿತ್ತು. ಹಿಂದಿನ 2 ದಿನ ಭಾರಿ ಮಳೆ. ಮೋಡದ ವಾತಾವರಣದಲ್ಲಿ ಕೆಟ್ಟ Mood ಸುಧಾರಿಸಲು, ಮಾತಾಡಲು ಮೂಲೆ ಮನೆಗೆ ಹೋದೆ. ಗೆಳತಿ ರೂಪಾಳ ಆ ಮನೇಲಿ, 3 ದಿನಗಳಿಂದ ಕೆಲಸಕ್ಕೆ ಹೋಗಿರದ ಅವಳ ಗಂಡ

ಬಾಲು, ತನ್ನ ಬೈಕ್‌ನ್ನ ಕಾಂಪೌಂಡ್ ಒಳಗೆ, ಮಹಡಿ ಮೆಟ್ಟಿಲು ಹಾಗೂ ಸಜ್ಜಾ ಕೆಳಗೆ, ಕತ್ತಲಲ್ಲಿ ನಿಲ್ಲಿಸಿದ್ದ. ಮಹಡಿ ಮೆಟ್ಟಿಲು ಹತ್ತಲು ಹೋದಾಗ, ಸುಸ್ತಾಗಿ ಕಣ್ಣಿಗೆ ಕತ್ತಲೆ ಬಂದಂತಾಯಿತು. ಕರಿ ಬೈಕಿನ ಕರಿ ಸೀಟನ್ನು ಹಿಡಿದುಕೊಂಡೆ ಆಸರೆಗಾಗಿ. ಅರೆ...... ಅಲ್ಲಿ ಕೈಗೆ ಏನೋ ಸಿಕ್ಕಂತಾಯಿತು. ಸಂಜೆಗತ್ತಲಲ್ಲಿ, ಮಳೆಗೆ ಮೊದಲು ಮಿಂಚು ಹೊಳೆಯಿತು ಪಟಾರ್ ಎಂದು. ಮಳೆ ಛಟೀರ್ ಎಂದು ಆರಂಭವಾಯಿತು. ಅ ಕತ್ತಲು–ಬೆಳಕಿನ ಮಾಯಾಜಾಲದಲ್ಲಿ ಬೈಕ್ ಸೀಟ್ ಮೇಲೆ, ಏನೋ ಪುಟ್ಟ ವಸ್ತು ಹೊಳೆದು ಕಣ್ಣು ಕುಕ್ಕಿತು. ಕಣ್ಣು ದೊಡ್ಡದಾಗಿ ಅಗಲಿಸಿದಾಗ, ಅಲ್ಲೇ ಕೂತಿತ್ತು ನನ್ನ ಆ ಆಜಚಿಡಿ ಮೊಬೈಲ್!. ಅವರ ಮನೆ ಕಾಂಪೌಂಡಿಗೆ ಯಾರೂ ಬಂದಿರಲಿಲ್ಲ. ಕೊರೋನಾ ಕಾರಣ ಜನ ಓಡಾಡಿಲ್ಲ, ಭಿಕ್ಷುಕರು ಬಂದಿಲ್ಲ, ಅಲ್ಲಿ ನಿಲ್ಲಿಸಿದ್ದ ಬಾಲು ಬೈಕ್ ಹಾಗೇ ನಿಂತಿತ್ತು. 2 ದಿನಗಳ ಕೆಳಗೆ ಅವರ ಮೆಟ್ಟಿಲು ಹತ್ತುವ ಮೊದಲು, ಕ್ಯಾನ್‌ವಾಸ್ ಶೂ ತೆಗೆಯಲು, ಕೈಯ್ಯಲಿದ್ದ ಮೊಬೈಲ್ ಆ ಬೈಕ್ ಮೇಲೆ ಇಟ್ಟ ನೆನಪು ಬಂತು. “ಸಿಕ್ಕಿದೆಯಾ ಬಡ ಜೀವವೇ” ಅಂತ ಪ್ರೀತಿಯಿಂದ ಅದನ್ನ ಜೋಪಾನವಾಗಿ ಎತ್ತಿಕೊಂಡೆ. ಹಿಂದೆಂದೋ ಓದಿದ್ದೆ. ಆರ್ಕಿಮಿಡೀಸ್ ಎಂಬ ವಿಜ್ಞಾನಿ ತನ್ನ ಸ್ನಾನ ಗೃಹದಲ್ಲಿ ಟಬ್‌ಗೆ ಏನೇ ಹಾಕಿದಾಗ, ಟಬ್‌ನಿಂದ ನೀರು ಹೊರ ಉಕ್ಕಿದಾಗ, ಆತನ ಸಂಶೋಧನೆಯ ರಿಸಲ್ಟ್ ಹೊಳೆದು, ‘ಯುರೇಕಾ’ ಎಂದು ಕೂಗುತ್ತಾ ಆತ ನಗ್ನನಾಗಿಯೇ ರಸ್ತೆಯಲ್ಲಿ ಓಡಿದನಂತೆ. ನನಗೂ ಯುರೇಕಾ’ ಎಂದು ಕೂಗಬೇಕೆನಿಸಿತು.

ಮನೆಗೆ ಬಂದು ಮೊಬೈಲ್ ಸಿಕ್ಕಿತು ಅಂದೆ. “ಸಿಕ್ತಾ ನಿನ್ನ ಮಗು” ಅಂತ ಮಗ ಛೇಡಿಸಿದ. “ಯಾಕಾದ್ರೂ ಈ ಅತ್ತೆಗೆ ಮೊಬೈಲ್ ಸಿಕ್ತೋ! ನನ್ನ ಗಂಡ ಕೊಡಿಸದೇ ಆ ನಾದಿನಿ ಕೊಡಿಸಿದಳು” ಎಂಬ ಮಾತು ಮತ್ತೆ ಮುಂದುವರೆಯುತ್ತೆ ನನ್ನ ಸೊಸೆ ಮನಸ್ಸಿನಲ್ಲಿ ಅಂತ ನನಗೆ ಮತ್ತೆ ಮತ್ತೆ ಅನಿಸ್ತು. “ ಆ ಮೊಬೈಲ್ ಕಳೆದೇ ಹೋಗಿದ್ರೆ ಈ ಅತ್ತೆಗೂ ಮೊಬೈಲ್ ಇಲ್ಲ. ತನ್ನ ಗಂಡ ಕೊಡಿಸದ್ದರಿಂದ ಈ ಸೊಸೆಗೂ ಮೊಬೈಲ್ ಇಲ್ಲ ಎಂಬ ಸಮಾನತೆ ಬರ್ತಿತ್ತು” ಅಂತ ಸೊಸೆ ಗೊಣಗಿದಳು. ಆ ಮೊಬೈಲ್ ಮಳೇಲಿ ನೆನದಿರಲಿಲ್ಲ. ಚಳಿಯಲ್ಲಿ ಕುಗ್ಗಿರಲಿಲ್ಲ. ನಾನಂತೂ ಹಿಗ್ಗಿ ಹಿಗ್ಗಿ ಹೀರೆಕಾಯಿ ಅಲ್ಲಲ್ಲ ಕುಂಬಳಕಾಯಿಯಾದೆ. ಎಲ್ಲಾ ಮೊಬೈಲ್ ಮಿತ್ರರೊಂದಿಗೆ ಚಡಪಡಿಸಿ ಆತುರಾತುರವಾಗಿ ಒಂದೇ ಉಸಿರಿನಲ್ಲಿ ಮಾತಾಡಿದೆ. ನನಗೂ ತೃಪ್ತಿ, ಅವರಿಗೂ ತೃಪ್ತಿ. ಆ ರಾತ್ರಿ ಎರಡು ತುತ್ತು ಹೆಚ್ಚು ಒಳಗೆ ಹೋಯಿತು. ಮಾರನೇ ದಿನ ಸಂಜೆ ಮಗ ಬಂದು ಎಲೆ–ಅಡಿಕೆ ಚೀಲದ ತರಹದ ನೇತಾಡುವ ಒಂದು ಪುಟ್ಟ ಚೀಲ ತಂದು ನನ್ನ ಮುಂದೆ ಹಿಡಿದ. “ಅಮ್ಮ ದಿನಾ ಮೊಬೈಲ್ ಎಲ್ಲೋ ಇಟ್ಟು ಪಂಚಾಯ್ತಿ ಮಾಡಬೇಡ. ಈ ಬ್ಯಾಗಲ್ಲೇ ನಿನ್ನ ಮೊಬೈಲ್ ಇಟ್ಕೋ. ಅಲ್ಲಲ್ಲ ಈ ಬ್ಯಾಗಲ್ಲೇ ನಿನ್ನ ಆ ಪ್ರೇಮಿನ ಇಟ್ಕೋ”. ಅಂತ ಛೇಡಿಸಿದಾಗ ಅರ್ಧ ಕೋಪ, ಅರ್ಧ ಸಂತೋಷದಿಂದ ಹೊಡೆಯುವ ಪೋಸ್‌ನಲ್ಲಿ ಕೈ ಎತ್ತಿದೆ. ಮೊಬೈಲ್ ರಿಂಗಣಿಸದ ಆ ಕೆಲ ಗಂಟೆಗಳ ವಿರಹ ಕಳೆದು, ಮತ್ತೆ ಮಿಲನವಾದಾಗ ಅದಕ್ಕೆ ಹೆಚ್ಚು ಮಹತ್ವ, ಆಸರೆ ಅಂತ ಆ ಮಗ ಕೊಟ್ಟ ಚೀಲದಲ್ಲಿ ಮೊಬೈಲ್ ಹಾಕಿ ಅದನ್ನು ಒಮ್ಮೆ ಹುಚ್ಚಿಯಂತೆ ಅಪ್ಪಿಕೊಂಡು ಮುತ್ತಿಟ್ಟೆ. ತಕ್ಷಣ ಯಾರಾದರೂ ನೋಡಿ ನಕ್ಕಾರು, ಛೇಡಿಸಿಯಾರೂ ಅಂತ ಬಾಯಿಗೆ ಸೆರಗನ್ನು ಮುಚ್ಚಿಕೊಂಡೆ.

■

# ನಿದ್ರಾ ಯೋಗ ಮತ್ತು ಮುಕ್ತ ವಿವಿ

ನಂದಿನಿ ಹೆದ್ದುರ್ಗ

ವಿಶ್ವ ನಿದ್ರಾ ದಿನಕ್ಕೊಂದು ಲೇಖನ ಸಿಗಬಹುದೇ ಎನ್ನುವ ಪ್ರಶ್ನೆಯೊಂದು ಬಂದಾಗಲೇ ನಿದ್ರೆಗೂ ಒಂದು ಇಂಟರ್ನ್ಯಾಷನಲ್ ದಿನವಿದೆ ಎಂಬುದೂ ವಿಶ್ವ ನಿದ್ರಾ ಸಂಸ್ಥೆಯೆಂಬ ತಜ್ಞರ ಸಮಿತಿಯಿದೆ ಎಂಬುದು ತಿಳಿದು ಒಂಚೂರು ಗಲಿಬಿಲಿಯಾಯಿತು. ಆಹಾರ ನಿದ್ರೆ ಮೈಥುನಗಳು ಜೀವಿಗಳ ಸಹಜ ಸ್ವಾಭಾವಿಕ ಕ್ರಿಯೆಗಳು ಆಗಿದ್ದಾಗ್ಯೂ ಕೆಲವರಿಗೆ ಚಯಾಪಚಯ ಕ್ರಿಯೆಯ ಸಮಸ್ಯೆಯಿದ್ದರೆ ಇನ್ನೂ ಕೆಲವರಿಗೆ ಅನಿದ್ರೆ ಅತಿ ನಿದ್ರೆಯ ಯೋಗಾಯೋಗ.

ಸಾಕಷ್ಟು ಮಂದಿಗೆ ನಿರಾಸಕ್ತಿ ನರದೌರ್ಬಲ್ಯದ ತೊಂದರೆ.

ಹೀಗಿದ್ದಾಗ ನಿದ್ರೆಗೊಂದು ಅಂತರರಾಷ್ಟ್ರೀಯ ದಿನ /ಸಂಸ್ಥೆ ಇರುವುದು ತಪ್ಪೇನಲ್ಲ ಅಂತ ಸಮಾಧಾನ ಪಟ್ಟುಕೊಂಡೆ.

ನಿದ್ದೆಗೊಮ್ಮೆ ನಿತ್ಯ ಮರಣ ಎನ್ನುವ ಕವಿವಾಣಿಯೂ,

ಸತ್ತಂಗೆ ನಿದ್ರೆ ಮಾಡ್ತಾನೆ ಎನ್ನುವ ಬೈಗುಳವೂ

ನಿದ್ರೆಯಲ್ಲೇ ಸಾವು ಎಂಬ ಅನಾಯಾಸ ಮರಣದ ವರವೂ ನಿದ್ರೆಯ ಸರಿಗಮಗಳ ಕುರಿತು ಹೇಳುತ್ತವೆಯಾದರೂ ಇದನ್ನು ಇಲ್ಲಿ ಕುಳಿತು ಬರೆಯುತ್ತಿರುವ ನಾನೂ ನಿದ್ರೆಗಾಗಿ ಸಕಲ ಪಡಿಪದಾರ್ಥ ಗಳನ್ನು ತಿಂದೂ,ಸಕಲ ಕ್ರಿಯಾಕರ್ಮಗಳನ್ನು ಪೂರೈಸಿ ಕೊನೆಗೂ ಯಶ ಕಾಣದೆ ಕೈಚೆಲ್ಲಿದವಳು.

ಅನಿದ್ರೆಯ ಸಮಸ್ಯೆ ನಮ್ಮ ವಂಶವಾಹಿನಿಯೊಳಗಿನ ಬ್ರಹ್ಮ ಬರಹವೆಂಬ ನನ್ನ ಅನುಮಾನಕ್ಕೆ ಇಂಬು ಕೊಡುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ.

ಇದರಲ್ಲಿ ಪ್ರಮುಖವಾದದ್ದು

ನನ್ನ ಬಾಲ್ಯದಲ್ಲಿ ನಡುರಾತ್ರಿಯಲ್ಲಿ ಅಪ್ಪ ಅಮ್ಮನ ಕೋಣೆಯಿಂದ ಕೇಳಿಬರುತ್ತಿದ್ದ ಮಾತುಕತೆಗಳು

* ನಾಳೆ ಮಂಟಿ ಪಟ್ಟಿಗೆ ನಾಲ್ಕು ಹೆಣ್ಣಾಳು ಬಿಟ್ರೆ ದನಿನ್ ಗೊಬ್ರ ಹೊತ್ತು ಮುಗಿಯುತ್ತೆ.

* ಸಿದ್ಧ, ಬೈರ ಈ ವಾರ ಸೌದೆ ಹೊರಲಿ.

* ಮರಗಪಾತು ಮುಂದಿನ ವಾರದಿಂದ ಶುರು ಮಾಡದೇ ಇದ್ರೆ ರೆಕ್ಕೆ ಬರೋದು ನಿಧಾನ ಆಗ್ತದೆ.

* ಹೊಲದ ಪಟ್ಟೆಗೆ ಮುಂದಿನ ವಾರದಲ್ಲಿ ಸ್ಪೆ ಶುರು ಮಾಡಬೇಕು'

ಹೀಗೆ ಕಾಫಿ ತೋಟಕ್ಕೆ ಮಾಡಬೇಕಾದ ನಾಳಿನ, ಮುಂದಿನ ವಾರದ,ಮುಂದಿನ ತಿಂಗಳ,ಮುಂದಿನ ವರ್ಷದ ಕೆಲಸಗಳೆಲ್ಲವನ್ನೂ ಎಚ್ಚರಾದಾಗಲೆಲ್ಲ ಚರ್ಚಿಸುತ್ತಿದ್ದ ಅಪ್ಪ–ಅಮ್ಮ ನಿಜವಾಗಿಯೂ ಮಲಗುತ್ತಿದ್ದರೇ ಅಥವಾ ಅವರಿಗೂ ಅನಿದ್ರೆಯ ಸಮಸ್ಯೆ ಇತ್ತೇ ಎನ್ನುವುದು ಈಗಲೂ ಕಾಡುವ ಪ್ರಶ್ನೆ.

ಇನ್ನೂ, ಒಂದು ಸಣ್ಣ ಶಬ್ದಕ್ಕೂ ಪ್ರತಿಕ್ರಿಯಿಸುವ ನನ್ನ ಮೆದುಳಿನ ಕಾರಣದಿಂದಾಗಿ

ಅಪ್ಪ-ಅಮ್ಮನ ನಡುರಾತ್ರಿಯ ಮಾತುಕತೆಗಳು ನನ್ನ ಪ್ರತಿ ಇರುಳನ್ನೂ ಸಿಡಿಮಿಡಿಯಲ್ಲೇ ಮುಗಿಸುತ್ತಿದ್ದವು.

ಅದು ನನ್ನ ಮಾತು-ಕೃತಿಯಲ್ಲಿ ವ್ಯಕ್ತವಾಗಿ 'ಸಿಡುಕ್ಲಿ' ಎನ್ನುವ ಹೆಸರು ಆಗೆಲ್ಲಾ ನನ್ನ ಅಡ್ಡ ನಾಮಗಳ ಪಟ್ಟಿಯಲ್ಲಿ ಶಾಶ್ವತ ಸ್ಥಾನ ಪಡೆದಿತ್ತು.

ಇನ್ನು ಮನೆವಾಸ ಮುಗಿದು ಬೋರ್ಡಿಂಗ್‌ಗಿಗೆ ಹತ್ತಿರದ ನಗರಕ್ಕೆ ಹೋಗುವ ಕಾಲ. ಶುದ್ಧ ಸಸ್ಯಾಹಾರಿಯಾಗಿದ್ದ ನನಗೆ ಕ್ರಿಶ್ಚಿಯನ್ ಬೋರ್ಡಿಂಗಿನ ಮಾಂಸ ಮಡ್ಡಿಗಳನ್ನೊಳಗೊಂಡ ಆಹಾರ ಮತ್ತು ಬಟರ್ ಮಿಲ್ಕಿನಲ್ಲಿ ತೇಲುತ್ತಿದ್ದ ಜಿರಳೆಯ ಕೈಕಾಲುಗಳು ಊಟವೆಂದರೆ ಮುಖ ಹುಳ್ಳಗೆ ಮಾಡುವ ಪರಿಸ್ಥಿತಿಯನ್ನು ತಂದೊಡ್ಡಿದ್ದವು.

ಅದೂ ಅಲ್ಲದೆ ತಮ್ಮನ ಅಂಗಿಯ ಸಣ್ಣ ಚುಂಗಾದರೂ

ಹಿಡಿದು ಮಲಗುವ ಮಹಾ ಅಂಜುಬುರುಕಿಯಾದ ನಾನು ದೊಡ್ಡ ಹಜಾರದಲ್ಲಿ ನಿಗದಿತ ಅಂತರದಲ್ಲಿ ಹಾಕಿದ್ದ ಮಂಚದಲ್ಲಿ ಒಬ್ಬಳೇ ಮಲಗುವ ಮಹಾ ಯೋಗಕ್ಕೆ ಇರುಳು ಇಳಿಯುವ ಕಾಲಕ್ಕೆ ಹೆದರಿಕೆಯಿಂದ ವ್ಯಸ್ಥಳಾಗುತ್ತಿದ್ದೆ.

ಇದೆಲ್ಲದರ ಹೊರತಾಗಿಯೂ ಓದಿನಲ್ಲಿ ನಾನು ಬಲು ಜಾಣೆ.

ರಾತ್ರಿ ಹತ್ತರವರೆಗೂ ಬೋರ್ಡಿಂಗಿನಲ್ಲಿ ಸ್ಟಡಿ ಅವರ್.

ಇಂಥದ್ದೇ ಒಂದು ರಾತ್ರಿ..ಸ್ಟಡೀ ಅವರ್..

ಅಮ್ಮನ ನೆನಪು ತೀವ್ರ ಕಾಡಿ ಎಲ್ಲರೆದುರು  ಕಂಬನಿಗರೆಯಲು , ಸಿಂಬಳ ಸುರಿಸಲು ನಾಚಿಕೆಯೆನಿಸಿ ಡೆಸ್ಕಿನ ಅಡಿಯಲ್ಲಿ ಪುಸ್ತಕ ಹಿಡಿದು ಅಳುತ್ತಳುತ್ತಾ  ಓದುತ್ತ ಕುಳಿತೆ.

ಕೈಯಲ್ಲಿದ್ದಿದ್ದು ನೆಚ್ಚಿನ ಜೀವಶಾಸ್ತ್ರದ ಪುಸ್ತಕ.

ಪಾಠ ಆಳಕ್ಕಿಳಿದು ಅಳು ಮರೆತುಹೋಗಿ ಹತ್ತರ ಬೆಲ್ಲು ಹೊಡೆದು ಎಲ್ಲರೂ ಮಲಗಲು ಹೋದರೂ ನಾನು ಅಡಿಯಲ್ಲಿ ಕುಳಿತು ಜೀವಶಾಸ್ತ್ರದೊಳಗೆ ಮುಳುಗಿಹೋಗಿದ್ದೆ.

ಬೆತ್ತ ಹಿಡಿದು ಬಂದ ಸಿಸ್ಟರ್

'ಏನು...ನಿದ್ರೆ ಮಾಡ್ತಿದ್ದೀಯಾ'

ಅಂತ ದೊಡ್ಡ ಸ್ವರದಲ್ಲಿ ಗದರಿ ಬೆತ್ತ ಎತ್ತಿದಾಗ ನಾನು ತಬ್ಬಿಬ್ಬಾಗಿ 'ಇಲ್ಲ., ಓದ್ತಿದ್ದೆ...ಬೇಕಾದರೆ ಪ್ರಶ್ನೆ ಕೇಳಿ ಸಿಸ್ಟರ್' ಎಂದವಳು

ಕೈಯಲ್ಲಿದ್ದ ಪುಸ್ತಕವನ್ನು ಅವರೆಡೆಗೆ ಹಿಡಿದಿದ್ದೆ.

ನನ್ನ ಮುಖಭಾವವೂ ಪ್ರಾಮಾಣಿಕತೆಯೂ ನನ್ನ ಆತ್ಮವಿಶ್ವಾಸವೂ ಸಿಸ್ಟರ್‌ಗೆ ಮೆಚ್ಚುಗೆಯಾಗಿ ಹೈಸ್ಕೂಲು ಮುಗಿಯುವವರೆಗೂ ತದೇಕ ಓದಿಗೆ ಉದಾಹರಿಸಲು ನನ್ನ ಹೆಸರು ಸುಲಭವಾಗಿ ಅವರ ಬಾಯಿಗೆ ಒದಗುತಿತ್ತು.

ಈ ಪ್ರಸಂಗ ಗೆಳತಿಯರ ನಡುವೆ ಸಣ್ಣ ಗೌರವಕ್ಕೂ ಕಾರಣವಾಗಿತ್ತು.

ಇಷ್ಟು ಜಾಣ ವಿದ್ಯಾರ್ಥಿಯಾಗಿದ್ದ ನಾನು ಬಾಲ್ಯಸಹಜ ಮೂಲಭೂತ ಅವಶ್ಯಕತೆಗಳಾದ ಆಹಾರ ನಿದ್ದೆ ಎರಡಕ್ಕೂ ಕುಂದಿದ್ದರೂ ಒಳ್ಳೆಯ ಅಂಕ  ತೆಗೆದುಕೊಂಡು ಸ್ಕೂಲಿಗೆ ಸೆಕೆಂಡ್ ಬಂದು, ಭಾಷೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದೆ.

ಆದರೆ...ವಿಧಿ ಲಿಖಿತವನ್ನು ಯಾರಾದರೂ ಅಳಿಸಲು ಉಂಟೆ?

ಅದ್ಯಾವ ಕಾರಣಕ್ಕೋ ಹದಿನಾರನೇ ವಯಸ್ಸಿಗೆ ಮಗಳಿಗೆ ಮದುವೆ ಮಾಡಿದ ಅಪ್ಪನಿಗೆ ಅದು ತಪ್ಪು ಅನಿಸಲಿಲ್ಲ.

ಅದಲ್ಲ ವಿಷಯ.

ತಂತಿ ಕತ್ತರಿಸಿದ ರುದ್ರ ವೀಣೆಯಿಂದ ಹೊರಡುವ ಕರ್ಕಶ ಸದ್ದಿನಂತೆ ಗೊರಕೆ ಹೊಡೆಯುವ ಮಹಾನುಭಾವ ನನ್ನ ಪತಿಯಾಗಿ ಬಂದಿದ್ದು ನಿಜವಾದ ವಿಷಾದ ಯೋಗ.



ಸಣ್ಣ ಸದ್ದಿಗೂ ನಿದ್ರೆ ತಪ್ಪಿ ಎದ್ದು ಕೂರುತ್ತಿದ್ದ ನನಗೆ ಪಕ್ಕದಲ್ಲಿ ಬೋರಿಗೆ ಬಂದ ಡೀಸೆಲ್ ಇಂಜಿನ್ ಒಂದು ಮಲಗುವ ಹಾಗಾಗಿದ್ದು ನನ್ನ ಪೂರ್ವಾರ್ಜಿತದ ಕರ್ಮವೇ ಇರಬೇಕು.

ಕೊನೆಗೂ ಕೋಣೆಗಳು ಬದಲಾಗಿ ಪಕ್ಕದಲ್ಲಿದ್ದ ಮಹಾಗೋಡೆ ಗೋದಾಮುಗಳ ಹೊರತಾಗಿಯೂ ಗುಡುಗು–ಸಿಡಿಲು ತಡರಾತ್ರಿಯಲ್ಲಿ ನನ್ನ ಕಿವಿಗೆ ಬೀಳುವಾಗ ಪಕ್ಕದ ಕೋಣೆಗೆ ನನ್ನ ಕೋಣೆಯಿಂದ ಕರೆಯೊಂದು ಹೋಗುತ್ತಿತ್ತು.

'ರೀ ...ನಾನೂ ಒಂಚೂರು ಮಲಗಬೇಕು.ದಯವಿಟ್ಟು ಸೈಡಿಗೆ ತಿರುಗಿ ಮಲಗಿ,ಗೊರಕೆ ಹೊಡಿಬ್ಯಾಡಿ'

ಅನ್ನುವ ನನ್ನ ಪ್ರಾರ್ಥನೆ ಕಮ್ ಸಂತೆಯಲ್ಲೂ ನಿದ್ದೆ ಮಾಡುವ ಅವನ ಸ್ವಭಾವಕ್ಕೆ ದೊಡ್ಡ ಈರ್ಷ್ಯೆ ಸೇರಿಕೊಂಡ ಕೋರಿಕೆಗೆ

" ಏಯ್ ನಿನ್ ಅ.....ನ್ ...ನಿನಗೆ ನಿದ್ರೆ ಬರದಿದ್ದರೆ ಅದು ನಿನ್ನ ಕರ್ಮ" ಅಂತ ಅಂದು ಗಂಟಲು ಸರಿಪಡಿಸಿಕೊಂಡು ಇನ್ನೂ ದೊಡ್ಡದಾಗಿ ಹೊಸದಾದ ಲಯದಲ್ಲಿ ಗೊರಕೆ ಆರಂಭವಾಗುತ್ತಿತ್ತು.(ಹೀಗೆ ಬಯ್ಯುವುದು ತಪ್ಪು, ತಪ್ಪಿಲ್ಲ ಎನ್ನುವುದೆಲ್ಲ ಗೊತ್ತಿಲ್ಲ.

ಗಾಢ ನಿದ್ದೆಯಲ್ಲಿದ್ದವರನ್ನು ಫೋನಿಂದ ಎಬ್ಬಿಸಿ ಹೊಳ್ಳಿ ಮಲಗಿ ಅಂದರೆ ಮತ್ತೇನು ಅಯ್ತು ಅಂದಾರೆಯೇ?)

ಭಾಷಣಕ್ಕೆ ಒದಗುವ ನನ್ನ ಫೆಮಿನಿಸಮ್ಮಿನ ತರ್ಕ ಸಿದ್ಧಾಂತಗಳು ನನ್ನ ನಿದ್ರಾ ಡಿಸ್ಟರ್ಬಿಗೆ ಕಾರಣವಾಗುವ ಗೊರಕೆ ಮಹಾರಾಯನಿಗೆ ಒದಗದೆ ಕಣ್ಣ ತುದಿಯಲ್ಲಿ ಒಂದೆರಡು ಕಂಬನಿಗಳು ಹನಿಗಟ್ಟಿ ಕಿವಿಗೆ ತುರುಕಲು

ಹತ್ತಿಗಾಗಿ  ತಡಕಾಡಿ ನಿಟ್ಟುಸಿರುಡುತ್ತೇನೆ.

ಇದೆಲ್ಲದರ ನಡುವೆಯೂ ವಿಶ್ವ ನಿದ್ರಾ ದಿನದ ಈ ಬರಹದಲ್ಲಿ ಅಚ್ಚರಿಯ ನಾಲ್ಕು ಸಾಲುಗಳು ಇವೆ. ಅನಿದ್ರೆಯ ಸಂಕಟ ,ಅತಿನಿದ್ರೆಗಳ ಮೋಹದ ನಡುವೆ ಸಾಗುತ್ತಿದ್ದ ನನ್ನ ಜೀವನ ಯಾನ ಅಕ್ಷರವೆಂಬ ಅಮಲಿನ ಪುರುಷನ ಮೋಹಕ್ಕೆ ಬಂದು ನಿಂತು,

ಬರಹದಲ್ಲಿ ಅಷ್ಟಿಷ್ಟು ಹೆಸರು ಮಾಡಿ, ಅಕ್ಷರಕ್ಕೆ ದಕ್ಕಿದ ನಾಲ್ಕು ಸಾಲುಗಳು ಕವಿತೆಯೆಂಬ ಪಟ್ಟ ಪಡೆದು ಕವಿಗೋಷ್ಠಿಗೆ ಕರೆ ಬರಲು ಆರಂಭವಾಯಿತು.

ವೇದಿಕೆಯಲ್ಲಿ ಕವಿಪರಿಚಯದ ಸಂದರ್ಭದಲ್ಲಿ  ಹೇಳುತ್ತಿದ್ದ ನನ್ನ ವಿದ್ಯಾರ್ಹತೆ ವಿಪರೀತ ಮುಜುಗರ ತರಿಸಿ, ಕೊನೆಪಕ್ಷ ಮುಕ್ತ ವಿವಿಯಲ್ಲಿ ಸೂಕ್ತ ಪದವಿಯನ್ನು ಪಡೆದು ನನ್ನ ಹೆಸರಿನ ಪಕ್ಕಕ್ಕೆ ಅಂಟಿಸಿಕೊಳ್ಳಬೇಕೆಂಬ ಹೆಬ್ಬಯಕೆ ಶುರುವಾಯಿತು.

ಸೆಕೆಂಡ್ ಪಿಯುಸಿ ಮಾರ್ಕ್ಸ್ ಕಾರ್ಡ್ ಕೂಡ ಕಾಲೇಜಿನಿಂದ ಪಡೆಯದಿದ್ದ ನಾನು, ಓದಿದ ಕಾಲೇಜಿಗೆ ಕರೆಮಾಡಿ, ಸ್ವಯಂ ಹೋಗಿ ಗುರುಗಳ ನೆರವಿನೊಂದಿಗೆ ಅಂಕಪಟ್ಟಿಯನ್ನು ಪಡೆದು ಮುಕ್ತ ವಿವಿಯ ಪದವಿಗಾಗಿ ಹಣ ಕಟ್ಟಿದೆ.

ನಾಲ್ಕು ದಿನದಲ್ಲಿ ತುಸು ದೊಡ್ಡ ಗಾತ್ರದ ಪುಸ್ತಕಗಳು ಕೈ ಸೇರಿದ್ದವು. ಅಷ್ಟರಲ್ಲಾಗಲೇ ನನ್ನ ಸಂಸಾರಕ್ಕೆ ಎರಡೂವರೆ ದಶಕದ ತುಂಬಿತ್ತು.

ಅಂದು ಆರಂಭ ಶೂರತ್ವದ ಮೊದಲ ದಿನ.

ನಾನು ಬೇಗ ಬೇಗ ಕೆಲಸ ಮುಗಿಸಿ ನನ್ನ  ಪಾಠ ಓದಿಕೊಳ್ಳಲು ಆರಂಭಿಸಿದೆ.

ಯಾವ ಜನ್ಮದ ಪುಣ್ಯವೋ ಏನೋ!

ನನ್ನಮೊದಲ ದಿನದ ಮೊದಲ ಪುಸ್ತಕದ ಮೊದಲ ಪಾಠವನ್ನು ಅರ್ಧ ಓದುವಷ್ಟರೊಳಗಾಗಿ ನಾನು ಹುಟ್ಟಿದಾರಭ್ಯ ಅನುಭವಿಸದಿದ್ದ ತೀವ್ರ ನಿದ್ರಾ ಬಯಕೆಯುಂಟಾಗಿ ಕೈಲಿ ಪುಸ್ತಕವನ್ನು ಹಿಡಿದೇ ಪಕ್ಕಕ್ಕೆ ಉರುಳಿಕೊಂಡವಳು ಗೊರಕೆ ಹೊಡೆಯತೊಡಗಿದೆ.

ನಿಜ...ಅಕ್ಷರಶಃ ಗೊರಕೆ ಹೊಡೆಯತೊಡಗಿದೆ!!!

ಸುದೀರ್ಘ ಎರಡು ತಾಸಿನ ಹಗಲು ನಿದ್ದೆಯ ನಂತರ ಎಚ್ಚರಾಗಿ ಸುತ್ತಲಿನ ಪ್ರಪಂಚವೆಲ್ಲವೂ ಹೊಸಹೊಸದಾಗಿ ಗೋಚರಿಸಿ ಇಲ್ಲಿವರೆಗೆ ಅನುಭವಕ್ಕೆ ದಕ್ಕಿದ ಸತ್ತಂತೆ ಮಲಗುವ ಸುಖದ ಮಂಪರಿನಲ್ಲಿ ಹಾಗೆ ಸ್ವಲ್ಪ ಹೊತ್ತು ಕುಳಿತೆ.

ಸಾಯುವುದಕ್ಕೂ ಹಿಂದಿನ ಘಟನೆಗಳನ್ನು ಮೆಲುಕು ಹಾಕಿಕೊಂಡಾಗ ಆ ದಿನ ಬೆಳಿಗ್ಗೆ ಬೇಗ ಎದ್ದಿದ್ದು, ಹಿಂದಿನ ದಿನದ ದೈಹಿಕ ಶ್ರಮದ ಗದ್ದೆ ಕೆಲಸಗಳು, ರಾತ್ರಿ ಯಾಕೋ ಸಣ್ಣಗೆ ಅತ್ತಿದ್ದು ಎಲ್ಲವೂ ಸೇರಿ ಆಯಾಸವಾಗಿ ಹೀಗೆ ನಿದ್ರೆ ಹತ್ತಿದೆ ಎಂದು ಸ್ವಯಂ ಸಮಾಧಾನಿಸಿಕೊಂಡು ಅಡುಗೆ ಮನೆಗೆ ಓಡಿದೆ.

ವಿಧಿಲಿಖಿತವೋ ಹಣೆಬರಹವೋ ಯೋಗವೋ ಪ್ರಯೋಗವೋ ಗೊತ್ತಿಲ್ಲ.

ಅಂದಿನಿಂದ ನನ್ನ ಮುಕ್ತ ವಿವಿಯ ಪಠ್ಯಪುಸ್ತಕಗಳನ್ನು ಓದಲು ತೆರೆದ ಹತ್ತೇ ನಿಮಿಷದಲ್ಲಿ ಒತ್ತರಿಸಿಕೊಂಡು ಬರುತ್ತಿದ್ದ ನಿದ್ರಾದೇವಿ ಇನ್ನಿಲ್ಲದಂತೆ ನನ್ನ ದೇಹ ಮನಸ್ಸುಗಳ ಮೇಲೆ ಹಕ್ಕು ಸ್ಥಾಪಿಸಿದಳು.

ಈ ಬಗೆಯ ನಿದ್ರೆಯ ಯೋಗ ಅಚಾನಕ್ಕು ಒದಗಿ ನಾನು ಸಂಭ್ರಮವೋ

ಭ್ರಮೆಯೋ ಎಂಬ ಗೊಂದಲದಲ್ಲಿದ್ದಾಗ ಮಕ್ಕಳು ಮತ್ತು ಮನೆಯವರಿಗೆ ನನ್ನ ಲಯಬದ್ಧ ಗೊರಕೆ ಪರಮಾಶ್ಚರ್ಯ.

ಹೇಗಾದರೂ ನನ್ನ ಹೆಸರಿನ ಪಕ್ಕಕ್ಕೆ ಒಂದು ಡೆಸಿಗ್ನೇಶನ್ ಬರಲೇಬೇಕೆಂಬ ಹಠಕ್ಕೆ ಕಣ್ಣಿಗೆ ಎಣ್ಣೆ ಹಚ್ಚುವ, ರಾತ್ರಿ ಕಾಫಿ ಟೀ ಕುಡಿಯುವ ,ಆಹಾರದ ಪ್ರಮಾಣ ಕಡಿಮೆ ಮಾಡುವ, ಕೊನೆಗೆ ಊಟವನ್ನೇ ಸ್ಕಿಪ್ ಮಾಡುವ ನನ್ನ ಎಲ್ಲಾ ಪ್ರಯೋಗಗಳು/ ಶೋಧಗಳು ಮುಕ್ತ ವಿವಿಯ ಪಠ್ಯದ ಮುಂದೆ ಮಂಡಿಯೂರಿ ಗಾಢ ನಿದ್ರೆಯೊಂದಿಗೆ ಶರಣಾಗತಿ ಹೊಂದುತ್ತಿದ್ದವು.

ಮೊದಲ ವರ್ಷದ ಪರೀಕ್ಷೆಗಳಿಗೆ ದಿನಾಂಕ ನಿಗದಿಯಾದ ಸಂದೇಶ ಬಂದಾಗ

'ದೇವರೇ..ಎಂಥದು ಓದೇ ಇಲ್ಲವಲ್ಲ'

ಎಂಬ ಭಯಕ್ಕೆ ಹೊಸದಾಗಿ ಪುಸ್ತಕ ಹಿಡಿದದ್ದೂ ವ್ಯರ್ಥವಾಗಿ ನನ್ನದು ನಿಜ ಅರ್ಥದಲ್ಲಿ ಶೂನ್ಯ ಸಂಪಾದನೆಯಾಯಿತು.

ಕೊನೆಯಲ್ಲಿ,

ಯಾವ ಪಠ್ಯ ಪುಸ್ತಕದ ಓದೂ ನನಗೆ ನಿಜಕ್ಕೂ ಬೇಕಿಲ್ಲ ಎಂಬ ವೈರಾಗ್ಯದ ನಿರ್ಧಾರ ಮಾಡಿ ಮುಕ್ತ ವಿವಿಯ ಪದವಿಯ ಆಸೆಯನ್ನು ಪಕ್ಕಕ್ಕಿಟ್ಟೆ.

ಅಚ್ಚರಿಯೆಂಬಂತೆ

ಅಂದಿನಿಂದ ಮತ್ತೆ ಅನಿದ್ರೆ ನನ್ನ ಕಣ್ಣಿಗೆ ಒತ್ತಿಕೊಂಡು ಬಂದು, ನನ್ನ ಮೆದುಳು ತನ್ನ ಹಿಂದಿನ ಶೈಲಿಯಲ್ಲಿ ಸಣ್ಣ ಸದ್ದಿಗೂ ಪ್ರತಿಕ್ರಿಯಿಸಲು ಆರಂಭಿಸಿ ನಡುರಾತ್ರಿಯಲ್ಲಿ ಪಕ್ಕದ ಕೋಣೆಗೆ ಕರೆ ಹೋಗತೊಡಗಿತು.

'ನಿದ್ರೆ ಬರುತ್ತಿಲ್ಲ/ ಬರಲಿಲ್ಲ'

ಎನ್ನುವ ನನ್ನ ವರಾತ ಆರಂಭವಾದಾಗಲೆಲ್ಲಾ ಮಕ್ಕಳು ಓಪನ್ ಯುನಿವರ್ಸಿಟಿಯ ಡಿಗ್ರಿಗೆ ಅಪ್ಲೈ ಮಾಡಲಾ ಎನ್ನುವ ಬೆದರಿಕೆ ಹಾಕಿ ಬಾಯಿ ಮುಚ್ಚಿಸುತ್ತಾರೆ.

ವಿಶ್ವ ನಿದ್ರಾ ದಿನವೆಂಬ ಈ ಸುದಿನವನ್ನು ಯಾತಕ್ಕಾಗಿ ಮಹಾನುಭವರು ಹುಟ್ಟು ಹಾಕಿದರೋ ತಿಳಿಯುತ್ತಿಲ್ಲ.

ಆದರೆ ಅನಿದ್ರೆ ಅತಿನಿದ್ರೆಗಳೆರಡನ್ನೂ ನಿಭಾಯಿಸಿದ ಅನುಭವದ ಮೇಲೆ ಒಂದು ಬ್ಯಾಲೆನ್ಸ್ಡ್ ಸ್ಥಿತಿಗಾಗಿ ಹತ್ತನೇ ತರಗತಿಯ ಪರೀಕ್ಷೆಯನ್ನು ಮುಕ್ತ ವಿವಿಯಲ್ಲಿ ಮತ್ತೊಮ್ಮೆ ಕಟ್ಟಬಹುದೇ ಅಂತ ಯೋಚಿಸುತ್ತಿದ್ದೇನೆ.

■

**ಸಾರಿಗೆ**

ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಿಸಿದೆ

ಸಾರಿಗೆಯ ಸಂಸ್ಥೆ

ಏಕೆಂದರೆ ಅದರ ಹೆಸರೇ

Saree ಗೆಯ ಸಂಸ್ಥೆ

ದಿವಾಕವಿ

# ಮಾಸ್ತಿ ಅವರ ಕನ್ನಡ ಪ್ರೇಮ

ಸುಕೇಶವ



ಮಾಸ್ತಿ ಕನ್ನಡದ ಆಸ್ತಿ ಎನ್ನುವುದು ಕನ್ನಡಿಗರೆಲ್ಲರ ಹೃದಯದಲ್ಲಿರುವ ಮಾತು. ಅವರ ಕನ್ನಡ ಪ್ರೇಮ ಎಷ್ಟಿತ್ತು ಎನ್ನುವುದಕ್ಕೆ ಒಂದು ಉದಾಹರಣೆ ಅವರ ಭಾವ ಗ್ರಂಥದಲ್ಲಿದೆ. ಒಂದು ಸಲ ಮಾಸ್ತಿ ಅವರು ಜಮಾಬಂದಿ ವೇಳೆ ಒಬ್ಬ ರೈತ ಮಾಡಿದ್ದ ತಪ್ಪು ಸಂಗತಿಯನ್ನು ನೋಡಿ ಅವನನ್ನು ಕರೆದು ಏನಪ್ಪಾ ಇದನ್ನು ಮಾಡಬಾರದು ಎಂದು ನಿನಗೆ ತಿಳಿಯಲಿಲ್ಲವೇ ಎಂದು ಕೇಳಿದರು. ಅದಕ್ಕೆ ರೈತ ಇಲ್ಲ ಸ್ವಾಮಿ ನನಗೆ ತಿಳಿಯಲಿಲ್ಲ ಎಂದ. ಯಾಕಪ್ಪಾ ತಿಳಿಯಲಿಲ್ಲ ರೂಲ್ಸ್ ಇದೆಯಲ್ಲಾ, ತಿಳಿದುಕೊಳ್ಳಬೇಡವೇ ಎಂದರೆ ರೈತ ನಿಮ್ಮ ರೂಲ್ಸೆಲ್ಲಾ ಇಂಗ್ಲಿಷಿನಲ್ಲಿದೆ ನಾನೇನು ತಿಳಿದುಕೊಳ್ಳೋದು ಅಂದ. ಸಂಗತಿ ಸಣ್ಣದಾದರೂ ಮಾಸ್ತಿ ಅವರಿಗೆ ನೋವು ಆದದ್ದು ಹೆಚ್ಚು. ಆ ಕ್ಷಣ ಅವನ ಮಾತು ಅವರ ಮೇಲೆ ಪರಿಣಾಮ ಬೀರಿತು. ಅವನು ಹೇಳಿದ ಮಾತಲ್ಲಿ ಸತ್ಯ ಇದೆ. ನಾವು ಸರ್ಕಾರ ಮಾಡುವ ಎಲ್ಲಾ ಕೆಲಸಗಳನ್ನೂ ಇಂಗ್ಲಿಷಿನಲ್ಲಿ ಮಾಡಿದರೆ ಸಾಮಾನ್ಯ ಜನಕ್ಕೆ ತಿಳಿಯುವುದು ಹೇಗೆ. ಇಂಥಾ ಗ್ರಾಮದ ಜನರು ದಿನನಿತ್ಯ ಬೆವರು ಸುರಿಸಿ ಬೆನ್ನು ಮುರಿಯ ದುಡಿದು ಗಳಿಸಿದ ಆರು ಕಾಸಿನಲ್ಲಿ ಮೂರು ಕಾಸನ್ನು ಸರ್ಕಾರಕ್ಕೆ ಕೊಟ್ಟು ನಮಗೆಲ್ಲಾ ಸಂಬಳ ಕೊಡಿಸಿ ಸುಖವಾಗಿ ನೋಡಿಕೊಳ್ಳುತ್ತಾರೆ. ನಾವು ಹೆಸರಿಗೆ ಮಾತ್ರ ಜನತೆಯ ಸೇವಕರು. ನಿಜವಾಗಿ ಸ್ವೇಚ್ಛಾವರ್ತಿ ಚಂಡ ಪ್ರಭುಗಳು. ಇವರಿಗೆ ದಂಡ ಹಾಕಿದ್ದೇವೆ ಎಂದು ನಾನು ಬರೆಯುವ ಆಜ್ಞೆ ಕೂಡಾ ಇಂಗ್ಲಿಷಿನಲ್ಲಿ ಇರುತ್ತದೆ. ಈ ಘಟನೆ ನಮ್ಮ ಆಡಳಿತದಲ್ಲಿ ಕನ್ನಡ ಪ್ರಧಾನವಾಗಿರಬೇಕು ಎನ್ನುವ ಕಕ್ಕುಲಾತಿಯನ್ನು ಮಾಸ್ತಿ ಅವರಲ್ಲಿ ತರಿಸಿತು. ಅಲ್ಲಿಂದ ಮುಂದೆ ಮಾಸ್ತಿಯವರು ಇಂಥಾ ರೈತನ ರೀತಿ ಇರುವ ಜನರ ಬಗೆಗೆ ತಪ್ಪು ತಿಳುವಳಿಕೆ ಮನುಷ್ಯನನ್ನು ದುರ್ಬಲ ಪ್ರಾಣಿಯನ್ನಾಗಿ ಮಾಡುತ್ತದೆ, ಮನಷ್ಯನ ಬಾಳಿನ ಅತ್ಯುನ್ನತ ಸಂಪತ್ತು ಐಶ್ವರ್ಯವಲ್ಲ, ಅಧಿಕಾರವಲ್ಲ, ಜನರ ಜೊತೆಗಿನ ಪ್ರೇಮ ಎಂದುಕೊಂಡವರು ಅವರು ಅಧಿಕಾರದಲ್ಲಿರುವಷ್ಟು ದಿನ ಮತ್ತು ನಿವೃತ್ತರಾಗಿ ಸಾರ್ವಜನಿಕ ಸೇವೆಯಲ್ಲಿರುವಷ್ಟೂ ದಿನವೂ ಜನರ ಪ್ರೇಮದಲ್ಲೇ ಮುಳುಗಿದ್ದರು. ಬಾಳಿನುದ್ದಕ್ಕೂ ಕನ್ನಡದ ಗಾಳಿಯನ್ನೇ ಉಸಿರಾಡಿದ ಮಾಸ್ತಿ ಅವರು ಸುಮಾರು ಐದು ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಗಣನೀಯವಾಗಿ ಕನ್ನಡ ಸೇವೆಯನ್ನು ಮಾಡಿದ್ದಾರೆ. ಕನ್ನಡ ನಾಡಿನ ಪುಣ್ಯದಿಂದಾಗಿ ಮಾಸ್ತಿ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಸದಸ್ಯ ಸಂಖ್ಯೆ ಬೆಳೆಯಿತು, ಪರಿಷತ್ತನ್ನು ಪಂಡಿತ ಸಂಸ್ಥೆ, ಲೇಖಕರ ಸಂಸ್ಥೆಯನ್ನಾಗಿ ಪರಿವರ್ತಿಸಲು ನೃತ್ಯ, ಗೀತ, ನಾಟಕಗಳ ಪುನರುಜ್ಜೀವನಗೊಳಿಸಲು, ಉಪನ್ಯಾಸ ದತ್ತಿಗಳನ್ನು ಸ್ಥಾಪಿಸಲು ಕನ್ನಡ ನಾಡಿನ ಪ್ರತಿಯೊಂದು ಭಾಗದಲ್ಲೂ ಸಂಚಾರ ಮಾಡಿ ಜನರಲ್ಲಿ ಕನ್ನಡ ನಾಡು ನುಡಿ ಕಲೆ ಇತ್ಯಾದಿ ವಿಚಾರಗಳನ್ನು ಅಭಿಮಾನ ಮೂಡಿಸುವ ಮಹತ್ಕಾರ್ಯ ಮಾಡಿದ್ದಾರೆ ಎನ್ನುವುದು ಎಲ್ಲರ ಅಭಿಪ್ರಾಯವಾಗಿತ್ತು. ಜೊತೆಗೆ ಅವರು ಕನ್ನಡ ಲೇಖಕರಿಗೆ ಆಸರೆಯಾಗಿ ಅವರ ಪುಸ್ತಕಗಳನ್ನೂ ಪ್ರಕಟಿಸುವ ಕೆಲಸ ಮಾಡಿದ್ದಾರೆ. ಕನ್ನಡದ ಕೆಲಸಕ್ಕೆ ಒಂದೇ

ದಿಕ್ಕಲ್ಲ ಎಂದು ಅವರು ಹೇಳುತ್ತಿದ್ದರು. ಬೇಂದ್ರೆಯವರೊಂದಿಗೆ, ರಾಜರತ್ನಂ ನವರತ್ನ ರಾಮರಾಯರೊಂದಿಗೆ ಒಳ್ಳೆಯ ಅನುಬಂಧ ಹೊಂದಿದ್ದರು. ಬೇಂದ್ರೆ ಅವರು ಧಾರವಾಡದಲ್ಲಿ 1939ರಲ್ಲಿ ಪ್ರಾರಂಭಮಾಡಿದ್ದ ಜೀವನ ಪತ್ರಿಕೆ ಅಲ್ಲಿ ನಾಲ್ಕು ವರ್ಷ ನಡೆದು ನಂತರ ಬೆಂಗಳೂರಿಗೆ ಬಂದು ಮಾಸ್ತಿಯವರಲ್ಲಿ ನಿಂತಿತು. ಮಾಸ್ತಿ ಅವರು ತಮ್ಮ ಜೀವನದ ಜೊತೆಗೆ ಜೀವನ ಪತ್ರಿಕೆಯನ್ನೂ ಮುನ್ನಡೆಸಿ 21 ವರ್ಷಗಳ ಕಾಲ ನಡೆಸಿ ಅದನ್ನು ಐದು ಜನ ಸ್ನೇಹಿತರಿಗೆ ಹಸ್ತಾಂತರಿಸಿದರು. ಚಿಕ್ಕಮಗಳೂರಿನಲ್ಲಿ ಮಾಸ್ತಿ ಇದ್ದಾಗ ಕೈಲಾಸಂ ಅವರ ಮನೆಗೆ ಬಂದಿದ್ದರು. ಸಮಾರು ಒಂದೂವರೆ ತಿಂಗಳು ಅವರಲ್ಲಿ ಅತಿಥಿಯಾಗಿದ್ದರಂತೆ. ಕೆಲಸ ಮಾಡಿದ್ದಕ್ಕಷ್ಟೇ ಗೌರವಧನ ಎನ್ನುವ ಪರಿಪಾಠವನ್ನಿಟ್ಟುಕೊಂಡಿದ್ದ ಮಾಸ್ತಿ ಅವರು ಪತ್ರಿಕೆಯೊಂದು ಅವರು ಬರೆದ ಮೂರು ಲೇಖನಗಳಿಗೆ ತಿಂಗಳ ಲೆಕ್ಕದಲ್ಲಿ ನಾಲ್ಕು ಲೇಖನಗಳಿಗೆ ಸಂಭಾವನೆ ಕೊಟ್ಟಿದ್ದರು. ಆ ಚೆಕ್ಕನ್ನು ಹಿಂದಿರುಗಿಸಿ ನಾನು ಬರೆದಿರುವುದು ಮೂರೇ ಲೇಖನ ಅದಕ್ಕೆ ತಕ್ಕ ಸಂಭಾವನೆ ಕಳಿಸಿದರೆ ಸಾಕು ಎಂದಿದ್ದರು. ಕನ್ನಡವೇ ನನ್ನುಸಿರು, ಕನ್ನಡವೇ ನಮ್ಮಮ್ಮ ಎನ್ನುವ ಘೋಷಣೆಗಳನ್ನು ಮಾಸ್ತಿ ಮಾಡದಿದ್ದರೂ ಹಾಗೆ ನಡೆದುಕೊಂಡರು. ಒಮ್ಮೆ ಮಿತ್ರರ ಸಂತೋಷಕೂಟದಲ್ಲಿದ್ದಾಗ ಒಬ್ಬರು ಮಾಸ್ತಿಯವರನ್ನು ನೋಡಿ ಇವರು ಇಂಗ್ಲಿಷಿನಲ್ಲಿ ಎಂ. ಎ. ಮಾಡಿ ಕನ್ನಡದಲ್ಲಿ ಕಥೆ ಬರೆಯುತ್ತಾರೆ ಎನ್ನುವ ಭಾವ ಪ್ರಕಟಿಸಿದ್ದರಂತೆ. ಅದಕ್ಕೆ ಮಾಸ್ತಿ ಅದು ಅವರ ತಪ್ಪಲ್ಲ, ಕಾಲ ಹಾಗಿತ್ತು ಎನ್ನುತ್ತಾರೆ. ಇನ್ನೊಬ್ಬರು ಲಕ್ಷ್ಮೀಪತಿ ಎನ್ನುವವರು ಮ್ಯಾಥಮ್ಯಾಟಿಕ್ಸ್‌ನಲ್ಲಿ ಬಿ.ಎ. ಮಾಡಿ ಕನ್ನಡದಲ್ಲಿ ಕಥೆ ಬರೆದಿದ್ದರಂತೆ. ಅದಕ್ಕೆ ಅವರ ಬಂಧುಗಳು ಇವನಿಗೇನು ಬಂತು ಬಿ.ಎ. ಪ್ಯಾಸ್ ಮಾಡಿ ಕನ್ನಡದಲ್ಲಿ ಕಥೆ ಬರೆದಿದ್ದಾನೆ ಇವನಿಗೇನು ಬಂತು ತೆವಲು ಎಂದಿದ್ದರಂತೆ. ಅದಕ್ಕೆ ಮಾಸ್ತಿ ಅವರು ಅವರ ಅಭಿಪ್ರಾಯವೂ ಸರಿಯೇ ಇರಬಹುದು, ಲಕ್ಷ್ಮೀಪತಿ ಅವರ ಮನೆಯ ಮಾತು ತೆಲುಗು, ನನ್ನ ಮನೆಯ ಮಾತು ತಮಿಳು, ಆದರೆ ನಾವಿಬ್ಬರೂ ಕನ್ನಡದಲ್ಲಿ ಕಥೆ ಬರೆದಿದ್ದು ನೋಡುವವರಿಗೆ ಅಚ್ಚರಿಯಾಗಿ ಕಂಡಿರಬಹುದು ಎನ್ನುತ್ತಾರೆ. ಇನ್ನು ಮಾಸ್ತಿ ಅವರು ತಮ್ಮ ಬಗ್ಗೆ ಹೇಳಿಕೊಂಡಿರುವ ಮಾತೂ ಮಾರ್ಮಿಕವಾಗಿದೆ. ಮಾಸ್ತಿ ಎಂಬ ಹಳ್ಳಿಯಲ್ಲಿ ಒಂದು ಮಗು ಹುಟ್ಟಿತು. ಶಿಲ್ಪಿಗಳ ಶಿಲ್ಪಿ, ದೇವದೇವ, ಶಿವನೋ ಕೇಶವನೋ ಈ ಮಗುವನ್ನು ಕಂಡು ಹರಸಿದ. ಈ ಮಗುವಿನೊಳಗಿನ ದೇವತ್ವವನ್ನು ಹೊರಗೆಡಹಿದ. ದೇವರು ನಡೆಸಿದ ಆ ಕೂಸು ಮಾಸ್ತಿ ಎಂಬ ಎರಡಕ್ಷರಗಳಿಗೆ ಮಂತ್ರಶಕ್ತಿಯನ್ನು ಕೊಟ್ಟಿತು. ತನ್ನ ಬುದ್ಧಿಯಿಂದ, ಭಾವದಿಂದ, ಕೌಶಲದಿಂದ ಅಸ್ತಿತ್ವದಿಂದ ಸರ್ವಶರಣ್ಯ ಭಾವದಿಂದ ಬೆಳಗಿತು. ಮಾಸ್ತಿಯವರ ಮಿತ್ರರೊಬ್ಬರು ಮಾಸ್ತಿ ದೊಡ್ಡವರೋ ಅವರ ಸಾಹಿತ್ಯ ದೊಡ್ಡದೋ ಎಂದು ಕೇಳಿದರಂತೆ. ಅದಕ್ಕೆ ಮತ್ತೊಬ್ಬರು ಕೊಟ್ಟ ಉತ್ತರ ಮಾಸ್ತಿಯವರು ದೊಡ್ಡವರು ಅದಕ್ಕೇ ಅವರು ಕೊಟ್ಟ ಸಾಹಿತ್ಯವೂ ದೊಡ್ಡದಾಗಿದೆ ಎಂದರು. ಸತ್ಯವಾದ ಮಾತು. ಅದಕ್ಕೇ ಮಾಸ್ತಿ ಕನ್ನಡದ ಆಸ್ತಿ ಎನ್ನುವುದು. ■

### ಒಂದು ವಿನಮ್ರ ವಿನಂತಿ

ಅನೇಕ ಚಂದಾದಾರರು ಅಪರಂಜಿಯ ಚಂದಾ ಹಣವನ್ನು ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರುವುದಕ್ಕೆ ಅಪರಂಜಿ ಅವರೆಲ್ಲರಿಗೂ ಆಭಾರಿ. ಈ ನಿಟ್ಟಿನಲ್ಲಿ ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ. ತಾವು ಬ್ಯಾಂಕ್ ಖಾತೆಯ ಮೂಲಕ ಚಂದಾ ನವೀಕರಿಸುವಾಗ, ಬ್ಯಾಂಕ್ ವಹಿವಾಟಿನ ವಿವರ, ನಿಮ್ಮ ಚಂದಾ ಸಂಖ್ಯೆ, ಹೆಸರು ಮತ್ತು ಈಗಿನ ವಿಳಾಸ ಇವುಗಳನ್ನು ನಮಗೆ ಜಿಮೇಲ್ ಅಥವಾ ವಾಟ್ಸಪ್ ಮೂಲಕ ತಕ್ಷಣವೇ ಕಳಿಸಿ. ಇದರಿಂದ ರಸೀತಿ ಕಳಿಸುವ ಕಾರ್ಯ ಸುಗಮವಾಗುತ್ತದೆ. ನಿಮ್ಮ ಸಹಕಾರಕ್ಕೆ ಅಪರಂಜಿ ಆಭಾರಿ.